ಸೋಮವಾರ, ಮಾರ್ಚ್ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 80 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

‘ಪರಿಸರ ವಿಜ್ಞಾನ’ ವಿಷಯದಲ್ಲಿ ಡಿಪ್ಲೊಮಾದಿಂದ ಹಿಡಿದು ಸ್ನಾತಕೋತ್ತರ ಪದವಿವರೆಗೆ ವಿವಿಧ ರೀತಿಯ ಕೋರ್ಸ್‌ಗಳಿವೆ. ಈ ಕೋರ್ಸ್ ಮತ್ತು ಉದ್ಯೋಗಾವಕಾಶಗಳ ಕುರಿತ ಮಾಹಿತಿ ಇಲ್ಲಿದೆ.

ವಿಕ್ಟರ್ ಚಾಂಪಿಯನ್; ಲಕ್ಷ್ಯ ರನ್ನರ್ ಅಪ್ 13

‘ಆಸನಿ’ ಚಂಡಮಾರುತ: ರಾಜ್ಯಕ್ಕಿಲ್ಲ ಅಪಾಯ-ಹವಾಮಾನ ಇಲಾಖೆ

ಅನುಭವ ಮಂಟಪ — ತಪ್ಪುಗಳನ್ನು ಸರಿಪಡಿಸಲು ಇದು ಸಕಾಲ

ಮಣಿಪುರ: ಎರಡನೇ ಅವಧಿಗೆ ಬಿರೆನ್ ಸಿ.ಎಂ 10

ರಾಜ್ಯದಲ್ಲಿ ಇದೇ 24ರವರೆಗೆ ಮಳೆ 5

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

‘ಮಹಿಳೆಯರಿಗಾಗಿ ವಿವಿಧೋದ್ದೇಶ ಸಹಕಾರಿ ಸಂಘ’ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೇಮಕಾತಿ, ಬಡ್ತಿ, ಖರೀದಿ, ಕಾಮಗಾರಿಯಲ್ಲಿ ಅಕ್ರಮ – ಅವ್ಯವಹಾರ

‘ಆರೋಗ್ಯ’ಕ್ಕೆ ಲಂಚದ ‘ವೈರಸ್’

• ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ ನೇಮಕಾತಿ, ಬಡ್ತಿ–ವರ್ಗಾವಣೆಯಿಂದ ಆರಂಭಿಸಿ ವೈದ್ಯಕೀಯ ಉಪಕರಣ, ಔಷಧ ಖರೀದಿವರೆಗೆ, ಕಟ್ಟಡಗಳ ನಿರ್ಮಾಣ ಕಾಮಗಾರಿಯಿಂದ ಮೂಲ ಸೌಕರ್ಯ ಕಲ್ಪಿಸುವವರೆಗಿನ ‘ಬ್ರಹ್ಮಾಂಡ ಭ್ರಷ್ಟಾಚಾರ’ ಅಂಗೈ ಮೇಲಿನ ಹುಣ್ಣಿನಂತೆ ಎದ್ದು ಕಾಣಿಸುತ್ತಿದೆ. ಇದನ್ನು ನೋಡಲು ತನಿಖೆಯಂತಹ ಕನ್ನಡಿಯೇ ಬೇಕೆಂದೇನಿಲ್ಲ.

ಇನ್ನು ವೈದ್ಯಕೀಯ ಮಹಾ ವಿದ್ಯಾಲಯ, ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ, ತಳಮಟ್ಟದ ನೌಕರರ ಕೈಗೆ ಲಂಚ ನೀಡದೆ ಯಾವ ಕೆಲಸವೂ ಸಾಧ್ಯವಿಲ್ಲ. ರೋಗಿಯಾಗಿ ಹೋದರೂ, ರೋಗಿಯನ್ನು ನೋಡಲು ಹೋಗುವುದಾದರೂ ಲಂಚ ಕೊಡಲೇಬೇಕು. ಅಷ್ಟೇಕೆ, ಆಸ್ಪತ್ರೆಯಿಂದ ಮೃತದೇಹ ಹೊರತರಬೇಕೆಂದರೂ ‘ಖುಷಿ’ (ಲಂಚ) ಹಂಚಲೇಬೇಕು.

ಆರೋಗ್ಯ– ವೈದ್ಯಕೀಯ ಇಲಾಖೆಯಲ್ಲಿ ನಡೆಯುತ್ತಿರುವ ಈ ಅಕ್ರಮ, ಅವ್ಯವಹಾರಕ್ಕೆ ಅಧಿಕಾರಿಗಳು, ಕೆಲವು ಮಧ್ಯವರ್ತಿಗಳು ನೇರ ಕಾರಣ. ಇಲಾಖೆಯ ಹೊಣೆ ಹೊತ್ತವರ ನೆರಳಿನಡಿಯಲ್ಲಿ ಈ ಎಲ್ಲ ‘ವ್ಯವಹಾರ’ಗಳು ನಡೆಯುತ್ತವೆ ಎಂಬ ಆರೋಪಗಳು ಇಲಾಖೆಯ ಒಳಗಿನಿಂದಲೇ ಕೇಳಿ ಬರುತ್ತಿದೆ. ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ವೈದ್ಯಕೀಯ ಉಪಕರಣ, ಔಷಧಿ ಖರೀದಿಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಆರೋಪಿಸಿ, ನಿವೃತ್ತ ಜಿಲ್ಲಾ ವೈದ್ಯಾಧಿಕಾರಿಯೂ ಆಗಿರುವ ಆಡಳಿತ ಪಕ್ಷವಾದ ಬಿಜೆಪಿಯ ಮಾಜಿ ಶಾಸಕ ಡಾ. ಸಾರ್ವಭೌಮ ಬಗಲಿ ಒಬ್ಬರೇ ಲೋಕಾಯುಕ್ತಕ್ಕೆ 40 ದೂರು ನೀಡಿದ್ದಾರೆ.

6ನೇ ಪುಟ ನೋಡಿ

ಭಾವು ಪತ್ತಾರ್

‘ಲಂಚಮುಕ್ತ, ಉತ್ತರದಾಯಿಯಾಗಿಸಲು ಕ್ರಮ’

‘ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತದಲ್ಲಿ ಭ್ರಷ್ಟಾಚಾರ ಮುಕ್ತಗೊಳಿಸಿ ಗುಣಮಟ್ಟದ ಸೇವೆ ನೀಡಲು ಸಾಕಷ್ಟು ಕ್ರಮಗಳನ್ನು ತೆಗೆದುಗೊಳ್ಳಲಾಗಿದೆ. ಮೊದಲ ಬಾರಿಗೆ ಎರಡೂವರೆ ಸಾವಿರಕ್ಕೂ ಹೆಚ್ಚಿನ ವೈದ್ಯರು ಮತ್ತು ತಜ್ಞರ ನೇಮಕ ಮಾಡಲಾಗಿದೆ’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ. 6

ಭ್ರಷ್ಟಾಚಾರ ಜನರಿಗೆ ಪ್ರಹಾರ

ಆರೋಗ್ಯ– ವೈದ್ಯಕೀಯ ‘ಲಂಚ’ ರೂಪ

ಯಾವ ಹುದ್ದೆಗೆ ಎಷ್ಟು ಲಂಚ? (₹ಗಳಲ್ಲಿ)

ಹುದ್ದೆ	ಲಂಚ
ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿ	25 ಲಕ್ಷ
ಜಿಲ್ಲಾಸ್ಪತ್ರೆ ಸರ್ಜನ್	25 ಲಕ್ಷ
ಆರೋಗ್ಯ ಇಲಾಖೆ ನಿರ್ದೇಶಕ	1 ಕೋಟಿ
ಆರೋಗ್ಯ ಇಲಾಖೆಯ ಆಯುಕ್ತ	5 ಕೋಟಿ
ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕ	1 ಕೋಟಿ

ವೈದ್ಯಕೀಯ ಕಾಲೇಜು ನೇಮಕಾತಿಗೆ ಲಂಚ

ಸಹಾಯಕ ಪ್ರಾಧ್ಯಾಪಕ	15- 25 ಲಕ್ಷ
ಸಹ ಪ್ರಾಧ್ಯಾಪಕ	25-30 ಲಕ್ಷ
ಪ್ರಾಧ್ಯಾಪಕ	35- 40 ಲಕ್ಷ

ಇನ್ನೊಂದು ಸುದ್ದಿ 6

ಹಿಜಾಬ್ ವಿಚಾರವಾಗಿ ತೀರ್ಪು: ಕೊಲೆ ಬೆದರಿಕೆ

ನ್ಯಾಯಮೂರ್ತಿಗಳಿಗೆ ‘ವೈ’ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಜಾಬ್ ವಿಚಾರವಾಗಿ ತೀರ್ಪು ನೀಡಿರುವ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಇಬ್ಬರು ನ್ಯಾಯಮೂರ್ತಿಗಳಿಗೆ ತಮಿಳುನಾಡಿನಲ್ಲಿ ಕೊಲೆ ಬೆದರಿಕೆ ಹಾಕಿದ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ನ್ಯಾಯಮೂರ್ತಿಗಳಿಗೆ ಈಗಿರುವ ಭದ್ರತೆಯ ಜೊತೆಗೆ ‘ವೈ’ ಕೆಟಗರಿ ಭದ್ರತೆ ನೀಡಲು ತೀರ್ಮಾನಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಈ ರೀತಿಯ ಬೆದರಿಕೆಯ ಮೂಲಕ ಕೆಲವು ದೇಶದ್ರೋಹಿ ಶಕ್ತಿಗಳು ಈ ದೇಶದ ವ್ಯವಸ್ಥೆಗೆ ಸವಾಲು ಹಾಕುವ ಪ್ರಯತ್ನ ಮಾಡಿವೆ. ಇಂತಹ ದೇಶದ್ರೋಹಿ ಶಕ್ತಿಗಳನ್ನು ಸಹಿಸುವುದಿಲ್ಲ’ ಎಂದರು.

6ನೇ ಪುಟ ನೋಡಿ

ಡೀಸೆಲ್ ಸಗಟು ದರ ಲೀಟರಿಗೆ ₹ 25 ಏರಿಕೆ

ನವದೆಹಲಿ: ಬಸ್, ಲಾರಿ, ಕೈಗಾರಿಕೆಗಳಿಗೆ ಸಗಟು ಲೆಕ್ಕದಲ್ಲಿ ಡೀಸೆಲ್ ಖರೀದಿಸುವವರಿಗೆ ಪ್ರತಿ ಲೀಟರ್‌ಗೆ ಬೆಲೆಯನ್ನು ₹ 25 ರಷ್ಟು ಹೆಚ್ಚಿಸಲಾಗಿದೆ. ಆದರೆ, ಪೆಟ್ರೋಲ್ ಪಂಪ್‌ಗಳಲ್ಲಿನ ರಿಟೇಲ್ ಮಾರಾಟ ದರದಲ್ಲಿ ಬದಲಾವಣೆ ಆಗಿಲ್ಲ ಎಂದು ಮೂಲಗಳು ಹೇಳಿವೆ. 12

ಉಕ್ರೇನ್: ಕಿಂಜಾಲ್ ಹೈಪರ್‌ಸಾನಿಕ್, ಕಲಿಬ್ ಕ್ಷಿಪಣಿ ದಾಳಿ

ಮಾಸ್ಕೊ, ಲುವಿವ್ (ಎಪಿ): ಉಕ್ರೇನ್ ಮೇಲೆ ಭಾನುವಾರ ಮತ್ತೆ ‘ಕಿಂಜಾಲ್’ ಮತ್ತು ಕ್ರೂಸ್ ಕ್ಷಿಪಣಿಗಳ ಸರಣಿ ದಾಳಿಯನ್ನು ರಷ್ಯಾ ಮುಂದುವರಿಸಿದೆ. ಸುಮಾರು 400 ಜನರು ಆಶ್ರಯ ಪಡೆದಿದ್ದ ಉಕ್ರೇನಿನ ಮರಿಯುಪೊಲ್ ನಗರದ ಕಲಾ ಶಾಲೆಯ ಕಟ್ಟಡ, ಪ್ರಮುಖ ಇಂಧನ ಸಂಗ್ರಹಾಗಾರ ಹಾಗೂ ಸೇನಾ ನೆಲೆಗಳನ್ನು ನಾಶಪಡಿಸಿದೆ. 10

‘ಕನ್ನಡ ಚಳವಳಿಯ ದಿಕ್ಕು ಬದಲಾಗಲಿ’



ಪ್ರೊ.ಜಿ. ಅಶ್ವತ್ಥನಾರಾಯಣ

ಬೆಂಗಳೂರು: ‘ಕನ್ನಡ ಭಾಷೆಯಲ್ಲಿ ವಿಶ್ವಕ್ಕೆ ಬೇಕಾದ ಅಪಾರ ಜ್ಞಾನ ಸಂಪತ್ತಿದೆ. ಅದನ್ನು ಬೇರೆ ಭಾಷೆಗಳಿಗೆ ತಲುಪಿಸುವ ಕೆಲಸವಾಗಬೇಕು’ ಎಂದು ಸಾಹಿತಿ ಪ್ರೊ.ಜಿ.ಅಶ್ವತ್ಥನಾರಾಯಣ ಭಾನುವಾರ ಅಭಿಪ್ರಾಯಪಟ್ಟರು.

ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ಹಮ್ಮಿಕೊಂಡಿದ್ದ ‘ಕನ್ನಡ ಬಾವುಟ ಹಾರಿಸಿದವರು ಉಪನ್ಯಾಸ ಮಾಲೆ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕನ್ನಡ ಭಾಷೆಯ ಉಳಿವು ಹಾಗೂ ಬೆಳವಣಿಗೆಗೆ ಚಳವಳಿಯ ದಿಕ್ಕು ಬದಲಾಗಬೇಕು. ರಾ.ಹ.ದೇಶಪಾಂಡೆ, ಅನ್ನದಾನಪ್ಪ ದೊಡ್ಡಮೇಟಿ, ಮ.ರಾಮಮೂರ್ತಿ, ಶಾಂತವೇರಿ ಗೋಪಾಲಗೌಡ ಅವರೂ ಹಿಂದೆ ಭಾಷೆಗಾಗಿ ಹೋರಾಟ ನಡೆಸಿದ್ದರು. ಅವರು ಶ್ರಮಿಸಿದ ಮಾರ್ಗವನ್ನು ಇಂದಿನ ಚಳವಳಿಗಾರರು ಅನುಸರಿಸಬೇಕು’ ಎಂದರು.

‘ಕರ್ನಾಟಕಕ್ಕೆ ವಲಸೆ ಬಂದಿರುವವರಿಗೆ ಕನ್ನಡ ಕಲಿಸುವ ಕೆಲಸ ಆಗಬೇಕು. ಈ ಬಗ್ಗೆ ಸರ್ಕಾರ, ಕನ್ನಡ ಹೋರಾಟಗಾರರು ಚಿಂತನೆ ನಡೆಸಬೇಕು’ ಎಂದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ, ಶಾಸನ ತಜ್ಞ ಡಾ.ಆರ್.ಶೇಷಶಾಸ್ತ್ರಿ, ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ ಮತ್ತಿತರರು ಇದ್ದರು.

ವಾತಾವರಣ ದೂಳುಮಯ, ಅಗೆದ ರಸ್ತೆಯನ್ನು ಮುಚ್ಚುವುದು ಯಾವಾಗ– ಸ್ಥಳೀಯರ ಪ್ರಶ್ನೆ

ಬೊಮ್ಮನಹಳ್ಳಿ: ಗುಂಡಿಗಳ ನಡುವೆ ರಸ್ತೆ!

• ಲಿಂಗರಾಜು

ಬೊಮ್ಮನಹಳ್ಳಿ: ಕಾಮಗಾರಿಗಳ ಸಲುವಾಗಿ ಅಲ್ಲಲ್ಲಿ ಅಗೆದ ರಸ್ತೆಗಳು, ವಾತಾವರಣದ ತುಂಬೆಲ್ಲಾ ದೂಳು. ಇದು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಿವಾಸಿಗಳ ನಿತ್ಯದ ಗೋಳು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಾವೇರಿ ನೀರು ಪೂರೈಕೆ ಕೊಳವೆಮಾರ್ಗ ಹಾಗೂ ಒಳಚರಂಡಿ ಕೊಳವೆಗಳ ಅಳವಡಿಕೆಗಾಗಿ ಜಲಮಂಡಳಿಯವರು ರಸ್ತೆಗಳನ್ನು ಅನೇಕ ಕಡೆ ಅಗೆದಿದ್ದಾರೆ. ನೆಲದಡಿಯಲ್ಲಿ ವಿದ್ಯುತ್ ಕೇಬಲ್‌ಗಳನ್ನು ಅಳವಡಿಸುವುದಕ್ಕೆ ಬೆಸ್ಕಾಂ ವತಿಯಿಂದಲೂ ರಸ್ತೆಗಳನ್ನು ಅಲ್ಲಲ್ಲಿ ಅಗೆಯಲಾಗಿದೆ. ಇದರಿಂದ ಈ ಪ್ರದೇಶದ ವಾತಾವರಣ ದೂಳುಮಯವಾಗಿದೆ. ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿದೆ ಎಂದು ದೂರುತ್ತಿದ್ದಾರೆ ಸಾರ್ವಜನಿಕರು.

ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ರಸ್ತೆಗಳನ್ನು ಅಗೆಯುವುದು ಅನಿವಾರ್ಯ. ಆದರೆ, ರಸ್ತೆ ಅಗೆಯುವುದಕ್ಕೆ ತೋರಿಸುವಷ್ಟೇ ಉತ್ಸಾಹವನ್ನು, ಗುಂಡಿ ಮುಚ್ಚುವ ವಿಚಾರದಲ್ಲೂ ತೋರಿಸಬೇಕಲ್ಲವೇ ಎಂಬುದು ಸ್ಥಳೀಯ ನಿವಾಸಿಗಳ ಪ್ರಶ್ನೆ.

ಅತಿ ಹೆಚ್ಚು ಸಂಚಾರ ದಟ್ಟಣೆ ಇರುವ, ಕಿರಿದಾದ ಬೇಗೂರು ರಸ್ತೆಯಲ್ಲಿ ಜಲಮಂಡಳಿಯು ಒಳಚರಂಡಿ ಮಾರ್ಗಕ್ಕಾಗಿ ರಸ್ತೆ ಅಗೆದಿದೆ. ಇಲ್ಲಿನ ರಸ್ತೆಗಳಲ್ಲಿ ಸಂಚರಿಸುವುದೇ ದುಸ್ತರವಾಗಿಬಿಟ್ಟಿದೆ. ವಾಹನ ದಟ್ಟಣೆ ವಿಪರೀತ ಹೆಚ್ಚಾಗಿದೆ. ಜೊತೆಗೆ ದೂಳಿನ ಸಿಂಚನವೂ ಇಲ್ಲಿ ತಪ್ಪಿದ್ದಲ್ಲ.

ಗಾರ್ವೆಬಾವಿಪಾಳ್ಯದಲ್ಲಿ ಬೆಸ್ಕಾಂ ಕಾಮಗಾರಿ ಸಲುವಾಗಿ ರಸ್ತೆ ಅಗೆದಿರುವುದು

ಕೆಲ ಖಾಸಗಿ ಕಂಪನಿಗಳು ಆಪ್ಟಿಕ್ ಫೈಬರ್ ಕೇಬಲ್ (ಒಎಫ್‌ಸಿ) ಅಳವಡಿಕೆಗಾಗಿಯೂ ಅಲ್ಲಲ್ಲಿ ರಸ್ತೆ ಅಗೆದಿವೆ. ಕೆಲಸ ಮುಗಿಸಿದ ನಂತರ, ರಸ್ತೆಯನ್ನು ದುರಸ್ತಿಗೊಳಿಸದೆ ಹಾಗೇ ಬಿಟ್ಟಿವೆ ಎಂಬ ದೂರುಗಳೂ ಇವೆ. ಅನುಮತಿ ಪಡೆಯದೆಯೇ ರಸ್ತೆಗಳನ್ನು ಅಗೆದಿದ್ದರೂ ಅಂತಹ ಕಂಪನಿಗಳ ವಿರುದ್ಧ ಬಿಬಿಎಂಪಿ ಕ್ರಮಕೈಗೊಂಡಿಲ್ಲ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಲೂ ಮುಂದಾಗಿಲ್ಲ ಎನ್ನುತ್ತಾರೆ ಸ್ಥಳೀಯರು.

‘ರಸ್ತೆ ಗುಂಡಿಗಳನ್ನು ಮುಚ್ಚಿ ಎಂದು ಬಿಬಿಎಂಪಿಗೆ ಹೈಕೋರ್ಟ್ ಪದೇ ಪದೇ ತಾಕೀತು ಮಾಡುತ್ತಲೇ ಇದೆ. ಇನ್ನೊಂದೆಡೆ ರಸ್ತೆಗಳನ್ನು ಅಗೆದು, ಹಾಗೆ ಬಿಟ್ಟು ಹೋಗುವ ಪರಿಪಾಟ ಹೆಚ್ಚಾಗುತ್ತಲೇ ಸಾಗುತ್ತಿದೆ. ಇದು ದುರದೃಷ್ಟಕರ’ ಎನ್ನುತ್ತಾರೆ ಗಾರ್ವೆಬಾವಿಪಾಳ್ಯ ನಿವಾಸಿ ಕನಕರಾಜ್.

‘ಒಳಚರಂಡಿ ಕೊಳವೆ ಅಳವಡಿಕೆಗಾಗಿ ರಸ್ತೆ ಅಗೆದರು. ಕಾಮಗಾರಿ ಮುಗಿದರೂ ರಸ್ತೆಗಳನ್ನು ಇನ್ನೂ ಸರಿಪಡಿಸಿಲ್ಲ. ಇದರಿಂದಾಗಿ ಮನೆಯೊಳಗೆ ದೂಳು ತುಂಬಿಕೊಳ್ಳುತ್ತಿದೆ. ರಸ್ತೆಯನ್ನು ಆದಷ್ಟು ಬೇಗ ದುರಸ್ತಿ ಮಾಡಿದರೆ ನಾವು ತುಸು ನೆಮ್ಮದಿಯಿಂದ ಉಸಿರಾಡಬಹುದು’ ಎನ್ನುತ್ತಾರೆ ಚಿಕ್ಕಬೇಗೂರು ಗೇಟ್ ನಿವಾಸಿ ಕೆ.ಸಿ.ಪ್ರತಾಪ್.

‘ಕಾಮಗಾರಿಗಾಗಿ ರಸ್ತೆ ಅಗೆಯುವ ಮುನ್ನವೇ ಬೆಸ್ಕಾಂ, ಜಲಮಂಡಳಿಯವರು ಬಿಬಿಎಂಪಿಯಿಂದ ಅನುಮತಿ ಪಡೆದುಕೊಳ್ಳುತ್ತಾರೆ. ರಸ್ತೆಯನ್ನು ಮತ್ತೆ ಮೊದಲಿನ ಸ್ಥಿತಿಗೆ ತರುವ ವೆಚ್ಚವನ್ನೂ ಅವರೇ ಭರಿಸುತ್ತಾರೆ. ಒಎಫ್‌ಸಿ ಅಳವಡಿಸಲು ರಸ್ತೆ ಅಗೆಯುವ ಮುನ್ನ ಖಾಸಗಿ ಕಂಪನಿಗಳು ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಬೇಕು. ಒಎಫ್‌ಸಿ ಅಳವಡಿಕೆಗೆ ರಸ್ತೆ ಅಗೆದರೆ ಅದನ್ನು ದುರಸ್ತಿಗೊಳಿಸುವ ಜವಾಬ್ದಾರಿಯೂ ಅವರದ್ದೇ ಆಗಿರುತ್ತದೆ’ ಎನ್ನುತ್ತಾರೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಶಶಿಕುಮಾರ್.

ಈ ಕುರಿತು ಪ್ರತಿಕ್ರಿಯಿಸಿದ ಶಾಸಕ ಸತೀಶ್ ರೆಡ್ಡಿ, ‘ಬೆಸ್ಕಾಂ ಹಾಗೂ ಜಲಮಂಡಳಿಯವರು ಕೈಗೊಂಡಿರುವ ಕಾಮಗಾರಿ ಇನ್ನೂ ಕೆಲವೆಡೆ ಪ್ರಗತಿಯಲ್ಲಿದೆ. ಎಲ್ಲ ಕಾಮಗಾರಿಗಳು ಪೂರ್ಣಗೊಂಡ ಕೂಡಲೇ ರಸ್ತೆ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುತ್ತೇವೆ’ ಎಂದು ಭರವಸೆ ನೀಡಿದರು.

ಬೊಮ್ಮನಹಳ್ಳಿ ಕ್ಷೇತ್ರ: ಜನಸ್ಪಂದನ 26ರಂದು

ಜನಸ್ಪಂದನ ಸಿಟಿಜನ್ಸ್ ಫಾರ್ ಚೇಂಜ್

ಬೆಂಗಳೂರು: ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಇದೇ 26ರಂದು ಜೆ.ಪಿ. ನಗರ ಆರನೇ ಹಂತದ ಗಣೇಶ ದೇವಸ್ಥಾನ ಮೈದಾನದಲ್ಲಿ ‘ಜನ ಸ್ಪಂದನ’ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಶಾಸಕ ಎಂ.ಸತೀಶ ರೆಡ್ಡಿ, ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಸ್ಥಳ: ಗಣೇಶ ಮೈದಾನ, 186, ಪುಟ್ಟೇನಹಳ್ಳಿ ರಸ್ತೆ, ಕೆ.ಆರ್. ಬಡಾವಣೆ, ಜೆ.ಪಿ.ನಗರ ಆರನೇ ಹಂತ, ಬೆಂಗಳೂರು–78

ಸಂಪರ್ಕ: 9448528998

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮ ಜಾರಿ: ಬಿ.ಸಿ. ನಾಗೇಶ್

ಬೆಂಗಳೂರು: ‘ಮಕ್ಕಳಲ್ಲಿ ಕಲಿಕಾ ಹಿನ್ನಡೆ ಸರಿದೂಗಿಸಲು ಕಲಿಕಾ ಚೇತರಿಕೆ ಎಂಬ ವಿಶೇಷ ಕಾರ್ಯಕ್ರಮ ರೂಪಿಸಲಾಗಿದೆ. ದೇಶದಲ್ಲೇ ಇಂತಹ ಕಾರ್ಯಕ್ರಮ ಜಾರಿಗೊಳಿಸುತ್ತಿರುವ ಮೊದಲ ರಾಜ್ಯ ನಮ್ಮದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಜಯನಗರದಲ್ಲಿರುವ ಆರ್.ವಿ. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ‘ಕಲಿಕಾ ಚೇತರಿಕೆ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಕೋವಿಡ್ ಸೋಂಕು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಬಹುದೊಡ್ಡ ಪೆಟ್ಟು ನೀಡಿದೆ. ಕೇಂದ್ರ ಮತ್ತು ರಾಜ್ಯ ಶಿಕ್ಷಣ ಇಲಾಖೆಗಳು ನಡೆಸಿದ ಸಮೀಕ್ಷೆಯಿಂದ ಮಕ್ಕಳಲ್ಲಿ ಕಲಿಕಾ ಹಿನ್ನಡೆ ಭಾರಿ ಪ್ರಮಾಣದಲ್ಲಿ ಕಂಡುಬಂದಿದೆ. ಅದರ ಗಂಭೀರತೆ ಅರಿತು 2022ರ ಶೈಕ್ಷಣಿಕ ವರ್ಷವನ್ನು ‘ಕಲಿಕಾ ಚೇತರಿಕೆ ವರ್ಷ’ ಎಂದು ಘೋಷಿಸಿ, ಕಲಿಕೆಗೆ ಹೆಚ್ಚಿನ ಒತ್ತು ನೀಡಲು ಉದ್ದೇಶಿಸಲಾಗಿದೆ’ ಎಂದರು.



‘ಕೋವಿಡ್‌ನಿಂದ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಸಮಸ್ಯೆಯಾಗಿದೆ. ಶಿಕ್ಷಣ ಇಲಾಖೆಯಲ್ಲೂ ಸವಾಲುಗಳಿವೆ. ಮಕ್ಕಳು ಮಾತ್ರವಲ್ಲ ಶಿಕ್ಷಕರೂ ಬರವಣಿಗೆ ಮೇಲಿನ ಹಿಡಿತ ಕಳೆದುಕೊಂಡಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ಕೈ ಬರಹ, ಬರವಣಿಗೆ ಸುಧಾರಣೆ ಅಗತ್ಯವಿದೆ’ ಎಂದರು.

ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಇಲಾಖೆ ಆಯುಕ್ತ ಡಾ. ವಿಶಾಲ್. ಆರ್, ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರಾದ ಎಂ. ದೀಪಾ ಮತ್ತು ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ರಿಷಿಕೇಶ್ ಇದ್ದರು. ಕಲಿಕಾ ಚೇತರಿಕೆ ಕಾರ್ಯಕ್ರಮಕ್ಕೆ ಸಂಬಂಧಿಸಿದ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅಗತ್ಯವಾದ ಸಂಪನ್ಮೂಲ ಸಾಹಿತ್ಯವನ್ನು ಬಿಡುಗಡೆ ಮಾಡಲಾಯಿತು.

‘ಜಕರಂದ ಕಥೆಗಳು’ ಚಲನಚಿತ್ರೋತ್ಸವ 23ರಿಂದ

ಬೆಂಗಳೂರು: ಬೆಂಗಳೂರು ಫಿಲ್ಮ್ ಸೊಸೈಟಿಯು ಮಹಿಳೆ ಮತ್ತು ಪ್ರಕೃತಿ ಆಧರಿತ ‘ಜಕರಂದ ಕಥೆಗಳು’ ಚಲನಚಿತ್ರೋತ್ಸವವನ್ನು ಇದೇ 23ರಿಂದ 26ರವರೆಗೆ ಕುಮಾರಕೃಪಾ ರಸ್ತೆಯ ಬಳಿಯ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದೆ.

ಬೆಂಗಳೂರು ಸಸ್ಟೈನಬಿಲಿಟಿ ಫೋರಂ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಮನ ಮಹಿಳಾ ಕಲೆಕ್ಟಿವ್, ಗ್ರಾಮ ಸೇವಾ ಸಂಘ, ಬಿ ಫೌಂಡೇಷನ್ ಫಾರ್ ಆರ್ಟ್ ಆ್ಯಂಡ್ ಕಲ್ಚರ್ ಮತ್ತು ಕೃತಿ ಫಿಲ್ಮ್ ಕ್ಲಬ್ ಸಹಯೋಗದಲ್ಲಿ ಈ ಚಲನಚಿತ್ರೋತ್ಸವ ನಡೆಯಲಿದೆ. ಪರಿಸರ ಸಂರಕ್ಷಣೆಯಲ್ಲಿ ಮಹಿಳೆಯರ ಧೈರ್ಯ ಹಾಗೂ ಪರಿಶ್ರಮದ ಕಥೆಗಳನ್ನು ಹೇಳುವ 24 ಚಲನಚಿತ್ರಗಳು ಪ್ರದರ್ಶನ ಕಾಣಲಿವೆ. ಚಲನಚಿತ್ರ ನಿರ್ದೇಶಕರ ಜತೆ ಸಂವಾದಕ್ಕೂ ಅವಕಾಶ ಕಲ್ಪಿಸಲಾಗಿದೆ. ನಿಸರ್ಗ ಕುರಿತು ಪರಿಸರವಾದಿಗಳು ಚರ್ಚೆ ನಡೆಸಲಿದ್ದಾರೆ. ಚಲನಚಿತ್ರೋತ್ಸವಕ್ಕೆ ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

ವಿವರಗಳಿಗೆ: https://bangalorefilmsociety.org

ಉಪನ್ಯಾಸ ಇಂದು

ಬೆಂಗಳೂರು: ‘ಮಧುಮೇಹ ತೊಂದರೆಗಳು ಹಾಗೂ ಪರಿಹಾರಗಳು’ ಕುರಿತು ಉಪನ್ಯಾಸ 21ರ ಸಂಜೆ 7.30ಕ್ಕೆ ವಿದ್ಯಾರಣ್ಯಪುರದ ಶ್ರೀ ವಿದ್ಯಾಗಣಪತಿ ದೇಗುಲದಲ್ಲಿ ನಡೆಯಲಿದೆ. ಸಂಪರ್ಕ:9482868919

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 04/ಬ್ರಿಡ್ಜ್/ಯುಬಿಎಲ್ 2021–22
ದಿನಾಂಕ : 15–03–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಲೋಂಡಾ ಸೆಕ್ಷನ್ : ಕ್ಯಾರಕೊಪ್ಪ ಮತ್ತು ಮುಗದ ನಿಲ್ದಾಣದ ನಡುವೆ ಲೆವೆಲ್ ಕ್ರಾಸಿಂಗ್ ಸಂ.305 ಬದಲಿಗೆ ಕಿ.ಮೀ.495/900–496/000ನ ಸಂಪರ್ಕಗಳಲ್ಲಿ ಸ್ಪ್ಯಾನ್ 2X30.00 ಮೀ + 1X15.00 ಮೀ ಪಿಎಸ್‌ಸಿ ಗರ್ಡರ್ (ರೈಲ್ವೆ ಪೋರ್ಷನ್) ರೈಲ್ ಮೇಲ್ಸೇತುವೆಯ ಮತ್ತು ಆರ್‌ಇ ಪ್ಯಾನೆಲ್‌ಗಳ ನಿರ್ಮಾಣದ ಬಾಕಿ ಉಳಿದ ಕೆಲಸಗಳು.	ರೂ. 7,41,11,501/–
2	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಲೋಂಡಾ ಸೆಕ್ಷನ್ : ಕಂಬಾರಗಣವಿ ಮತ್ತು ಕಾಶಿನಹಳ್ಳಿ ನಿಲ್ದಾಣದ ನಡುವೆ ಎಲ್‌ಸಿ – 316 ಬದಲಿಗೆ ಕಿ.ಮೀ.517/300 – 400ನ ಸಂಪರ್ಕಗಳಲ್ಲಿ ಸ್ಪ್ಯಾನ್ 1X15.00 ಮೀ + 1X30.00 ಮೀ + 1X15.00 ಮೀ ಪಿಎಸ್‌ಸಿ ಗರ್ಡರ್ (ರೈಲ್ವೆ ಪೋರ್ಷನ್) ರೈಲ್ ಮೇಲ್ಸೇತುವೆಯ ಮತ್ತು ಆರ್‌ಇ ಪ್ಯಾನೆಲ್‌ಗಳ ನಿರ್ಮಾಣದ ಬಾಕಿ ಉಳಿದ ಕೆಲಸಗಳು. (ದ್ವಿಲಕೋಟೆ ಪದ್ಧತಿ)	ರೂ. 17,35,75,081/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12–04–2022ರಂದು 11:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ
ಪಿಯುಬಿ/467/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 10/2022
ದಿನಾಂಕ : 11–03–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : ಆರ್‌ಸಿಎಫ್ ನಿರ್ದಿಷ್ಟತೆ ಸಂ. ಎಂಡಿಟಿಎಸ್–46270 ಪರಿಷ್ಕೃತ.01 ಗೆ ಅನುಸಾರವಾಗಿ ಕಳವು ನಿರೋಧ ಯಾಂತ್ರಿಕ ವ್ಯವಸ್ಥೆಯೊಂದಿಗೆ ಅಗ್ನಿಶಾಮಕಗಳ ಸರಬರಾಜು ಮತ್ತು ಸ್ಥಾಪನೆ.
(ಟೆಂಡರ್ ಸಂ. ಎಲ್8225197) (ಪ್ರಮಾಣ : 800 ಸಂಖ್ಯೆಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–04–2022 ರಂದು 14:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು ಬೆಂಗಳೂರು
ಪಿಯುಬಿ/465/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

ನಗರದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಭಾನುವಾರ ಸಂಜೆ ಮಳೆ ಸುರಿಯಿತು. ನಗರದಲ್ಲಿ ಶನಿವಾರ ಸಂಜೆಯೂ ಉತ್ತಮ ಮಳೆಯಾಗಿತ್ತು.

ಸತತ ಎರಡು ದಿನವೂ ಮಳೆಯಾಗಿದ್ದರಿಂದ ನಗರದ ವಾತಾವರಣ ತುಸು ತಂಪಾಗಿದೆ. ಬೇಸಿಗೆಯ ಬೇಗೆಯಿಂದ ಬಳಲಿದ್ದ ನಗರದ ಜನತೆಗೆ ಈ ಮಳೆ ನೆಮ್ಮದಿ ತಂದಿದೆ.

ನಗರದ ಹಲವು ಪ್ರದೇಶಗಳಲ್ಲಿ ಭಾನುವಾರ ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಕಂಡುಬಂತು. ಬೆಳಿಗ್ಗೆಯಿಂದಲೇ ತಂಪಿನ ಗಾಳಿಯೂ ಬೀಸುತ್ತಿತ್ತು. ಆಗಾಗ ಬಿಸಿಲು ಕಾಣಿಸಿಕೊಳ್ಳುತ್ತಿತ್ತು. ಮಧ್ಯಾಹ್ನದ ವೇಳೆ ಜೋರು ಗಾಳಿ ಬೀಸಲಾರಂಭಿಸಿತ್ತು. ಸಂಜೆ ವೇಳೆ ಹಲವೆಡೆ ತುಂತುರು ಮಳೆಯಾಯಿತು. ಕೆಲವೆಡೆ, ಅಬ್ಬರದ ಮಳೆಯಾಯಿತು.

ರಾಜಾಜಿನಗರ, ವಿಜಯನಗರ, ಯಶವಂತಪುರ, ಬಾಗಲಗುಂಟೆ, ಪೀಣ್ಯ, ವಿದ್ಯಾರಣ್ಯಪುರ, ಜಾಲಹಳ್ಳಿ, ಗೊರಗುಂಟೆಪಾಳ್ಯ, ಲಗ್ಗೆರೆ ಹಾಗೂ ಬೆಂಗಳೂರು ಉತ್ತರ ಭಾಗದ ಬಹುತೇಕ ಕಡೆ ಮಳೆ ಸುರಿಯಿತು.

‘ಜೋರಾಗಿ ಬೀಸಿದ್ದ ಗಾಳಿಯಿಂದ ಕೆಲವೆಡೆ ಮರದ ಕೊಂಬೆಗಳು ಬಿದ್ದಿದ್ದವು. ಸ್ಥಳೀಯರ ಜೊತೆ ಸೇರಿ ಸಿಬ್ಬಂದಿ ಕೊಂಬೆಗಳನ್ನು ತೆರವು ಮಾಡಿದ್ದಾರೆ. ಮಳೆಯಿಂದ ದೊಡ್ಡ ಪ್ರಮಾಣದಲ್ಲಿ ಹಾನಿಯಾದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನಗರದ ಬಳ್ಳಾರಿ ರಸ್ತೆಯಲ್ಲಿ ಭಾನುವಾರ ಸುರಿದ ಮಳೆಯಲ್ಲಿ ವಾಹನ ಸವಾರರು ಸಾಗಿದರು —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಐಐಟಿ: ತ್ರಿವೇಣಿಗೆ ರ‍್ಯಾಂಕ್

ಬೆಂಗಳೂರು: ತಾರಾನಾಥ ಶಿಕ್ಷಣ ಸಂಸ್ಥೆಯ ಎಲ್.ವಿ.ಡಿ.ಮಹಾವಿದ್ಯಾಲಯದ ಬಿ.ಎಸ್ಸಿ ವಿದ್ಯಾರ್ಥಿನಿ ತ್ರಿವೇಣಿ ಅವರು 2022ನೇ ಸಾಲಿನ ಐಐಟಿ–ಜೆಎಎಂ ಪರೀಕ್ಷೆಯಲ್ಲಿ 1,179ನೇ ರ‍್ಯಾಂಕ್ ಗಳಿಸಿದ್ದಾರೆ.

‘ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುಸೇನಪ್ಪ ಅವರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡಿದ್ದ ತ್ರಿವೇಣಿ, ಐಐಟಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಕಾಲೇಜಿನ ಮೊದಲ ವಿದ್ಯಾರ್ಥಿಯಾಗಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

ನ್ಯೂಜೆರ್ಸಿ ಅಪ್ಪು ಅಭಿಮಾನಿ ಸಂಘದ ವತಿಯಿಂದ ಅಮೆರಿಕದ ನ್ಯೂಜೆರ್ಸಿಯಲ್ಲಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಶನಿವಾರ ಆಚರಿಸಲಾಯಿತು. ಪುನೀತ್ ಅವರ ಪುತ್ರಿ ಧೃತಿ ಭಾಗವಹಿಸಿದ್ದರು. ಬಳಿಕ ಪುನೀತ್ ನಟನೆಯ ಜೇಮ್ಸ್ ಚಿತ್ರದ ಬಿಡುಗಡೆ ಪ್ರಯುಕ್ತ ಮೆರವಣಿಗೆಯೂ ನಡೆಯಿತು.

‘ಚಾಮರಾಜಪೇಟೆ–ಸಿಸಿಟಿವಿ ಕಣ್ಗಾವಲು’

ಬೆಂಗಳೂರು: ‘ಚಾಮರಾಜ ಪೇಟೆ ಬಡಾವಣೆಯಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಅಳವಡಿಸಲು ಸಂಸದರ ನಿಧಿಯಿಂದ ಹಣ ಒದಗಿಸುತ್ತೇನೆ’ ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ. ಮೋಹನ್ ಭರವಸೆ ನೀಡಿದರು.

ಚಾಮರಾಜಪೇಟೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವನ್ನು ಉದ್ಘಾಟಿಸಿ ಅವರು ಭಾನುವಾರ ಮಾತನಾಡಿದರು.

‘ಸ್ಥಳೀಯರ ಸಮಸ್ಯೆಗಳನ್ನು ಆಲಿಸಲು ಪ್ರತಿ ತಿಂಗಳು ಸಭೆ ನಡೆಸಲಿದ್ದೇನೆ. ಶಾಸಕ ಜಮೀರ್ ಅಹ್ಮದ್ ಅವರೊಂದಿಗೆ ನಾನೂ ಸಭೆಯಲ್ಲಿ ಪಾಲ್ಗೊಳ್ಳುತ್ತೇನೆ. ನಾವಿಬ್ಬರೂ ಕ್ಷೇತ್ರದ ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಕೆಲಸ ಮಾಡುತ್ತೇವೆ’ ಎಂದರು.

ಚಾಮರಾಜಪೇಟೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವನ್ನು ಸಂಸದ ಪಿ.ಸಿ. ಮೋಹನ್ ಉದ್ಘಾಟಿಸಿದರು.

ಸಂಘದ ಅಧ್ಯಕ್ಷ ಬಿ.ಎಸ್. ಸುಬ್ಬಣ್ಣ, ಧರ್ಮೇಂದ್ರ ಕುಮಾರ್ ಅರೇಹಳ್ಳಿ, ಸ್ಥಳೀಯ ಮುಖಂಡ ಚಂದ್ರಶೇಖರ್, ಸಂಘದ ಗೌರವಾಧ್ಯಕ್ಷ ಎ.ಪ್ರಕಾಶ್, ಉಪಾಧ್ಯಕ್ಷ ಎನ್.ಎಸ್. ಕೃಷ್ಣಮೂರ್ತಿ, ಎ.ಪಿ.ಗಂಗಾಧರ್, ಕಾನೂನು ಸಲಹೆಗಾರ ಬಿ.ಎಸ್. ರಾಧಾನಂದನ್ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

ST ALOYSIUS COLLEGE (AUTONOMOUS)
Re-accredited by NAAC with 'A' Grade, 3.62 CGPA
Post Box No. 720, Mangaluru- 3 | www.staloysius.edu.in
invites applications for the Faculty positions in the following UG / PG Departments for 2022-23
Mathematics, Botany, Computer Science, Applications & Animation, English, Economics, Food Science & Technology, Nutrition & Dietetics, Zoology, Journalism & Mass Communication, Chemistry, Biochemistry, B.Voc.-Animation & Multimedia, B.Voc–Retail Management, Commerce, Psychology, Physical Education (lady preferred), General Counsellor.
Minimum Qualification:
A Regular Master's Degree in the respective subjects with 55% marks and above. Applications with qualification through distance mode will not be accepted. NET/KSET, Ph.D. with teaching experience preferred.
Applications should reach us on or before 28 March, 2022 on any of the following platforms:
www.staloysius.edu.in/placements/careers
or e-mail to: careers@staloysius.edu.in

WANTED FOLLOWING Staff to work at Malleswaram area, 1. Graduate With Computer Knowledge able to Handle PF/ ESI And Other Labour Matters 2. Office Boy With Working Experience (Minimum Qualification SSLC) Both Salary Negotiable Contact In Person With Resume And Passport Size Photo At RP Associates, 36, Emami Nest, #202, 1st Floor, 8th Main, 16th Cross, Malleswaram, Bangalore-55, Beside Reliance Smart Point. Phone 080: 23322353/ 8951687500

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

Wanted

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

AUTOMOTIVE

Automobile Services

Auto Consultants

CERAMIC COATING: USA make chemical application. OFFER PRICE Rs. 24990 all inclusive (Reg 35k) including windshield coat and full interior detail. Expires 31st March 2022. Book appointment: MidCity Motors 8147853841 Open 7am.

EDUCATIONAL

Admission

ONE SITTING: B.Sc (Paramedical All/ Agriculture/ Hotel/ Hospital Management/ Yoga/ IT/CS). D.Pharma/ B.Pharma/ BPT/DPT/ DMLT/BYNS/ B.Tech/ MBA/ BBA/BCA/ SSLC/PU. Asha Academy: Bangalore. 9448460103/ 7093438248

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

BUSINESS

Business Offers

Finance

NRI'S INVESTMENT And Finance availableOn LowInterest Against properties, Lands, Building, sites, Flats,converted Lands, Agriculture Lands Also Towards Businesses call 7411265189

PERSONAL

Change of Name

I, ARUNA Nanjundaswamy, W/o Col. P. Vijay Reddy, residing at No.17/9-A, Cambridge Road, IInd Cross, Halasuru, Near Cambridge Hospital, HAL IInd Stage, Bangalore-560008, Karnataka, have changed my name from Aruna Nanjundaswamy AKA Aruna N. Sridhar to ARUNA V REDDY, before L. Gopalakrishna, Advocate & Notary, Bangalore, vide affidavit dated:16-03-2022.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಕರ್ನಾಟಕ ಸರ್ಕಾರ
ನಗರಸಭೆ ಚಿಂತಾಮಣಿ

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆ–ಡಬ್ಲ್ಯೂ–1 ದಸ್ತಾವೇಜಿನಲ್ಲಿ
ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ಕಿಅ/ತಾಶಾ/ಸಿಆರ್/05/2021–22
ದಿನಾಂಕ: 17.03.2022 (2ನೇ ಕರೆ)

ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000ರ ಅಧಿನಿಯಮದಡಿಯಲ್ಲಿ 14ನೇ ಹಣಕಾಸು ಯೋಜನೆಯಡಿ ಉಳಿಕೆ ಅನುದಾನದಲ್ಲಿ ಕೈಗೊಳ್ಳುವ ವಿವಿಧ ಕಾಮಗಾರಿಗಳ **ರೂ.40.23 ಲಕ್ಷಗಳ** ಅನುದಾನಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಇಂಡೆಂಟ್ ಸಂಖ್ಯೆಗಳು, **INDENT119863 (Call-2), 119869 (Call-2), 119860 (Call-2) & 119867 (Call-2)** ಟೆಂಡರ್ ಆಹ್ವಾನಿಸಿರುತ್ತಾರೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡೆ ದಿನಾಂಕ: **01.04.2022 ಸಂಜೆ 5.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **04.04.2022 ರಂದು ಬೆಳಿಗ್ಗೆ 11.00 ಗಂಟೆನಂತರ** ಅಥವಾ ಸದರಿ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ನಂತರದ ಕೆಲಸದ ದಿನ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು.

ಸಹಿ/- ಪೌರಾಯುಕ್ತರು, ನಗರಸಭೆ, ಚಿಂತಾಮಣಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ433/ಎಂ.ಸಿ.ಎ/2021–22
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 53/2021–22
ದಿನಾಂಕ: 17.03.2022

(ರಸ್ತೆಗಳ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು 2ರಂತೆ ಏಕ ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ ಏಕ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ **2000** ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **19.03.2022** ರಿಂದ **28.03.2022**ರ ಸಂಜೆ **4.00** ಘಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **21.03.2022 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 28.03.2022 (ಸಂಜೆ 4.00 ಘಂಟೆಯವರೆಗೆ)** (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **30.03.2022 (ಬೆಳಿಗ್ಗೆ 11.00 ಘಂಟೆಗೆ).** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಶ್ರೀ.ತಿಮ್ಮರಾಯಪ್ಪ.ಬಿ, ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 427/ಎಂ.ಸಿ.ಎ/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

ಗ್ಲೋಬ್‌ಸ್ಪಿನ್ ವ್ಯಾಪಾರ ಸಮಾವೇಶ: ಉದ್ಘಾಟನೆ–ಸಚಿವ ಎಂಟಿಬಿ ನಾಗರಾಜ್, ಮಾತನಾಡುವವರು–ರಜಿತ್ ಒಖಂಡಿಯರ್, ಯಶ್ ಆರ್ಯ, ಅತಿಥಿಗಳು–ಟಿ.ಎಚ್. ಎಂ.ಕುಮಾರ್, ಗ್ಲೋರಿಸ್ವರೂಪ ಸುಂಚು, ಐಶ್ವರ್ಯ ನಂದ್ಯಪ್ಪ, ಸ್ಥಳ–ವರ್ಲ್ಡ್ ಟ್ರೇಡ್ ಸೆಂಟರ್, ರಾಜಾಜಿನಗರ, ಬೆಳಿಗ್ಗೆ 10

ಜನ ಪರ್ಯಾಯ ಬಜೆಟ್ ಅಧಿವೇಶನ: ಉದ್ಘಾಟನೆ–ಯೋಗೇಂದ್ರ ಯಾದವ್, ಕವಿತಾ ಕುರಗುಂಟಿ, ಅಧ್ಯಕ್ಷತೆ–ಬಡಗಲಪುರ ನಾಗೇಂದ್ರ, ಆಯೋಜನೆ–ಸಂಯುಕ್ತ ಹೋರಾಟ ಕರ್ನಾಟಕ, ಸ್ಥಳ–ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11.30

ಯೋಗೇಂದ್ರ ಯಾದವ್

ಷ.ಶೆಟ್ಟರ್ ಅವರ ‘ಕನ್ನಡ ಶಾಸನಗಳು’ ಪುಸ್ತಕ ಬಿಡುಗಡೆ: ಎಚ್.ಎಸ್.ಶಿವಪ್ರಕಾಶ್, ಅಧ್ಯಕ್ಷತೆ–ಎಸ್.ರಂಗಪ್ಪ, ಅತಿಥಿಗಳು–ಶೈಲೇಶ್ ನಾಯಕ್, ಎಚ್.ಎಸ್.ಗೋಪಾಲರಾವ್, ಸಂಧ್ಯಾ ಹೆಗಡೆ, ರವಿ ಕೋರಿಶೆಟ್ಟರ್, ಸ್ನೇಹಲತಾ ನಾಡಿಗೇರ್, ಆಯೋಜನೆ–ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಸ್ಥಳ–ಸಮ್ಮೇಳನ ಸಭಾಂಗಣ, ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜು, ಜಯನಗರ, ಬೆಳಿಗ್ಗೆ 11.30

ವೈದ್ಯರಿಗೆ ಅಂತರರಾಷ್ಟ್ರೀಯ ಫೆಲೋಶಿಪ್ ಕಾರ್ಯಕ್ರಮ: ಅತಿಥಿಗಳು–ರಬೀನಾ ತಿಂಡಾಲೆ, ರಾಜ್ ಮುರಳಿ, ಬಿ.ಸಿ.ಭಾರ್ಗವ, ಎಂ.ಕೆ.ಶಶಿಧರ, ಎ.ವಿ. ವಿದ್ಯಾಶಂಕರ್, ಆಯೋಜನೆ–ಜಿಟಿಇಸಿ, ಸ್ಥಳ–ಕುವೆಂಪು ಕಲಾಕ್ಷೇತ್ರ, ವಿ.ವಿ.ಪುರ, ಮಧ್ಯಾಹ್ನ 3

‘ಪಂಚರಾಜ್ಯಗಳ ಚುನಾವಣಾ ಫಲಿತಾಂಶ:ಮುಂದೇನು?’ ಕುರಿತು ವಿಶ್ಲೇಷಣೆ–ಸುಧೀಂದ್ರ ಕುಲಕರ್ಣಿ, ಆಯೋಜನೆ–ಜನಶಕ್ತಿ ಮೀಡಿಯ, ಸ್ಥಳ–ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಅರಮನೆ ರಸ್ತೆ, ಸಂಜೆ 5

‘ರಂಗ ಮಿಲನೋತ್ಸವ’ದ ಉದ್ಘಾಟನೆ: ಅತಿಥಿಗಳು–ಶ್ರೀನಿವಾಸ ಜಿ.ಕಪ್ಪಣ್ಣ, ಬಿ.ಆರ್.ಲಕ್ಷ್ಮಣರಾವ್, ಸುಂದರ್ ರಾಜ್, ರಂಗಗೌರವ–ಟಿ.ಎಸ್.ನಾಗಾಭರಣ, ‘ಆ್ಯಬ್ ಸಿನ್ತ್’ ನಾಟಕ ಪ್ರದರ್ಶನ–ರಂಗರಥ ತಂಡ, ಆಯೋಜನೆ–ಅಂತರಂಗ, ಸ್ಥಳ–ಸೇವಾಸದನ, ಮಲ್ಲೇಶ್ವರ, ಸಂಜೆ 6.30

ಹನಿಟ್ರ್ಯಾಪ್ ಶಂಕೆ: ₹ 25 ಲಕ್ಷಕ್ಕೆ ಬೇಡಿಕೆ, ಯುವತಿಗಾಗಿ ಶೋಧ

ಉಪ ತಹಶೀಲ್ದಾರ್‌ಗೆ ಬ್ಲ್ಯಾಕ್‌ಮೇಲ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿ ಜೊತೆಗಿನ ಖಾಸಗಿ ಕ್ಷಣಗಳ ವಿಡಿಯೊ ಇರುವುದಾಗಿ ಹೇಳಿ ಉಪ ತಹಶೀಲ್ದಾರ್‌ರೊಬ್ಬರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಮೂವರನ್ನು ಕೆ.ಆರ್. ಪುರ ಪೊಲೀಸರು ಬಂಧಿಸಿದ್ದಾರೆ.

'ಗಣಪತಿ ನಾಯಕ್, ಕೇಶವ್ ಹಾಗೂ ಕಿಶನ್ ಬಂಧಿತರು. ಕೋಲಾರ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಉಪ ತಹಶೀಲ್ದಾರ್ ಅವರು ಇತ್ತೀಚೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಇದೊಂದು ಹನಿಟ್ರ್ಯಾಪ್ ಜಾಲವಿರುವ ಶಂಕೆ ಇದೆ' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಉಪ ತಹಶೀಲ್ದಾರ್ ಅವರು 2021ರಲ್ಲಿ ಹೋಟೆಲ್‌ಗೆ ಹೋಗಿದ್ದಾಗ ಯುವತಿ ಪರಿಚಯವಾಗಿತ್ತು. ನಂತರ, ಇಬ್ಬರೂ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡಿದ್ದರು. ಸಲುಗೆ ಬೆಳೆದಿತ್ತು. ದೂರುದಾರ ತಹಶೀಲ್ದಾರ್ ಅವರು ಯುವತಿ ಜೊತೆ ರೆಸಾರ್ಟ್‌ವೊಂದಕ್ಕೆ ಹೋಗಿದ್ದರು. ಆಗ ಖಾಸಗಿ ಕ್ಷಣಗಳನ್ನು ಕಳೆದಿದ್ದರೆಂಬುದು ಗೊತ್ತಾಗಿದೆ. ಆದರೆ, ಯುವತಿ ಯಾರು ಎಂಬುದು ತಿಳಿದುಬಂದಿಲ್ಲ' ಎಂದೂ ತಿಳಿಸಿದರು.

₹ 25 ಲಕ್ಷಕ್ಕೆ ಬೇಡಿಕೆ: 'ಯುವತಿ ಜೊತೆಗೆ ಉಪ ತಹಶೀಲ್ದಾರ್ ಸಲುಗೆ ಹೊಂದಿದ್ದ ವಿಷಯ ತಿಳಿದುಕೊಂಡಿದ್ದ ಆರೋಪಿಗಳು, ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು' ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

'ಖಾಸಗಿ ಕ್ಷಣಗಳ ವಿಡಿಯೊ ಇದೆ. ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇವೆ ಎಂದು ಬೆದರಿಸಿದ್ದರು. ಹೀಗೇ ಮಾಡದಿರಲು ₹ 25 ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಈ ಬಗ್ಗೆ ಉಪ ತಹಶೀಲ್ದಾರ್, ಠಾಣೆಗೆ ದೂರು ನೀಡಿದ್ದರು' ಎಂದೂ ಹೇಳಿದರು.

'ಯುವತಿಯೂ ಆರೋಪಿಗಳ ಜೊತೆ ಶಾಮೀಲಾಗಿರುವ ಮಾಹಿತಿ ಇದೆ. ಆದರೆ, ಅವರು ಸದ್ಯ ತಲೆಮರೆಸಿಕೊಂಡಿದ್ದಾರೆ. ಪತ್ತೆ ಮಾಡಿ ವಿಚಾರಣೆ ನಡೆಸಿದ ನಂತರವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ತಿಳಿಸಿದರು.

'ವಕೀಲರ ಸೋಗಿನಲ್ಲಿ ಪರಿಚಯ'

'ಬಂಧಿತ ಆರೋಪಿಗಳು, ವಕೀಲರ ಸೋಗಿನಲ್ಲಿ ಉಪ ತಹಶೀಲ್ದಾರ್ ಅವರನ್ನು ಪರಿಚಯಿಸಿಕೊಂಡಿದ್ದರೆಂದು ಗೊತ್ತಾಗಿದೆ. ಹೀಗಾಗಿ, ಆರೋಪಿಗಳ ಹಿನ್ನೆಲೆ ಏನು ಎಂಬುದನ್ನು ತಿಳಿದುಕೊಳ್ಳಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಆ್ಯಸಿಡ್ ದಾಳಿ: ರಂಗಭೂಮಿ ಕಲಾವಿದರ ಬಂಧನ

ಬೆಂಗಳೂರು: ರಂಗಭೂಮಿ ಕಲಾವಿದೆ ದೇವಿ (51) ಮೇಲೆ ಆ್ಯಸಿಡ್ ಎರಚಿದ್ದ ಆರೋಪದಡಿ ರಂಗಭೂಮಿ ಕಲಾವಿದರಿಬ್ಬರು ಸೇರಿ ಮೂವರನ್ನು ನಂದಿನಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. 'ರಮೇಶ್ (41), ಸ್ವಾತಿ (36) ಹಾಗೂ ಯೋಗೇಶ್ (36) ಬಂಧಿತರು.

'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದೇವಿ ಅವರ ಹೇಳಿಕೆ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದ ದೇವಿ ನಾಟಕ ಕಂಪನಿಯೊಂದರಲ್ಲಿ ಅಭಿನಯಿಸುತ್ತಿದ್ದರು. ಅವರ ಜೊತೆಯಲ್ಲೇ ರಮೇಶ್ ಹಾಗೂ ಸ್ವಾತಿ ಸಹ ಕಲಾವಿದರಾಗಿ ಕೆಲಸ ಮಾಡುತ್ತಿದ್ದರು. ಯೋಗೇಶ್, ಆಟೊ ಚಾಲಕ' ಎಂದು ಪೊಲೀಸರು ತಿಳಿಸಿದ್ದಾರೆ.

₹ 10 ಸಾವಿರ ಸುಪಾರಿ: 'ಪರಿಚಯಸ್ಥರಾಗಿದ್ದ ರಮೇಶ್ ಹಾಗೂ ಸ್ವಾತಿ ಅವರ ವೈಯಕ್ತಿಕ ವಿಚಾರದ ಬಗ್ಗೆ ದೇವಿ ಮಾತನಾಡುತ್ತಿದ್ದರು ಎನ್ನಲಾಗಿದೆ. ಇದು ಆರೋಪಿಗಳಿಗೆ ಸಿಟ್ಟು ತರಿಸಿತ್ತು. ಹೀಗಾಗಿ, ದೇವಿ ಮೇಲೆ ಆ್ಯಸಿಡ್ ಎರಚಿ ಮುಖ ವಿಕಾರಗೊಳಿಸಿ ರಂಗಭೂಮಿಯಿಂದ ದೂರವಿರುವಂತೆ ಮಾಡಲು ಸಂಚು ರೂಪಿಸಿದ್ದರು' ಎಂದರು.

'ಆ್ಯಸಿಡ್ ಎರಚಲು ಆಟೊ ಚಾಲಕ ಯೋಗೇಶ್ ಅವರಿಗೆ ಆರೋಪಿಗಳು ₹ 10 ಸಾವಿರ ಸುಪಾರಿ ನೀಡಿದ್ದರು. ಮಾರ್ಚ್ 18ರ ನಸುಕಿನಲ್ಲಿ ಯೋಗೇಶ್ ಜೊತೆ ರಮೇಶ್, ದೇವಿ ಮನೆ ಸಮೀಪಕ್ಕೆ ಬಂದಿದ್ದರು. ದೂರದಲ್ಲಿ ಕಾರು ನಿಲ್ಲಿಸಿ ಯೋಗೇಶ್ ಅವರನ್ನು ದೇವಿ ಮನೆಗೆ ಕಳುಹಿಸಿ ಆ್ಯಸಿಡ್ ಎರಚುವಂತೆ ಮಾಡಿದ್ದರು' ಎಂದೂ ತಿಳಿಸಿದರು.

ಜಪ್ತಿ ಮಾಡಿರುವ ಕಂಚಿನ ವಿಗ್ರಹ

ಪುರಾತನ ವಿಗ್ರಹ ಅಕ್ರಮ ಸಾಗಣೆ

ಬೆಂಗಳೂರು: ಅಕ್ರಮವಾಗಿ ಸಾಗಿಸುತ್ತಿದ್ದ ಪುರಾತನ ಕಂಚಿನ ವಿಗ್ರಹವನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'22 ಕೆ.ಜಿ 50 ಗ್ರಾಂ ತೂಕದ ವಿಷ್ಣುವಿನ ವಿಗ್ರಹವನ್ನು ತಮಿಳುನಾಡಿನಿಂದ ಮಲೇಷ್ಯಾ ದೇಶಕ್ಕೆ ಕೋರಿಯರ್ ಮೂಲಕ ಕಳುಹಿಸಲಾಗುತ್ತಿತ್ತು. ಮಾಹಿತಿ ಬರುತ್ತಿದ್ದಂತೆ ಕೋರಿಯರ್ ವಿಭಾಗದಲ್ಲಿ ಪರಿಶೀಲನೆ ನಡೆಸಿ, ವಿಗ್ರಹ ಪತ್ತೆ ಮಾಡಲಾಗಿದೆ' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಭಾರತೀಯ ಪುರಾತತ್ವ ಇಲಾಖೆ ತಜ್ಞರು ವಿಗ್ರಹವನ್ನು ಪರಿಶೀಲಿಸಿ ವರದಿ ನೀಡಿದ್ದಾರೆ. ಪ್ರಾಚ್ಯ ಸಂಪತ್ತು ಕಾಯ್ದೆಯಡಿ ಪ್ರಕರಣ ದಾಖಲು ಮಾಡಲಾಗಿದೆ. ವಿಗ್ರಹ ಕಳುಹಿಸುತ್ತಿದ್ದ ತಮಿಳುನಾಡಿನ ವ್ಯಕ್ತಿಯನ್ನು ಬಂಧಿಸಿದ್ದು, ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ತಿಳಿಸಿವೆ.

ಹುಟ್ಟೂರಿಗೆ ಇಂದು ನವೀನ್ ಮೃತದೇಹ

ಬೆಂಗಳೂರು: ಉಕ್ರೇನ್‌ನಲ್ಲಿ ರಷ್ಯಾ ಪಡೆಗಳು ನಡೆಸಿದ್ದ ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟಿರುವ ಹಾವೇರಿ ಜಿಲ್ಲೆಯ ಚಳಗೇರಿ ಗ್ರಾಮದ ನವೀನ್ ಗ್ಯಾನಗೌಡರ ಅವರ ಮೃತದೇಹ ಬೆಂಗಳೂರಿಗೆ ಸೋಮವಾರ ನಸುಕಿನಲ್ಲಿ ಬರಲಿದ್ದು, ನಂತರ ಹುಟ್ಟೂರಿಗೆ ತೆಗೆದುಕೊಂಡು ಹೋಗಲು ಅಧಿಕಾರಿಗಳು ವ್ಯವಸ್ಥೆ ಮಾಡಿಕೊಂಡಿದ್ದಾರೆ.

'ದುಬೈನಿಂದ ಎಮಿರೇಟ್ಸ್ ಇಕೆ 568 ವಿಮಾನದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೋಮವಾರ ನಸುಕಿನ 3 ಗಂಟೆ ಸುಮಾರಿಗೆ ಮೃತದೇಹ ತರಲಾಗುತ್ತದೆ. ಅದನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗುವುದು. ನಂತರ, ಪೊಲೀಸ್ ಭದ್ರತೆಯಲ್ಲಿ ಆಂಬುಲೆನ್ಸ್‌ನಲ್ಲಿ ಮೃತದೇಹವನ್ನು ಹಾವೇರಿ ಜಿಲ್ಲೆಯ ಚಳಗೇರಿ ಗ್ರಾಮಕ್ಕೆ ಕೊಂಡೊಯ್ಯಲಾಗುತ್ತದೆ' ಎಂದು ಮೂಲಗಳು ಹೇಳಿವೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಳಿಗ್ಗೆ 9 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ದಾವಣಗೆರೆಗೆ ಹೋಗಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗವಾಗಿ ಚಳಗೇರಿ ಗ್ರಾಮಕ್ಕೆ ತೆರಳಲಿದ್ದಾರೆ. ನವೀನ್ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಪಿಸ್ತೂಲ್ ಮಾರಾಟ: ರಿಯಲ್ ಎಸ್ಟೇಟ್ ಮಧ್ಯವರ್ತಿ ಬಂಧನ

ಬೆಂಗಳೂರು: ಮಹಾರಾಷ್ಟ್ರ ಅಮರಾವತಿಯಿಂದ ಪಿಸ್ತೂಲ್‌ಗಳನ್ನು ತಂದು ನಗರದಲ್ಲಿ ಮಾರುತ್ತಿದ್ದ ಆರೋಪದಡಿ ಶಕೀಲ್ ಅಹ್ಮದ್ (29) ಎಂಬುವರನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ರಿಯಲ್ ಎಸ್ಟೇಟ್ ಮಧ್ಯವರ್ತಿಯಾಗಿರುವ ಕನಕನಗರದ ಶಕೀಲ್, ಪಿಸ್ತೂಲ್ ಅನ್ನು ಮಾರುತ್ತಿದ್ದರು. ಇವರಿಂದ ಎರಡು ಪಿಸ್ತೂಲ್ ಹಾಗೂ ನಾಲ್ಕು ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರೌಡಿಗಳು ಹಾಗೂ ಇತರರ ಜೊತೆ ಆರೋಪಿ ಒಡನಾಟ ಹೊಂದಿದ್ದರು. ಆರೋಪಿ ಇತ್ತೀಚೆಗೆ ರೌಡಿಯೊಬ್ಬರಿಗೆ ಪಿಸ್ತೂಲ್ ನೀಡಲು ಬಾಣಸವಾಡಿ ರೈಲುನಿಲ್ದಾಣ ಬಳಿ ಕಾಯುತ್ತಿದ್ದರು. ಆಗ ದಾಳಿ ಮಾಡಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದೂ ಹೇಳಿದರು.

'ಪಿಸ್ತೂಲ್ ಮಾರಾಟ ಪ್ರಕರಣದಲ್ಲೇ 2019ರಲ್ಲಿ ಶಕೀಲ್ ಅಹ್ಮದ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಪ್ರಕರಣದಲ್ಲಿ ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ ಆರೋಪಿ, ಪುನಃ ಪಿಸ್ತೂಲ್ ಮಾರಾಟ ಮುಂದುವರಿಸಿದ್ದರು. ಆರ್.ಟಿ.ನಗರ ಹಾಗೂ ಸಂಪಿಗೆಹಳ್ಳಿ ಠಾಣೆಯಲ್ಲೂ ಆರೋಪಿ ವಿರುದ್ಧ ಪ್ರಕರಣಗಳು ದಾಖಲಾಗಿವೆ' ಎಂದೂ ಅಧಿಕಾರಿ ವಿವರಿಸಿದರು.

ಹಾಸನ ಜಿಲ್ಲೆಯಲ್ಲಿ ಆನೆ ಕಳೇಬರ ಹೊರತೆಗೆದ ಅಧಿಕಾರಿಗಳು

ಕಾಡಾನೆ ಹೂತಿಟ್ಟು ದಂತ ಮಾರಾಟ

ಪ್ರಜಾವಾಣಿ ವಾರ್ತೆ

ಹಾಸನ/ಬೆಂಗಳೂರು: ದಂತ ಮಾರಾಟ ಪ್ರಕರಣದಲ್ಲಿ ಐವರು ಆರೋಪಿಗಳನ್ನು ಇತ್ತೀಚೆಗಷ್ಟೇ ಬಂಧಿಸಿದ್ದ ಬೆಂಗಳೂರಿನ ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು, ಹಾಸನ ವೀರಾಪುರದ ಜಮೀನಿನಲ್ಲಿ ಕಾಡಾನೆಯೊಂದನ್ನು ಹೂತಿದ್ದ ಸಂಗತಿ ಪತ್ತೆ ಮಾಡಿದ್ದಾರೆ.

ವೀರಾಪುರದ ಚಂದ್ರೇಗೌಡ, ತಮ್ಮಯ್ಯ, ತಿಲಕ್, ನಾಗರಾಜ್ ಹಾಗೂ ಜೆಸಿಬಿ ಯಂತ್ರದ ಮಾಲೀಕ ಪ್ರಸಾದ್ ಎಂಬುವರನ್ನು ದಂತ ಮಾರಾಟ ಪ್ರಕರಣದಲ್ಲಿ ಪೊಲೀಸರು ಬಂಧಿಸಿದ್ದರು. ಇವರು ನೀಡಿದ್ದ ಮಾಹಿತಿ ಆಧರಿಸಿ ವೀರಾಪುರದಲ್ಲಿ ಭಾನುವಾರ ಕಾರ್ಯಾಚರಣೆ ನಡೆಸಿದ ಪೊಲೀಸರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು, ಹೂತಿದ್ದ ಆನೆಯ ಕಳೇಬರ ಹೊರಗೆ ತೆಗೆದರು. ಕಳೇಬರ ಮಾದರಿಯನ್ನು ವೈದ್ಯಕೀಯ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ದಂತಗಳ ಜೊತೆ ಆರೋಪಿಗಳು

'ಗ್ರಾಮದ ಕೃಷಿ ಜಮೀನಿನ ಸಮೀಪ ಸೀಗೆ ರಕ್ಷಿತಾರಣ್ಯ ಪ್ರದೇಶವಿದೆ. ಕಾಡು ಪ್ರಾಣಿಗಳಿಂದ ಬೆಳೆ ರಕ್ಷಣೆಗಾಗಿ ತಂತಿ ಬೇಲಿಗೆ ಕಾನೂನು ಬಾಹಿರವಾಗಿ ವಿದ್ಯುತ್ ಸಂಪರ್ಕ ನೀಡಲಾಗಿತ್ತು. ವಿದ್ಯುತ್ ತಂತಿ ಸ್ಪರ್ಶಿಸಿ ಇತ್ತೀಚೆಗೆ ಕಾಡಾನೆ ಮೃತಪಟ್ಟಿತ್ತು' ಎಂದು ಮೂಲಗಳು ಹೇಳಿವೆ.

'ಆನೆ ಮೃತಪಟ್ಟಿರುವ ವಿಷಯವನ್ನು ಮುಚ್ಚಿಟ್ಟಿದ್ದ ಆರೋಪಿಗಳು, ಜಮೀನಿನಲ್ಲೇ ಜೆಸಿಬಿ ಯಂತ್ರದಿಂದ ಗುಂಡಿ ತೆಗೆದು ಮೃತದೇಹ ಹೂತಿದ್ದರು. ಶವ ಕೊಳೆತ ಬಳಿಕ ದಂತಗಳನ್ನು ಕಿತ್ತ ಆರೋಪಿಗಳು, ಅವುಗಳನ್ನು ಮಾರಾಟ ಮಾಡಲು ಬೆಂಗಳೂರಿಗೆ ಹೋಗಿದ್ದರು. ಅಲ್ಲಿಯೇ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ವಿಚಾರಣೆ ನಡೆಸಿದಾಗ, ಆನೆ ಹೂತಿದ್ದ ಮಾಹಿತಿ ಬಾಯ್ಬಿಟ್ಟಿದ್ದರು' ಎಂದೂ ತಿಳಿಸಿವೆ.

ಅರಣ್ಯ ತನಿಖಾ ದಳದ ಡಿಸಿಎಫ್ ರವೀಂದ್ರ ಕುಮಾರ್, 'ಬೆಂಗಳೂರಿನ ಸಿಕ್ಕ ಆನೆ ದಂತಗಳು, ವೀರಾಪುರದಲ್ಲಿ ಹೂತಿದ್ದ ಆನೆ ಮೃತದೇಹಕ್ಕೆ ಹೋಲಿಕೆಯಾಗಿವೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಆರೋಪಿಗಳಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ತಂತಿ ಬೇಲಿಗೆ ವಿದ್ಯುತ್ ಹರಿಸುವುದು ಶಿಕ್ಷಾರ್ಹ ಅಪರಾಧ' ಎಂದರು.

385 ಮಂದಿಗೆ ಕನ್ನಡಕ ವಿತರಣೆ

ರಾಜರಾಜೇಶ್ವರಿ ನಗರ: ಜ್ಞಾನಭಾರತಿ ವಾರ್ಡ್ ಕಾಂಗ್ರೆಸ್, ವಾಸುದೇವ ಚಾರಿಟಬಲ್ ಟ್ರಸ್ಟ್ ಏರ್ಪಡಿಸಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ 385 ಜನರಿಗೆ ಕನ್ನಡಕ ವಿತರಿಸಲಾಯಿತು.

ವಾಸುದೇವ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಎಚ್.ತುಕಾರಾಂ,'ದೃಷ್ಟಿದೋಷವಿದ್ದ 15 ಜನರಿಗೆ ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ. ರಕ್ತದೊತ್ತಡ, ಮಧುಮೇಹ ಇತರ 280 ಜನರಿಗೆ ಆರೋಗ್ಯ ತಪಾಸಣೆ ನಡೆಸಿ, ಔಷಧಿ ವಿತರಿಸಲಾಗಿದೆ' ಎಂದರು.

ಶಿಬಿರವನ್ನು ಕಾಂಗ್ರೆಸ್ ನಾಯಕಿ ಎಚ್.ಕುಸುಮಾ ಉದ್ಘಾಟಿಸಿದರು. ಸ್ಥಳೀಯ ಮುಖಂಡ ಹನುಮಂತರಾಯಪ್ಪ, ಕಾಂಗ್ರೆಸ್ ಪಕ್ಷದ ಮುಖಂಡರಾದ ರಾಂಪುರ ನಾಗೇಶ್, ಲಲಿತಾ ರುದ್ರಸ್ವಾಮಿ, ಜಾನಕಮ್ಮ, ಇದ್ದರು.

'ಸಂಘ ಸಂಸ್ಥೆಗಳ ಅನುದಾನ: ನೀತಿ ಮರುಪರಿಶೀಲಿಸಿ'

ಬೆಂಗಳೂರು: 'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಂಘ ಸಂಸ್ಥೆಗಳಿಗೆ ನೀಡುವ ವಾರ್ಷಿಕ ಅನುದಾನದ ನೀತಿಯನ್ನು ಮರು ಪರಿಶೀಲಿಸಬೇಕು' ಎಂದು ಒತ್ತಾಯಿಸಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅವರಿಗೆ ಉದಯಭಾನು ಕಲಾ ಸಂಘದ ಸಂಸ್ಥಾಪಕ ಗೌರವ ಕಾರ್ಯದರ್ಶಿ ಎಂ.ನರಸಿಂಹ ಪತ್ರ ಬರೆದಿದ್ದಾರೆ.

'ನಾಡು–ನುಡಿ, ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಕ್ಕೆ ನಿರಂತರವಾಗಿ ಶ್ರಮಿಸುತ್ತಿರುವ ಸಂಸ್ಥೆಗಳಿಗೆ ಸರ್ಕಾರ ಉದಾರ ಸಹಾಯ ನೀಡುವುದು ಅವಶ್ಯಕ. ಆದರೆ, ಎಲ್ಲ ಸಂಸ್ಥೆಗಳಿಗೆ ಕೇವಲ ₹2.5 ಲಕ್ಷ ಅನುದಾನದ ಮಿತಿ ನಿಗದಿಪಡಿಸುವುದು ನ್ಯಾಯಸಮ್ಮತವಲ್ಲ. ಸಂಸ್ಥೆಗಳನ್ನು ಸಕಾರಣವಿಲ್ಲದೆ ಕೈಬಿಟ್ಟಿರುವುದೂ ಸರಿಯಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA

No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period April - June 2022.

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	20	9	3.5	3	4	3	3
Mixed Print & Folded waste	3	1.5	0.2	0.3	0.2	0.3	0.2
DH,PV, Sudha & Mayura White cut Peel waste	2.5	0.6	0.3	0.5	0.4	0.4	0.3
White Reel ends including core DH,PV, Sudha & Mayura	8	2.5	0.6	1	0.7	1	1
DH, PV, Sudha & Mayura Reel Wrappers/Miscellaneous sweep/Bale pattie waste	10	2	0.9	1.2	0.4	0.9	0.9
Sudha & Mayura Print waste & unsolds-Magazine	1	0.6	0.9	0.6	0.6	0.9	0.05
Miscellaneous Tissue/Mixed White waste/ Carton boxes	2.5	0.8	0.3	0.4	0.2	0.5	0.2

For clarification, contact Procurement Head at **25880340/430**. Sealed Tenders/mail may be addressed to Procurement Head and sent to the above address **within 7 days** from the date of this advertisement.

ಕರ್ನಾಟಕ ಅರಣ್ಯ ಇಲಾಖೆ

21ನೇ ಮಾರ್ಚ್, 2022

ಅಂತರಾಷ್ಟ್ರೀಯ ಅರಣ್ಯ ದಿನ

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ

ಮಾನ್ಯ ಅರಣ್ಯ, ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕರ ವ್ಯವಹಾರಗಳ ಸಚಿವರು, ವನ್ಯಜೀವಿ ಸಂಕ್ಷಣೆಗಾಗಿ ಆಯೋಜಿಸಿದ್ದ ಸಪ್ತಾಹದ ಜಾಥಾದಲ್ಲಿ ಪಾಲ್ಗೊಂಡಿರುವುದು.



ಶ್ರೀ ಬಸವರಾಜ ಎಸ್. ಬೊಮ್ಮಾಯಿ

ಸನ್ಮಾನ್ಯ ಮುಖ್ಯಮಂತ್ರಿಗಳು

"ಅರಣ್ಯಗಳು ಹಾಗೂ ಸುಸ್ಥಿರ ಉತ್ಪಾದನೆ ಮತ್ತು ಬಳಕೆ"

ವಿಶ್ವದಾದ್ಯಂತ ಲಕ್ಷೋಪಲಕ್ಷ ಜನರಿಗೆ ಮರಗಳು ಸುರಕ್ಷಿತ ಕುಡಿಯುವ ನೀರು, ಆಹಾರ ಮತ್ತು ಆಸರೆ ಒದಗಿಸುತ್ತಿವೆ. ಅಷ್ಟೇ ಅಲ್ಲದೆ ಮರಗಳು ಇನ್ನೂ ಅನೇಕ ವಿಧಗಳಲ್ಲಿ ಪ್ರಯೋಜನಕಾರಿಯಾಗುವುದರೊಂದಿಗೆ ಅರಣ್ಯಗಳನ್ನು ಸುಸ್ಥಿರ ರೀತಿಯಲ್ಲಿ ನಿರ್ವಹಿಸಿದಲ್ಲಿ ನವೀಕರಿಸಬಹುದಾದ ಸಂಪನ್ಮೂಲಗಳಿಗೆ ಮೂಲಾಧಾರವಾಗುತ್ತವೆ.

ಅರಣ್ಯಗಳು: ಭೂಮಿಯ ಮೇಲಿನ ಬದುಕಿನ ಅವಿಭಾಜ್ಯ ಅಂಗ

- ಮರಗಿಡಗಳಿಲ್ಲದೆ ಭೂಮಿಯ ಮೇಲೆ ಬದುಕೇ ಇಲ್ಲ. ನಮ್ಮ ಭೂಮಿಯ ಮೇಲಿನ ಜೀವಿಗಳ ಜೀವ ಜಾಲದ ಮೇಲೆ ಅರಣ್ಯಗಳು ಬೀರಿರುವ ಪ್ರಭಾವ ಮತ್ತು ಪ್ರಾಮುಖ್ಯತೆಗೆ ಸಾಕ್ಷಿ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅರಣ್ಯಗಳನ್ನು ವಿವಿಧ ಉದ್ದೇಶಗಳಿಗಾಗಿ ವಿವೇಚನೆಯಿಲ್ಲದೆ ನಿರಂತರವಾಗಿ ನಾಶಪಡಿಸಲಾಗುತ್ತಿದೆ. ಇದರ ದುಷ್ಪರಿಣಾಮ ಈಗಾಗಲೇ ನಮ್ಮ ಪರಿಸರ ಮತ್ತು ಜೀವಿ ವಿಜ್ಞಾನದ ಮೇಲೆ ಉಂಟಾಗಿದೆ.
- ಪರಿಸ್ಥಿತಿ ಮತ್ತಷ್ಟು ಹದಗೆಡದಿರಲು ಪ್ರತಿಯೊಬ್ಬರು ತುರ್ತಾಗಿ ಹೆಚ್ಚು ಹೆಚ್ಚು ಗಿಡಗಳನ್ನು ನೆಡಲು ಕಾರ್ಯೋನ್ಮುಖರಾಗಿ ಮುನ್ನಡೆಯಲು ಸುಸಮಯವಿದು.
- ಜೀವಿಗಳ ಬದುಕಿನಲ್ಲಿ ಅರಣ್ಯಗಳು ವಹಿಸುವ ಬಹು ಅಮೂಲ್ಯ ಪಾತ್ರವನ್ನು ಗಮನದಲ್ಲಿಟ್ಟುಕೊಂಡು ಅಂತರಾಷ್ಟ್ರೀಯ ಅರಣ್ಯ ದಿನಾಚರಣೆಯನ್ನು ನಾವುಗಳೆಲ್ಲರೂ ತುಂಬು ಉತ್ಸಾಹ, ಶ್ರದ್ಧೆ, ಕ್ರಿಯಾಶೀಲತೆ ಮತ್ತು ಕಂಕಣಬದ್ಧತೆಯೊಂದಿಗೆ ಆಚರಿಸೋಣ, ಅರಣ್ಯ ನಾಶಕ್ಕೆ ಕೊನೆ ಹಾಡೋಣ. ನಮ್ಮ ಸುತ್ತಲಿನ ಪರಿಸರದಲ್ಲಿ ಹೆಚ್ಚು ಗಿಡಮರಗಳನ್ನು ನೆಡೋಣ.

ಅರಣ್ಯಗಳು: ಒಂದು ವಾಸ್ತವ ನೋಟ

- ಭೂಮಿಯ ಮೇಲೆ ಪ್ರತಿವರ್ಷ 13.5 ದಶಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚು ವಿಸ್ತೀರ್ಣದ (32 ದಶಲಕ್ಷ ಎಕರೆ) ಅರಣ್ಯ (ಸರಿಸುಮಾರು ಇಂಗ್ಲೆಂಡ್ ದೇಶದ ವಿಸ್ತೀರ್ಣದಷ್ಟು) ಪ್ರದೇಶ ಕಾಣೆಯಾಗುತ್ತಿದೆ. ಇದರಿಂದಾಗಿ ಜಾಗತಿಕ ಜೀವ ವೈವಿಧ್ಯತೆ ತೀವ್ರ ಅಪಾಯದಲ್ಲಿದೆ.
- ವಿಶ್ವದ 30 ಕೋಟಿಗೂ ಹೆಚ್ಚು ಜನರು ಅರಣ್ಯ ವಾಸಿಗಳಾಗಿರುವರು. ಆ ಕಾರಣ ಕಾಡುಗಳು ಕೇವಲ ಪಶುಪಕ್ಷಿಗಳಲ್ಲದೆ ಮನುಷ್ಯರಿಗೂ ಆಸರೆ ತಾಣವಾಗಿವೆ.
- ಜಗತ್ತಿನಲ್ಲಿ ಉತ್ಪತ್ತಿಯಾಗುವ ಒಟ್ಟು ಔಷಧಿಗಳ ಪ್ರಮಾಣದಲ್ಲಿ ಶೇಕಡಾ 25ರಷ್ಟು ಔಷಧಿಗಳು ಉಷ್ಣವಲಯದ ಅರಣ್ಯಗಳ ಮರಗಳಿಂದಲೇ ತಯಾರಾಗುತ್ತಿವೆ.
- ಕಾಡುಗಳಲ್ಲಿನ ಮರಗಿಡಗಳು ಹೀರಿಕೊಳ್ಳುವ ನೀರಿನ ಶೇಕಡಾ 95 ಪ್ರಮಾಣದಷ್ಟು ನೀರನ್ನು ಮರುವಿತರಣೆ ಮಾಡುವ ಮತ್ತು ಅಗತ್ಯವಿರುವ ಪ್ರದೇಶಕ್ಕೆ ನೀರುಣಿಸುವ ನೈಸರ್ಗಿಕ ನಾಲೆಗಳಾಗಿವೆ. ಆ ಮೂಲಕ ಮಳೆ ತಂದು ಮಣ್ಣಿನ ಫಲವತ್ತತೆಯನ್ನು ಮತ್ತು ಅಂತರ್ಜಲವನ್ನು ಹೆಚ್ಚಿಸುತ್ತಿವೆ.
- ಜಗತ್ತಿನ ಒಟ್ಟಾರೆ ಆರ್ಥಿಕತೆಯಲ್ಲಿ ಶೇಕಡಾ 70ರಷ್ಟು ಆರ್ಥಿಕತೆಯು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅರಣ್ಯಗಳ ಗಿಡಮರಗಳನ್ನೇ ಅವಲಂಬಿಸಿದೆ. ವಿಶ್ವದ ನವೀಕರಿಸಬಹುದಾದ ಒಟ್ಟು ಇಂಧನದಲ್ಲಿ ಶೇಕಡ 40 ರಷ್ಟು ಇಂಧನವು ಸೌದೆಯಿಂದಲೇ ಒದಗುತ್ತಿದೆ.

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಜನರಿಗಾಗಿ ಮತ್ತು ಭೂಮಿಗಾಗಿ ಸುಸ್ಥಿರ ಮರಗಿಡಗಳನ್ನು ಆಯ್ದುಕೊಳ್ಳಿ.

ಅರಣ್ಯ ಸಹಾಯವಾಣಿ : 1926

Likes on

ಸಂಕ್ಷಿಪ್ತ ಸುದ್ದಿ

ಅಟಲ್ ಭೂಜಲ: ತರಬೇತಿ ಇಂದಿನಿಂದ

ಬೆಂಗಳೂರು: ಅಟಲ್ ಭೂಜಲ ಯೋಜನೆಯಡಿ ರಚಿಸಲಾಗಿರುವ ಸಹಭಾಗಿತ್ವ ಅಂತರ್ಜಲ ನಿರ್ವಹಣಾ ಸಮಿತಿಯ ಸದಸ್ಯರಿಗೆ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಮಾರ್ಚ್ 21ರಿಂದ ಏಪ್ರಿಲ್ 1ರವರೆಗೆ ಹಮ್ಮಿಕೊಳ್ಳಲಾಗಿದೆ.

ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಸುತ್ತೋಲೆ ಹೊರಡಿಸಿದೆ.

ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಗದಗ, ಹಾಸನ, ಕೋಲಾರ, ರಾಮನಗರ ಹಾಗೂ ತುಮಕೂರು ಜಿಲ್ಲೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಅರ್ಜಿ ಆಹ್ವಾನ

ಬೆಂಗಳೂರು: ನಗರದ ವ್ಯಾಪ್ತಿಯಲ್ಲಿ 2021-22ನೇ ಸಾಲಿನ ಕಲ್ಯಾಣ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸಲು ಬಿಬಿಎಂಪಿಯು ಆರ್ಥಿಕವಾಗಿ ಹಿಂದುಳಿದಿರುವ ಸಾಮಾನ್ಯ ವರ್ಗದವರು, ಪರಿಶಿಷ್ಟ ಜಾತಿ– ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ, ಪಂಗಡದ ಗ್ರೂಪ್-ಡಿ ನೌಕರರು, ಗ್ಯಾಂಗ್‌ಮನ್, ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿವೇತನ, ಡಿ ಗ್ರೂಪ್ ನೌಕರರಿಗೆ ಸಹಾಯಧನ. ಪೌರ ಕಾರ್ಮಿಕರಿಗೆ ಚಿಕಿತ್ಸೆ, ಮನೆ ನಿರ್ಮಾಣ, ಮಕ್ಕಳ ಶಿಕ್ಷಣಕ್ಕೆ ನೆರವು, ಸ್ಮಶಾನದಲ್ಲಿ ಕಾರ್ಯನಿರ್ವಹಿಸುವವರಿಗೂ ಮನೆ ನಿರ್ಮಾಣಕ್ಕೆ ನೆರವು ನೀಡಲಾಗುತ್ತದೆ. ಹಿಂದುಳಿದ, ಅಲ್ಪಸಂಖ್ಯಾತ ವರ್ಗದವರಿಗೆ ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಣೆ, ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಸಹಾಯಧನ ಒದಗಿಸಲಾಗುತ್ತದೆ. ಬಿಬಿಎಂಪಿಯ ವೆಬ್ ಸೈಟ್‌ನಿಂದ (https://site.bbmp.gov.in/depar tment web sites/welfare) ಅರ್ಜಿ ಡೌನ್‌ಲೋಡ್ ಮಾಡಿಕೊಂಡು ವಲಯದ ಕಚೇರಿಗೆ ಸಲ್ಲಿಸಬಹುದು. **ಸಂಪರ್ಕಕ್ಕೆ :** ಮುರಳೀಧರ್, ಉಪ ಆಯುಕ್ತರು (ಕಲ್ಯಾಣ), ಬಿಬಿಎಂಪಿ (ಮೊಬೈಲ್: 98800 44467)

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಜ್ಞಾನಭಾರತಿ ವಾರ್ಡ್‌ನ ಹನುಮಂತರಾಯನ ಪಾಳ್ಯದಲ್ಲಿ ಒಳಚರಂಡಿ ಮತ್ತು ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅನೇಕ ತಿಂಗಳುಗಳ ಬಳಿಕವೂ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಇದರಿಂದ ಸ್ಥಳೀಯ ನಿವಾಸಿಗಳಿಗೆ ಬಹಳ ತೊಂದರೆಯಾಗಿದೆ.

ಚರಂಡಿ ಅಗೆದು ಬಿಟ್ಟಿರುವುದರಿಂದ ಮಕ್ಕಳು, ವೃದ್ಧರಿಗೆ ಅಪಾಯವಾಗಿ ಪರಿಣಮಿಸಿದೆ. ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿದರೆ, ಇಲ್ಲಿನ ನಿವಾಸಿಗಳು ನಿರಾತಂಕಗೊಳ್ಳಲಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ವೇಗ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.

ಗಂಗಾಧರ್, ಹನುಮಂತರಾಯನಪಾಳ್ಯ

ಹನುಮಂತರಾಯನ ಪಾಳ್ಯದಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿ

ವ್ಯಾಯಾಮ ಉಪಕರಣ ದುರಸ್ತಿ ಮಾಡಿ

ಅರಕೆರೆ ಮೈಕೊ ಬಡಾವಣೆಯ 2ನೇ ಹಂತದ ಉದ್ಯಾನದಲ್ಲಿರುವ ವ್ಯಾಯಾಮದ ಉಪಕರಣಗಳು ಹಾಳಾಗಿ ಹಲವು ತಿಂಗಳುಗಳೇ ಕಳೆದಿವೆ. ಅವುಗಳನ್ನು ದುರಸ್ತಿ ಮಾಡುವ ಅಥವಾ ಬದಲಿಸುವ ಕೆಲಸಕ್ಕೆ ಯಾರೂ ಮುಂದಾಗಿಲ್ಲ. ಸಂಬಂಧಪಟ್ಟವರಿಗೆ ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ. ವ್ಯಾಯಾಮ ಮಾಡಲು ಉದ್ಯಾನಕ್ಕೆ ಬರುವವರಿಗೆ ಇದರಿಂದ ಬಹಳ ಅನಾನುಕೂಲವಾಗಿದೆ.

ಉದ್ಯಾನ ನಿರ್ಮಿಸುವ ಜೊತೆಗೆ ಅದರ ನಿರ್ವಹಣೆಯನ್ನೂ ಸಮರ್ಪಕವಾಗಿ ನಿಭಾಯಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿದರೆ, ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ಬಿ.ಎಂ.ನಾರಾಯಣಸ್ವಾಮಿ, ಮೈಕೊ ಬಡಾವಣೆ

ಮೈಕೊ ಬಡಾವಣೆಯ ಉದ್ಯಾನದಲ್ಲಿರುವ ವ್ಯಾಯಾಮ ಉಪಕರಣ ಮುರಿದು ಬಿದ್ದಿರುವುದು.

ರಸ್ತೆ ಮೇಲೆಯೇ ಹರಿಯುವ ಕೊಳಚೆ ನೀರು

ಚಿಕ್ಕಪೇಟೆಯ ಆಸ್ಪತ್ರೆ ರಸ್ತೆ ಕೊಳಚೆಮಯ

ಚಿಕ್ಕಪೇಟೆ ವ್ಯಾಪ್ತಿಯ ಆಸ್ಪತ್ರೆ ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಇದರಿಂದ ಕೊಳಚೆ ನೀರು ಬಿವಿಕೆ ಐಯ್ಯಂಗಾರ್ ರಸ್ತೆ ಕೂಡುವವರಿಗೂ ಹರಿಯುತ್ತಿದೆ. ಈ ಸಮಸ್ಯೆ ಉದ್ಭವಿಸಿ ಹಲವು ದಿನಗಳಾದರೂ ಈವರೆಗೂ ದುರಸ್ತಿ ಕೆಲಸ ಆಗಿಲ್ಲ.

ಇದು ಪ್ರಮುಖ ವಾಣಿಜ್ಯ ಪ್ರದೇಶವಾಗಿದ್ದು, ಈ ರಸ್ತೆಯಲ್ಲಿ ಜನಸಂದಣಿ ಹಾಗೂ ವಾಹನ ಸಂಚಾರ ಹೆಚ್ಚು. ರಸ್ತೆಯಲ್ಲಿರುವ ಗುಂಡಿಗಳಲ್ಲಿ ಕೊಳಚೆ ನೀರು ಸಂಗ್ರಹಗೊಂಡಿರುತ್ತದೆ. ವಾಹನಗಳ ಸಂಚಾರದ ವೇಳೆ ಕೊಳಚೆ ನೀರು ಪಾದಚಾರಿಗಳ ಮೇಲೆ ಚಿಮ್ಮುವ ದೃಶ್ಯಗಳು ಇಲ್ಲಿ ಸಾಮಾನ್ಯ.

ಈ ಬಗ್ಗೆ ಸ್ಥಳೀಯ ನಾಗರಿಕರು ಹಾಗೂ ವ್ಯಾಪಾರಿಗಳು ಜಲಮಂಡಳಿಗೆ ಹಲವು ಬಾರಿ ನೀಡಿದರೂ ಪ್ರಯೋಜನ ಆಗಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರು ಮೂಗು ಮುಚ್ಚಿ ಹೆಜ್ಜೆ ಹಾಕುತ್ತಿದ್ದಾರೆ. ಚರಂಡಿ ದುರಸ್ತಿ ಮಾಡಿ, ಕೊಳಚೆ ನೀರು ಸರಾಗವಾಗಿ ಹರಿಯುವಂತೆ ಮಾಡಲು ಕೂಡಲೇ ಕ್ರಮ ಕೈಗೊಳ್ಳಿ.

ಶಿವಪ್ರಸಾದ್, ಸ್ಥಳೀಯ

ಹೆಚ್ಚುವರಿ ಕೌಂಟರ್‌ನಲ್ಲಿ ಸೇವೆ ನೀಡಿ

ನಾಗರಬಾವಿ ಅಂಚೆ ಕಚೇರಿಗೆ ಕೆಲಸದ ನಿಮಿತ್ತ ತೆರಳಿದ್ದೆ. ಅಲ್ಲಿದ್ದ ಸರತಿ ಸಾಲಿನಲ್ಲಿ ಬಹುಪಾಲು ವಯಸ್ಸಾದವರೇ ಇದ್ದರು. ವೃದ್ಧಾಪ್ಯ ವೇತನ, ವಿಧವಾ ವೇತನ ಪಡೆಯಲು ಅವರು ಬಂದಿದ್ದರು. ಅಂಗವಿಕಲರೊಬ್ಬರೂ ಇದ್ದರು. ಅಲ್ಲಿ ಒಂದೇ ಕೌಂಟರ್‌ನಲ್ಲಿ ಸೇವೆ ನೀಡಲಾಗುತ್ತಿತ್ತು. ಈ ಬಗ್ಗೆ ಕೇಳಿದ್ದಕ್ಕೆ ಒಂದೇ ಕೌಂಟರ್ ಇರುವುದಾಗಿ ಸಿಬ್ಬಂದಿ ಹೇಳಿದರು. ಅಲ್ಲಿ ಮತ್ತೊಂದು ಕೌಂಟರ್ ಇದ್ದರೂ ಸೇವೆ ಇರಲಿಲ್ಲ.

ಪ್ರತಿ ತಿಂಗಳ ಆರಂಭದ ವಾರ ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ ಬಟವಾಡೆ ಸಮಯ. ಆ ಸಮಯದಲ್ಲಿ ಹೆಚ್ಚುವರಿ ಕೌಂಟರ್ ತೆರೆದರೆ, ಸಾಲುಗಟ್ಟಿ ನಿಲ್ಲುವುದು ತಪ್ಪಲಿದೆ. ವಯಸ್ಸಾದವರಿಗೂ ಬಹಳ ಅನುಕೂಲವಾಗಲಿದೆ. ಸಿಬ್ಬಂದಿ ಕೊರತೆ ನೆಪದಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡುವುದು ಸರಿಯಲ್ಲ. ಸಿಬ್ಬಂದಿಯೂ ಜನರೊಂದಿಗೆ ಸೌಜನ್ಯವಾಗಿ ವರ್ತಿಸಬೇಕು.

ತುಕಾರಾಂ, ಮಲ್ಲತ್ತಹಳ್ಳಿ

ನಾಗರಬಾವಿ ಅಂಚೆ ಕಚೇರಿಯಲ್ಲಿ ಸರತಿ ಸಾಲು

ಬಸ್ ಹತ್ತಲು ಸಮಸ್ಯೆ

ಕೆಂಗೇರಿ ಮತ್ತು ಅಂಬೇಡ್ಕರ್ ಕಾಲೇಜು ಕಡೆಗೆ ಹೋಗುವ ಬಿಎಂಟಿಸಿ ಬಸ್‌ಗಳು ಕೆಂಗುಂಟೆ ಸಿಗ್ನಲ್ ವೃತ್ತದ ಬಳಿ ನಿಲುಗಡೆ ನೀಡುತ್ತವೆ. ಆದರೆ, ಇಲ್ಲಿ ಸದಾ ವಾಹನಗಳ ಸಂಚಾರ ಹಾಗೂ ದಟ್ಟಣೆ ಇರುವುದರಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಬಸ್ ಹತ್ತುವಾಗ ಮತ್ತು ಇಳಿಯುವಾಗ ಪ್ರಯಾಸ ಪಡುತ್ತಾರೆ. ಕೆಲವರು ಬಸ್ ಹತ್ತುವ ಭರದಲ್ಲಿ ವಾಹನಗಳ ನಡುವೆ ಓಡಿ ಬರುತ್ತಾರೆ. ಪ್ರಯಾಣಿಕರ ಹಿತಕ್ಕಾಗಿ ಬಸ್‌ಗಳ ನಿಲುಗಡೆಗೆ ಸೂಕ್ತ ಮತ್ತು ವಿಶಾಲವಾದ ಜಾಗ ನಿಗದಿ ಮಾಡಿ.

ಗೋವಿಂದರಾಜುಲು, ನಾಗರಬಾವಿ

ಸುದ್ದಿ 2 ನಿಮಿಷ

‘ರಂಗಾಯಣದಲ್ಲಿ ಹಿಂದೆ ಅನಾಚಾರ ನಡೆದಾಗ ಏಕೆ ಪ್ರತಿಭಟಿಸಲಿಲ್ಲ’

ಮೈಸೂರು: ‘ಮಾಜಿ ಮುಖ್ಯಮಂತ್ರಿ ಮಗ, ವಿದೇಶದಲ್ಲಿ ಬೌನ್ಸರ್‌ನಿಂದ ಪೆಟ್ಟು ತಿಂದು ಮೃತಪಟ್ಟಾಗ ಅವರ ಶ್ರದ್ಧಾಂಜಲಿ ಸಭೆಯನ್ನು ರಂಗಾಯಣದಲ್ಲಿ ಮಾಡಿದಾಗ ಯಾರೂ ವಿರೋಧಿಸಿರಲಿಲ್ಲ ಏಕೆ?’ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರಶ್ನಿಸಿದರು.

ಭಾನುವಾರ ಬಹುರೂಪಿ ರಂಗೋತ್ಸವದ ಸಮಾರೋಪದಲ್ಲಿ ಮಾತನಾಡಿ, ‘ಬಹುರೂಪಿಗೆ ಚಕ್ರವರ್ತಿ ಸೂಲಿಬೆಲೆ ಅವರನ್ನು ಕರೆಸಿದ್ದಕ್ಕೆ ಕೆಲವರು ನನ್ನ ವಿರುದ್ಧ ಮುಗಿಬಿದ್ದಿದ್ದರು. ರಂಗಾಯಣದಲ್ಲಿ ಈ ಹಿಂದೆ ಅನಾಚಾರಗಳು ಆಗಿದ್ದಾಗ ಅವರು ಪ್ರತಿಭಟಿಸಿಲ್ಲ ಏಕೆ’ ಎಂದು ಹರಿಹಾಯ್ದರು.

‘ಅರ್ಬನ್ ನಕ್ಸಲರೆಂದು ಕುತ್ತಿಗೆಗೆ ಬೋರ್ಡ್ ನೇತುಹಾಕಿಕೊಂಡವರು ಇಲ್ಲಿ ಮುಖ್ಯ ಅತಿಥಿಗಳಾಗಿ ಬಂದು ಹೋಗಿದ್ದಾರೆ. ಕೋಲೆ ಬಸವ ಕಾರ್ಯಕ್ರಮವನ್ನು ನೋಡಿ ‘ಗೋವು’ ಎಂಬ ಕಾರಣಕ್ಕೆ ಮುಖ್ಯ ಅತಿಥಿ ಸ್ಥಾನವನ್ನು ಬಹಿಷ್ಕರಿಸಿ ಹೊರನಡೆದವರೂ ಇದ್ದಾರೆ. ಬಾಂಗ್ಲಾ ನುಸುಳುಕೋರರಿಗೆ ಮತದಾನದ ಹಕ್ಕು ಕೊಡಿ ಎಂದು ವಾದಿಸಿದ್ದವರೂ ಇಲ್ಲಿ ಬಂದಿದ್ದಾರೆ’ ಎಂದು ಎಂದು ಕಿಡಿಕಾರಿದರು.

‘ಬಹುರೂಪಿಗೆ ಆಹ್ವಾನಿಸಿರುವ ಅತಿಥಿಗಳ ಬಗ್ಗೆ ಕ್ಯಾತೆ ತೆಗೆದಿದ್ದ ಹಲವರು ರಂಗಾಯಣದ ಗೇಟಿನ ಮುಂದೆ 20 ದಿನ ಧರಣಿ ನಡೆಸಿ, ನನ್ನ ವಜಾಕ್ಕೆ ಒತ್ತಾಯಿಸಿದ್ದರು. ಯಾರಿಗೂ ಹೆದರುವವ ನಾನಲ್ಲ. ರಂಗಾಯಣ ಸ್ವೇಚ್ಛೆಯ ಸಂಸ್ಥೆಯಲ್ಲ’ ಎಂದು ತಿರುಗೇಟು ನೀಡಿದರು.

‘ಬಹುರೂಪಿಯನ್ನು ಬಹಿಷ್ಕರಿಸಲು ಕೆಲವರು ಕರೆಕೊಟ್ಟಿದ್ದರು. ಆದರೆ, 10 ದಿನ ಕಾಲವೂ ಸಾವಿರಾರು ರಂಗಪ್ರೇಮಿಗಳು ಬಂದಿದ್ದು, ಉತ್ಸವವನ್ನು ಯಶಸ್ವಿಗೊಳಿಸಿದ್ದಾರೆ. ಇಷ್ಟು ವರ್ಷ ಇಲ್ಲಿ ಉತ್ಸವ, ವಿಚಾರ ಸಂಕಿರಣಗಳ ಹೆಸರಿನಲ್ಲಿ ಒಂದೇ ಸಿದ್ಧಾಂತ ಮತ್ತು ವಾದವನ್ನು ಜನರ ತಲೆಗೆ ತುರುಕಲಾಗಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ರಂಗಾಯಣ ಎಲ್ಲರಿಗೂ ಮುಕ್ತವಾಗಿದೆ’ ಎಂದರು.

ಕನ್ನಡ ಬರದ ಶಿಕ್ಷಕರ ನೇಮಕ: ಖಂಡನೆ

ಬೆಂಗಳೂರು: ಕಾಸರಗೋಡಿನಲ್ಲಿರುವ ಕನ್ನಡ ಶಾಲೆಗಳಲ್ಲಿ ಕನ್ನಡ ಗೊತ್ತಿರದ ಶಿಕ್ಷಕರನ್ನು ನೇಮಿಸಿರುವ ಕೇರಳ ಸರ್ಕಾರದ ನಡೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಖಂಡಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್ ನಾಗಾಭರಣ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

‘ಗಡಿನಾಡ ಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾಸರಗೋಡು ಜಿಲ್ಲೆಯ ಕನ್ನಡ ಮಾಧ್ಯಮ ಶಾಲೆಗಳಿಗೆ ಕನ್ನಡ ಬರುವ ಶಿಕ್ಷಕರನ್ನು ನೇಮಿಸಬೇಕು. ಈ ಬಗ್ಗೆ ಇಲ್ಲಿನ ಸರ್ಕಾರವು ಕೇರಳ ಸರ್ಕಾರವನ್ನು ಒತ್ತಾಯಿಸಬೇಕು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಕನ್ನಡ ಗೊತ್ತಿಲ್ಲದ ಶಿಕ್ಷಕರ ನೇಮಕದಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಕುಸಿಯಲಿದೆ. ಕಾಸರಗೋಡಿಗೆ ಸಂವಿಧಾನಬದ್ಧ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನ ಇರುವುದರಿಂದ, ಕನ್ನಡ ಗೊತ್ತಿರುವ ಶಿಕ್ಷಕರನ್ನೇ ಅಲ್ಲಿನ ಶಾಲೆಗಳಿಗೆ ನೇಮಿಸಬೇಕು ಎಂದು ಕೇರಳ ಹೈಕೋರ್ಟ್ 2016ರಲ್ಲಿ ಆದೇಶಿಸಿದೆ. ಆದರೂ ಕನ್ನಡ ಗೊತ್ತಿರುವ ಶಿಕ್ಷಕರನ್ನು ನೇಮಿಸದಿರುವುದು ವಿಪರ್ಯಾಸ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ನಿರುದ್ಯೋಗ, ಬೆಲೆ ಏರಿಕೆ ವಿರುದ್ಧ ಹೋರಾಟ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಮೈಸೂರು: ‘ಬಿಜೆಪಿಯವರು ಯಾವುದೇ ಕಾರ್ಯಸೂಚಿ, ವಿಚಾರ ಕೈಗೆತ್ತಿಕೊಳ್ಳಲಿ. ನಾವು ಮಾತ್ರ ನಿರುದ್ಯೋಗ, ಬೆಲೆ ಏರಿಕೆ ವಿಚಾರ ಇಟ್ಟುಕೊಂಡು ಹೋರಾಟ ನಡೆಸುತ್ತೇವೆ. ಕಬ್ಬಿಣ, ಸಿಮೆಂಟ್ ದರ ಏರಿಕೆಯಾಗಿದ್ದು, ಮನೆ ನಿರ್ಮಿಸಲು ಕಷ್ಟಪಡಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ರಾಜ್ಯದ ಜನ ನೆಮ್ಮದಿಯಾಗಿರಲು ಸಾಧ್ಯವೇ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿಜೆಪಿಯವರು ಸಮಾಜ ಒಡೆಯಲು ಏನು ಬೇಕೋ ಅದನೆಲ್ಲಾ ಮಾಡುತ್ತಿದ್ದಾರೆ. ಅವರೆಲ್ಲಾ ರಾಷ್ಟ್ರವಿರೋಧಿಗಳು. ಈಗ ಭಗವದ್ಗೀತೆ ವಿಚಾರ ಕೈಗೆತ್ತಿಕೊಂಡಿದ್ದಾರೆ. ನಮ್ಮ ಜನ ದಡ್ಡರಲ್ಲ’ ಎಂದರು.

‘ಭಗವದ್ಗೀತೆಯ ಕೆಲ ಅಂಶಗಳು, ಶ್ಲೋಕಗಳು ಈಗ ಪುಸ್ತಕಗಳಲ್ಲಿ ಇಲ್ಲವೇ’ ಎಂದು ಪ್ರಶ್ನಿಸಿ, ‘ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ’ ಎಂಬ ಶ್ಲೋಕ ಹೇಳಿದರು. ‘ಇಂಥ 23 ಶ್ಲೋಕ ಹೇಳುತ್ತೇನೆ. ನಮ್ಮಲ್ಲಿ ಗೊಂದಲ ಇಲ್ಲ. ನಾವೆಲ್ಲಾ ಹಿಂದೂಗಳು’ ಎಂದರು.

‘ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಮಹಾಭಾರತ, ರಾಮಾಯಣ ಮಹಾಗ್ರಂಥಗಳನ್ನು ದೂರದರ್ಶನದಲ್ಲಿ ವರ್ಷಗಟ್ಟಲೇ ಜನರಿಗೆ ತೋರಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವ ದೊರಕಿಸಿಕೊಟ್ಟಿದ್ದಾರೆ’ ಎಂದು ಅವರು ತಿರುಗೇಟು ನೀಡಿದರು.

‘ಕಲ್ಲಡ್ಕ ಪ್ರಭಾಕರ ಭಟ್ ಬಿಜೆಪಿಯವರೋ, ಆರ್‌ಎಸ್‌ಎಸ್‌ನವರೋ? ಅವರ ಹಿನ್ನೆಲೆ ನನಗೆ ಗೊತ್ತಿಲ್ಲ. ಹೀಗಾಗಿ, ಅವರ ಬಗ್ಗೆ ಮಾತನಾಡುವುದರಲ್ಲಿ ಅರ್ಥ ಇಲ್ಲ. ಒಬ್ಬ ಮಂತ್ರಿ ರಾಷ್ಟ್ರಧ್ವಜ ವಿಚಾರವಾಗಿ ಹೇಳಿಕೆ ನೀಡಿದಾಗ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಉತ್ತರ ಕೊಟ್ಟಿದ್ದಾರೆ. ನಮ್ಮ ಹೋರಾಟದ ಉದ್ದೇಶ ಹಾಗೂ ನಡ್ಡಾ ಮಾತು ಒಂದೇ ಆಗಿದೆ’ ಎಂದು ಹೇಳಿದರು.

‘ಪಕ್ಷದಲ್ಲಿ ಸದಸ್ಯತ್ವ ಅಭಿಯಾನ ನಡೆಯುತ್ತಿದ್ದು, ಎಲ್ಲಾ ಕಡೆ ಪ್ರವಾಸ ನಡೆಸಿ, ಪರಿಶೀಲಿಸುತ್ತಿದ್ದೇನೆ. ಶಾಸಕ ಸ್ಥಾನಕ್ಕೆ ಸ್ಪರ್ಧಿಸಲು ಬಯಸುವವರು ಹೆಚ್ಚು ಸದಸ್ಯತ್ವ ಮಾಡಿಸಬೇಕು. ಇಲ್ಲದಿದ್ದರೆ ಅವರು ನಾಯಕರಾಗಲು ಸಾಧ್ಯವಿಲ್ಲ’ ಎಂದರು.

ಬಿಜೆಪಿಯಿಂದ ಧರ್ಮ ಆಧರಿತ ರಾಜಕೀಯ- ಮಹದೇವಪ್ಪ

ಬೆಂಗಳೂರು: ‘ರಾಷ್ಟ್ರಧ್ವಜ, ಹಿಜಾಬ್ ಮತ್ತು ಕಾಶ್ಮೀರಿ ಫೈಲ್ಸ್ ಚಲನಚಿತ್ರ... ಚುನಾವಣಾ ವರ್ಷದಲ್ಲಿ ಕೋಮುಗಲಭೆ ಹಬ್ಬಿಸುವ ಭಾಗವಾಗಿ ಈಗ ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಅಳವಡಿಸಬೇಕೆಂದು ಬಿಜೆಪಿಗರು ಗದ್ದಲ ಆರಂಭಿಸಿದ್ದಾರೆ. ಭಗವದ್ಗೀತೆಯನ್ನೂ ವಿವಾದಿತ ವಸ್ತುವಾಗಿಸಿ, ಧರ್ಮ ಆಧರಿತ ರಾಜಕೀಯ ಮಾಡಲು ಬಿಜೆಪಿ ಹೊರಟಿದೆ’ ಎಂದು ಕಾಂಗ್ರೆಸ್ ಮುಖಂಡ ಡಾ. ಎಚ್‌.ಸಿ. ಮಹದೇವಪ್ಪ ಟೀಕಿಸಿದ್ದಾರೆ.

‘ಬಿಜೆಪಿಗರ ಕೆಟ್ಟ ನಡೆ-ನುಡಿ ಮತ್ತು ಸಮಾಜ ಒಡೆಯುವ ರೀತಿ ನೀತಿ ಗಮನಿಸಿದರೆ ಅವರು ಪುರಾಣದ ಗ್ರಂಥಗಳನ್ನು ಓದಿಲ್ಲ ಮತ್ತು ಅದರ ತಿಳಿವಳಿಕೆ ಅರ್ಥ ಮಾಡಿಕೊಂಡಿಲ್ಲ ಎಂದೆನಿಸುತ್ತದೆ. ಹಾಗೆ, ಅರ್ಥ ಮಾಡಿಕೊಂಡು ಧರ್ಮದ ಮಾರ್ಗದಲ್ಲೇ ಅವರು ಇದ್ದಿದ್ದರೆ, ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದರು. ಶೇ 40 ಕಮಿಷನ್ ಪಡೆದು ರಾಜ್ಯದ ಅಭಿವೃದ್ಧಿಗೆ ಕೆಲಸಗಳಿಗೆ ಕಂಟಕ ಆಗುತ್ತಿರಲಿಲ್ಲ’ ಎಂದಿದ್ದಾರೆ.

‘ಹಿಂದೂಗಳಿಗೆ ಭಗವದ್ಗೀತೆ ಇದೆ, ಮುಸ್ಲಿಮರಿಗೆ ಕುರಾನ್ ಇದೆ, ಕ್ರೈಸ್ತರಿಗೆ ಬೈಬಲ್ ಇದೆ. ಆದರೆ ಭಾರತೀಯರೆಲ್ಲರ ರಕ್ಷಣೆಗೆ ಬಾಬಾ ಸಾಹೇಬರು ರಚಿಸಿ ಕೊಟ್ಟ ಸಂವಿಧಾನವಿದೆ. ಹೀಗಾಗಿ, ಸಂವಿಧಾನವನ್ನು ಮೊದಲ ಪ್ರಾಶಸ್ತ್ಯವಾಗಿ ಎಲ್ಲರೂ ಓದಬೇಕು. ಮುಂದಿನ ದಿನ ಗಳಲ್ಲಿ ಸಂವಿಧಾನದ ಪುಸ್ತಕವನ್ನು ಎಲ್ಲ ಮನೆಗಳಿಗೂ ತಲುಪಿಸಬೇಕು ಎಂಬ ಮಹದಾಸೆ ನನ್ನದು’ ಎಂದು ತಿಳಿಸಿದ್ದಾರೆ.

‘ಜನಪರ ಆಡಳಿತ ನಡೆಸಲು ಯೋಗ್ಯತೆ ಇಲ್ಲದಿದ್ದರೂ, ಹರಕೆಯ ಕುರಿಗಳನ್ನು ಮುಂದೆ ಬಿಟ್ಟು ಧರ್ಮದ ಆಧಾರದಲ್ಲಿ ಚುನಾವಣಾ ಗಲಭೆ ಎಬ್ಬಿಸಲು ಹೊರಟಿರುವ ಬಿಜೆಪಿಗರು ಮೊದಲು ಮಹಾಕಾವ್ಯಗಳಲ್ಲಿನ ಉತ್ತಮ ಅಂಶಗಳನ್ನು ಓದಿ ಅರ್ಥ ಮಾಡಿಕೊಳ್ಳಲಿ’ ಎಂದಿದ್ದಾರೆ.

‘ಹಿಜಾಬ್ ವಿವಾದದಿಂದ ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿ’

ಪ್ರಜಾವಾಣಿ ವಾರ್ತೆ

ಸಮಾವೇಶದಲ್ಲಿ ಪತ್ರಕರ್ತ ಬಿ.ಎಂ. ಹನೀಫ್ ಮಾತನಾಡಿದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಗೌರಮ್ಮ, ಕೆ. ನೀಲಾ, ದೇವಿ, ಕೆ.ಎಸ್. ವಿಮಲಾ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಹಿಜಾಬ್ ವಿವಾದದಿಂದ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆ. ಸಂಘ ಪರಿವಾರ ಈ ವಿಷಯವನ್ನು ರಾಜಕೀಯ ದುರ್ಬಳಕೆ ಮಾಡಿಕೊಂಡಿದೆ’ ಎಂದು ಪತ್ರಕರ್ತ ಬಿ.ಎಂ. ಹನೀಫ್ ಹೇಳಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಯೋಜಿಸಿದ್ದ ‘ಮಹಿಳೆಯರ ಶಿಕ್ಷಣದ ಹಕ್ಕು–ಆಯ್ಕೆ ಸ್ವಾತಂತ್ರ್ಯ’ ವಿಷಯದ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಹಿಜಾಬ್ ವಿಷಯವನ್ನು ವಿವಾದ ಮಾಡುವ ಅಗತ್ಯವೇ ಇರಲಿಲ್ಲ. ಸ್ಥಳೀಯವಾಗಿ ಬಗೆಹರಿಸಿಕೊಳ್ಳಬಹುದಾಗಿತ್ತು. ಆದರೆ, ಈ ವಿಷಯ ಅಂತರರಾಷ್ಟ್ರೀಯಮಟ್ಟದಲ್ಲಿ ಸುದ್ದಿಯಾಗಿ, ನಾನಾ ಆಯಾಮ ಪಡೆದುಕೊಂಡಿತು’ ಎಂದರು.

‘ಈ ವಿವಾದದಿಂದಾಗಿ ಮುಸ್ಲಿಂ ಸಮುದಾಯದ ಶೇ 10ರಷ್ಟು ಹೆಣ್ಣು ಮಕ್ಕಳ ಕಲಿಕೆಗೆ ಸಮಸ್ಯೆಯಾಗಿದೆ. ಅನೇಕರು ಕಲಿಕೆಯಿಂದ ದೂರ ಸರಿಯುತ್ತಿದ್ದಾರೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿದ್ದ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಪೈಕಿ ಶೇ 15ರಷ್ಟು ಮಂದಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಿಟ್ಟು ಅಲ್ಪಸಂಖ್ಯಾತರ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೇರಿದರು. ಇದರಿಂದ ಅನೇಕ ಕುಟುಂಬಗಳಿಗೆ ಆರ್ಥಿಕ ಹೊರೆ ಬಿದ್ದಿದೆ. ಮಕ್ಕಳ ಶಿಕ್ಷಣ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಹಿಜಾಬ್ ವಿವಾದದ ಮೂಲಕ ಕೇವಲ ಮತ ಪ್ರಮಾಣ ಹೆಚ್ಚಿಸಿಕೊಳ್ಳಲು ಆಡಳಿತ ಪಕ್ಷ ಮುಂದಾಗಿದೆ’ ಎಂದೂ ಅವರು ದೂರಿದರು.

‘ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಗೆ 40 ವರ್ಷ ತುಂಬಿದೆ. ಶೋಷಿತ ಸಮುದಾಯವನ್ನು ಸಂಘಟಿಸುತ್ತಲೇ ಬೆಳೆದಿರುವ ಸಂಘಟನೆ ಇಂದು ಪ್ರಬಲ ಮಹಿಳಾ ಧ್ವನಿಯಾಗಿದೆ’ ಎಂದರು.

ಧರ್ಮ, ಮೂಲಭೂತವಾದ ಮತ್ತು ಮಹಿಳಾ ಶಿಕ್ಷಣ, ಸಂವಿಧಾನ ಮತ್ತು ಮಹಿಳೆಯರ ಹಕ್ಕುಗಳು, ಅಲ್ಪಸಂಖ್ಯಾತ ಮಹಿಳೆಯರ ತಲ್ಲಣಗಳು, ಮುಸ್ಲಿಂ ಮಹಿಳೆಯರ ಸಾಮಾಜಿಕ ಸ್ಥಿತಿ– ವಾಸ್ತವ ಮತ್ತು ಪರಿಹಾರ ವಿಷಯಗಳ ಕುರಿತು ಗೋಷ್ಠಿಗಳು ನಡೆದವು.

ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷೆ ದೇವಿ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು. ಮೀನಾಕ್ಷಿ ಬಾಳಿ, ಅಖಿಲಾ ವಿದ್ಯಾಸಂದ್ರ, ಶಾಖಿರಾ ಖಾನಮ್, ಕೆ. ಷರೀಫಾ ಪ್ರಬಂಧಗಳನ್ನು ಮಂಡಿಸಿದರು.

ಗೋಷ್ಠಿಗಳ ಅಧ್ಯಕ್ಷತೆಯನ್ನು ಕೆ.ಎಸ್. ವಿಮಲಾ ವಹಿಸಿದ್ದರು.

ಚಿತ್ರಾವಳಿ

ಹಂಸಜ್ಯೋತಿ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡ ನಟ ರಾಜೇಶ್‌ಗೆ ನುಡಿ–ಗೀತ ನಮನ ಕಾರ್ಯಕ್ರಮದಲ್ಲಿ ಚಿತ್ರ ನಿರ್ದೇಶಕ ಸಿ.ವಿ. ಶಿವಶಂಕರ್, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ಅವರು ರಾಜೇಶ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಆರ್‌.ವಿ.ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಟಿ ಬಿ.ಜಯಶ್ರೀ ಅವರು ‘ದೃಶ್ಯ ಮತ್ತು ಪ್ರದರ್ಶನ ಕಲಾ ಕೇಂದ್ರ’ದ ಲಾಂಛನ ಬಿಡುಗಡೆ ಮಾಡಿದರು. ನಟಿ ಅರುಂಧತಿ ನಾಗ್, ಸಾಹಿತಿ ಜಯಂತ ಕಾಯ್ಕಿಣಿ, ಆರ್‌.ವಿ. ವಿಶ್ವವಿದ್ಯಾಲಯದ ಕುಲಪತಿ ಎಂ.ಕೆ.ಪಾಂಡುರಂಗ ಶೆಟ್ಟಿ ಇದ್ದರು —ಪ್ರಜಾವಾಣಿ ಚಿತ್ರ

ಗೋವಿಂದರಾಜನಗರ: ಶಾಲಾ ಕಟ್ಟಡ ಉದ್ಘಾಟನೆ

ಬೆಂಗಳೂರು: ಗೋವಿಂದರಾಜನಗರ ಕ್ಷೇತ್ರದ ಡಾ.ರಾಜ್‌ಕುಮಾರ್ ವಾರ್ಡ್‌ನ ಮಾಗಡಿ ರಸ್ತೆ ಪೊಲೀಸ್ ಕಾಲೊನಿಯಲ್ಲಿ ನಿರ್ಮಾಣವಾಗಿರುವ ಪ್ರಾಥಮಿಕ ಶಾಲಾ ಕಟ್ಟಡ ಶನಿವಾರ ಲೋಕಾರ್ಪಣೆಗೊಂಡಿತು.

ಮುಖ್ಯಮಂತ್ರಿ ನವನಗರೋತ್ಥಾನ ಯೋಜನೆ ಮತ್ತು ಬಿಬಿಎಂಪಿಯ ₹12 ಕೋಟಿ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ವಸತಿ ಸಚಿವ ವಿ.ಸೋಮಣ್ಣ ಹಾಗೂ ತೋಟಗಾರಿಕಾ ಸಚಿವ ಮುನಿರತ್ನ ಅವರು ಕಟ್ಟಡವನ್ನು ಉದ್ಘಾಟಿಸಿದರು. ಅಮ್ಮೆಂಬಳ ಸುಬ್ಬರಾವ್ ಪೈ ಸ್ಮಾರಕ ಕಲಾ ಮಂಟಪ, ಕೆನರಾ ಬ್ಯಾಂಕ್ ಕಾಲೊನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವಿವಿಧೋದ್ದೇಶ ಕಟ್ಟಡವನ್ನೂ ಉದ್ಘಾಟಿಸಲಾಯಿತು. ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ವಲಯ ಆಯುಕ್ತ ಡಾ. ದೀಪಕ್, ವಲಯ ಜಂಟಿ ಆಯುಕ್ತ ಶ್ರೀನಿವಾಸ್ ಇದ್ದರು.

ಕೋವಿಡ್: ಆಸ್ಪತ್ರೆ ದಾಖಲಾತಿ 15ಕ್ಕೆ ಇಳಿಕೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಜತೆಗೆ ಆಸ್ಪತ್ರೆ ದಾಖಲಾತಿ ಸಂಖ್ಯೆಯೂ ಇಳಿಕೆಯಾಗಿದೆ. ಸೋಂಕಿತರಲ್ಲಿ ಸದ್ಯ 15 ಮಂದಿಗೆ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ವಾರದಲ್ಲಿ 692 ಮಂದಿಗೆ ಕೋವಿಡ್ ದೃಢಪಟ್ಟಿದೆ. ಕಳೆದ ತಿಂಗಳು ಈ ವೇಳೆ ಎರಡು ಸಾವಿರಕ್ಕಿಂತ ಅಧಿಕವಿದ್ದ ಸಕ್ರಿಯ ಪ್ರಕರಣಗಳ ಸಂಖ್ಯೆ, ಈಗ 1,500 ಆಸುಪಾಸಿನಲ್ಲಿದೆ.

ಏಳು ದಿನದಲ್ಲಿ ಒಬ್ಬರು ಆಸ್ಪತ್ರೆಗೆ ದಾಖಲಾಗಿದ್ದಾರೆ. ನಾಲ್ಕು ಮಂದಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಕೋವಿಡ್ ಮೂರನೇ ಅಲೆ ಸಂದರ್ಭದಲ್ಲಿ ನಿತ್ಯ ಹೊಸ ಪ್ರಕರಣಗಳ ಸಂಖ್ಯೆ ನಗರದಲ್ಲಿ 30 ಸಾವಿರದವರೆಗೆ ಹೆಚ್ಚಳ ಕಂಡಿತ್ತು.

ಈಗ ಸರಾಸರಿ 100ರ ಆಸುಪಾಸಿಗೆ ಇಳಿದಿದೆ. ಕೋವಿಡ್ ನಿಯಂತ್ರಣಕ್ಕೆ ಬಂದರೂ ಮುನ್ನೆಚ್ಚರಿಕೆ ಯಾಗಿ ಮೀಸಲು ಹಾಸಿಗೆಗಳನ್ನು ಉಳಿಸಿಕೊಳ್ಳಲಾಗಿದೆ.

ಸೋಂಕು ದೃಢ ಪ್ರಮಾಣ ಕೆಲ ದಿನಗಳಿಂದ ಶೇ 1ರ ಗಡಿಯ ಒಳಗೆ ಇದೆ. ಚಿಕಿತ್ಸೆಗೆ ಮೀಸಲಿಟ್ಟಿರುವ 2,142 ಹಾಸಿಗೆಗಳಲ್ಲಿ 2,127 ಹಾಸಿಗೆಗಳು ಖಾಲಿ ಉಳಿದಿವೆ.

ತಂದೆಗೆ ಪತ್ರ ಬರೆದು ಬೆದರಿಸಿದ್ದ ನಾಗೇಶ ಹೆಗಡೆ– ರೆಬೆಲ್ ಅಣ್ಣನ ಬಾಲ್ಯದ ನೆನಪಿನ ಬುತ್ತಿ ಬಿಚ್ಚಿಟ್ಟ ಸಹೋದರಿ

‘ಮನೆಗೆ ಕರೆಸಿಕೊಳ್ಳದಿದ್ದರೆ ಎಲ್ಲಾದರೂ ಓಡಿಹೋಗುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಣ್ಣಯ್ಯ ರೆಬೆಲ್ ಆದ. ಎಲ್ಲಿಂದಲೋ ಅಂಚೆ ಕಾರ್ಡ್ ಹೊಂದಿಸಿಕೊಂಡು, ‘ಶಾಲೆ ಬಿಡ್ತೇನೆ, ಮನೆಗೆ ಕರೆಸಿಕೊಳ್ಳದಿದ್ದರೆ ಎಲ್ಲಾದರೂ ಓಡಿ ಹೋಗ್ತೇನೆ’ ಎಂದು ಅಪ್ಪಯ್ಯನಿಗೆ ಪತ್ರ ಬರೀತಾ ಇದ್ದ’...

ನಾಗೇಶ ಹೆಗಡೆ ಅಭಿನಂದನಾ ಸಮಿತಿ ಹೊರತಂದಿರುವ ‘ನೆಲಗುಣ’ ಅಭಿನಂದನಾ ಗ್ರಂಥದಲ್ಲಿ ಶಾರದಾ ದಾಬಡೆ ಅವರು ಸಹೋದರನ ಬಾಲ್ಯದ ನೆನಪುಗಳನ್ನು ಸ್ಮರಿಸಿದ ಪರಿ ಇದು.

‘ಅಣ್ಣನನ್ನು ಒಂದು ತಿಂಗಳು ತಡವಾಗಿ ಬೇರೆ ಊರಿನ ಶಾಲೆಯೊಂದಕ್ಕೆ ಸೇರಿಸಲಾಗಿತ್ತು. ಗಣಿತ ಪಾಠ ಅರ್ಥವಾಗದೆ ರೋಸಿ ಹೋಗಿ ಈ ರೀತಿ ಪತ್ರ ಬರೆದಿದ್ದ. ಕ್ರಮೇಣ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡು ಕನ್ನಡ ವಿಷಯದಲ್ಲಿ ಜಿಲ್ಲೆಗೆ ಅತಿ ಹೆಚ್ಚು ಅಂಕ ಪಡೆದಿದ್ದ. ಈ ಸಂಬಂಧ ಅಪ್ಪನಿಗೆ ಪತ್ರವೊಂದು ಬಂದಿತ್ತು. ಆತನಿಗೆ ಬಹುಮಾನ ಕೊಡುತ್ತಿರುವ ಉಲ್ಲೇಖ ಅದರಲ್ಲಿತ್ತು. ಅದನ್ನು ನೋಡಿದೊಡನೆ ಅಣ್ಣನನ್ನು ಕರೆದುಕೊಂಡು ಮುಖ್ಯೋಪಾಧ್ಯಾಯರ ಮನೆಗೆ ಹೋಗಿದ್ದ ಅವರು ಅವರು ನೀಡಿದ್ದ 5 ರೂಪಾಯಿ ನೋಟನ್ನು ಸುಮಾರು ಒಂದು ತಿಂಗಳು ಊರಿನವರಿಗೆಲ್ಲಾ ತೋರಿಸಿ ಸಂಭ್ರಮಿಸಿದ್ದರು’ ಎಂದು ಲೇಖನದಲ್ಲಿ ವಿವರಿಸಿದ್ದಾರೆ.

ನಾಗೇಶ ಹೆಗಡೆ ಅವರನ್ನು ವಿ.ಗಾಯತ್ರಿ ಅಭಿನಂದಿಸಿದರು. (ಎಡದಿಂದ) ಕೆ.ಎನ್. ಗಣೇಶಯ್ಯ, ಲೇಖಕ ಡಾ.ಜಿ.ರಾಮಕೃಷ್ಣ, ಪ್ರೊ.ಬಿ.ಕೆ.ಚಂದ್ರಶೇಖರ್ ಹಾಗೂ ಗುರುರಾಜ್ ಎಸ್. ದಾವಣಗೆರೆ ಇದ್ದರು —ಪ್ರಜಾವಾಣಿ ಚಿತ್ರ

ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಪ್ರಧಾನ ಸಂಪಾದಕ ಗುರುರಾಜ್ ಎಸ್.ದಾವಣಗೆರೆ ಭಾನುವಾರ ಈ ಕುರಿತ ಮಾಹಿತಿ ಹಂಚಿಕೊಂಡರು.

‘ನಾಗೇಶ ಹೆಗಡೆಯವರ ಕೆಲಸಗಳಿಗೆ ಹೊಂದಿಕೊಳ್ಳುವಂತಹ ಶೀರ್ಷಿಕೆ ಪುಸ್ತಕಕ್ಕೆ ಇಡಬೇಕೆಂಬ ಅಭಿಲಾಷೆ ನಮ್ಮದಾಗಿತ್ತು. ಸಾಹಿತಿ ಜಯಂತ ಕಾಯ್ಕಿಣಿ ಅವರು ಸೂಚಿಸಿದ ‘ನೆಲಗುಣ’ ಹೆಸರನ್ನೇ ಅಂತಿಮಗೊಳಿಸಿದೆವು. ಮೊದಲ ಸಂಪುಟದಲ್ಲಿ 62 ಲೇಖಕರ ಬರಹ ಪ್ರಕಟಿಸಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಪುಟ ಹೊರತರುತ್ತೇವೆ’ ಎಂದರು.

‘ನಾಗೇಶ ಹೆಗಡೆ ಎಂಬ ‘ಇರುವೆ’, ‘ಸೆಲೆಬ್ರೆಟಿಗಳ ಸೃಷ್ಟಿಕರ್ತ’, ‘ಶಿಷ್ಯರಿಗೆ ಏಣಿ ಮತ್ತು ಗುರಾಣಿ’, ‘ಭಾಷೆಯ ವಿಷಯದಲ್ಲಿ ಕರ್ಮಠ’, ‘ನಮ್ಮ ನಡುವಣ ಗೂಗಲ್ ಪ್ಲಸ್’, ‘ಶಕುನದ ಹಕ್ಕಿ’ ಮುಂತಾದ ಲೇಖನಗಳು ಪುಸ್ತಕದಲ್ಲಿವೆ. ಜಯಂತ ಕಾಯ್ಕಿಣಿ ಅವರು ಹವ್ಯಕ ಭಾಷೆಯಲ್ಲೇ ಲೇಖನ ಬರೆದು ಕೊಟ್ಟಿದ್ದಾರೆ. ಎ.ಆರ್. ಮಣಿಕಾಂತ್ ಅವರ ‘ಮದ್ದೂರು ವಡೆ’ ಸೇರಿದಂತೆ ಹಲವು ವಿಶೇಷ ಪ್ರಸಂಗಗಳ ಕುರಿತ ಲೇಖನಗಳೂ ಪುಸ್ತಕದಲ್ಲಿ ಇವೆ’ ಎಂದು ಮಾಹಿತಿ ನೀಡಿದರು.

ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ (ರಾಜಕೀಯ ತಾಪದಲ್ಲಿ ಭೂಮಿಯ ಭವಿಷ್ಯ), ಕೃಷಿ ಚಿಂತಕಿ ವಿ. ಗಾಯತ್ರಿ (ಭೂ ಬಿಸಿಯ ಕಾಲದಲ್ಲಿ ನೆಲದವರ ನಾಳೆಗಳು) ಹಾಗೂ ಸಸ್ಯ ವಿಜ್ಞಾನಿ ಪ್ರೊ.ಕೆ.ಎನ್.ಗಣೇಶಯ್ಯ (ವಿಜ್ಞಾನಿಗಳ ಮೂಸೆಯಲ್ಲಿ ಎನ್‌ಎಚ್, ಪಿ.ಸಿ. ಮತ್ತು ಇ.ಟಿ) ಉಪನ್ಯಾಸ ನೀಡಿದರು.

‘ಅನ್ನಕೊಟ್ಟ ಸುಧಾ–ಪ್ರಜಾವಾಣಿ’

‘ಸುಧಾ’ ಹಾಗೂ ‘ಪ್ರಜಾವಾಣಿ’ ನನಗೆ ಅನ್ನ ಕೊಟ್ಟಿವೆ. ಇವು ಬದುಕಿಗೊಂದು ಅರ್ಥ ಕೊಟ್ಟಿವೆ. ನನಗೆ ಸಿಗುತ್ತಿರುವ ಗೌರವದಲ್ಲಿ ಈ ಪತ್ರಿಕೆಗಳ ಪಾಲು ಬಹುದೊಡ್ಡದು’ ಎಂದು ನಾಗೇಶ ಹೆಗಡೆ ಹೇಳಿದರು.

‘ದಿ ಪ್ರಿಂಟರ್ಸ್ ಮೈಸೂರು (ಪ್ರೈ) ಲಿಮಿಟೆಡ್ ಸಂಸ್ಥೆ ನಾಲ್ಕು ದಶಕಗಳಿಂದ ನಿರಂತರವಾಗಿ ಅಂಕಣ ಬರೆಯಲು ಅವಕಾಶ ಕೊಟ್ಟಿದೆ. ಬರಹಗಳಿಗೆ ಪ್ರತಿರೋಧ ಎದುರಾದಾಗ ಸದಾ ಬೆಂಬಲಕ್ಕೆ ನಿಂತಿದೆ’ ಎಂದು ಸ್ಮರಿಸಿದರು.

ಅಭಿನಂದನಾ ಗ್ರಂಥಕ್ಕೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸುವಾಗ ಗದ್ಗದಿತರಾಗಿ ಅವರು ಮಾತು ನಿಲ್ಲಿಸಿದರು.

ಪುಸ್ತಕ ಪರಿಚಯ



- **ಹೆಸರು:** ನೆಲಗುಣ
- **ಪ್ರಧಾನ ಸಂಪಾದಕ:** ಗುರುರಾಜ್ ಎಸ್. ದಾವಣಗೆರೆ
- **ಪುಟ:** 434
- **ಬೆಲೆ:** ₹ 250
- **ಪ್ರಕಾಶನ:** ನಾಗೇಶ ಹೆಗಡೆ ಅಭಿನಂದನಾ ಸಮಿತಿ

ರಥೋತ್ಸವ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು. ಮಧ್ಯ ಕರ್ನಾಟಕದ ಈ ಜಾತ್ರೆಗೆ ಲಕ್ಷಾಂತರ ಭಕ್ತರು ಸಾಕ್ಷಿಯಾದರು. ಕೋವಿಡ್ ಆತಂಕ ದೂರವಾಗಿದ್ದರಿಂದ ಭಕ್ತರ ದಂಡು ಹರಿದುಬಂದಿತ್ತು.
ಪ್ರಜಾವಾಣಿ ಚಿತ್ರ– ಸತೀಶ್ ಬಡಿಗೇರ

ಅಂಡಮಾನ್: ಗಾಳಿ ಸಹಿತ ಮಳೆ, ಜನರ ಸ್ಥಳಾಂತರ

ಪೋರ್ಟ್ ಬ್ಲೇರ್: ಅಂಡಮಾನ್ ನಿಕೋಬರ್ ದ್ವೀಪಕ್ಕೆ ಚಂಡಮಾರುತ 'ಆಸನಿ' ಸಮೀಪಿಸುತ್ತಿದ್ದಂತೆ ಭಾನುವಾರ ಗಾಳಿ ಸಹಿತ ಭಾರಿ ಮಳೆಯಾಗುತ್ತಿದೆ.

ಕರಾವಳಿ ಪ್ರದೇಶದ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದ್ದು, ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಡಮಾನ್, ಚೆನ್ನೈ ಹಾಗೂ ವಿಶಾಖಪಟ್ಟಣದಲ್ಲಿ ಹಡಗು ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ವರ್ಷದ ಮೊದಲ ಚಂಡಮಾರುತ ಅಪ್ಪಳಿಸುವ ಸಾಧ್ಯತೆಯ ಹಿನ್ನೆಲೆಯಲ್ಲಿ ಮೀನುಗಾರರಿಗೆ ಸಮುದ್ರಕ್ಕೆ ತೆರಳದಂತೆ ಸೂಚಿಸಲಾಗಿದೆ.

ದ್ವೀಪದ ವಿವಿಧ ಭಾಗಗಳಲ್ಲಿ ಆರು ಪರಿಹಾರ ಶಿಬಿರಗಳನ್ನು ತೆರೆಯಲಾಗಿದೆ.

ಲಕ್ಷ ದೀಪೋತ್ಸವ ಕಲಬುರಗಿಯಲ್ಲಿ ಭಾನುವಾರ ಶರಣಬಸವೇಶ್ವರ ಜಾತ್ರೆ ಪ್ರಯುಕ್ತ ದೇವಸ್ಥಾನದ ಆವರಣದಲ್ಲಿ ಲಕ್ಷ ದೀಪೋತ್ಸವ ಕಾರ್ಯಕ್ರಮ ನೆರವೇರಿತು
–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

₹ 16 ಲಕ್ಷಕ್ಕೆ ಮುಕ್ತಿ ಬಾವುಟ ಹರಾಜು

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ: ಪ್ರತಿ ವರ್ಷದಂತೆ ಈ ವರ್ಷವೂ ಗುರು ತಿಪ್ಪೇರುದ್ರಸ್ವಾಮಿಯ ವಾರ್ಷಿಕ ರಥೋತ್ಸವದಲ್ಲಿ ದೇವರ ಮುಕ್ತಿ ಬಾವುಟ ಹರಾಜು ಪ್ರಕ್ರಿಯೆ ನಡೆಯಿತು. ಚಳ್ಳಕೆರೆ ಎಪಿಎಂಸಿ ಮಾಜಿ ಅಧ್ಯಕ್ಷ ಟಿ. ಪ್ರಕಾಶ್ ಅವರು ₹ 16 ಲಕ್ಷಕ್ಕೆ ಬಾವುಟವನ್ನು ಹರಾಜಿನಲ್ಲಿ ಪಡೆದರು.

ಕಳೆದ ವರ್ಷ ನಾಯಕನಹಟ್ಟಿ ವಕೀಲ ಎಸ್. ಉಮಾಪತಿ ಎಂಬುವರು ₹ 21 ಲಕ್ಷಕ್ಕೆ ಬಾವುಟವನ್ನು ಪಡೆದಿದ್ದರು. ಸಂಪ್ರದಾಯದಂತೆ ರಥ ಎಳೆಯುವ ಮೊದಲು ಮುಕ್ತಿ ಬಾವುಟ ಹರಾಜು ಮಾಡಲಾಗುತ್ತದೆ.

ಸ್ಥಳೀಯ ಮುಖಂಡರು ₹ 5 ಲಕ್ಷಕ್ಕೆ ಹರಾಜು ಕೂಗಿದ್ದರು. ಜಾತ್ರೆಯಲ್ಲಿ ಮುಕ್ತಿ ಬಾವುಟ ಪಡೆದರೆ ಒಳ್ಳೆಯದಾಗುತ್ತದೆ ಎಂಬ ಬಲವಾದ ನಂಬಿಕೆ ಇದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಹೊರಟ್ಟಿ ಬಿಜೆಪಿ ಸೇರ್ಪಡೆ ಊಹಾಪೋಹ'

ಧಾರವಾಡ: 'ಜೆಡಿಎಸ್ ಪಕ್ಷದ ಮುಖಂಡ ಬಸವರಾಜ ಹೊರಟ್ಟಿ ಅವರ ಬಿಜೆಪಿ ಸೇರ್ಪಡೆ ವಿಷಯ ಕೇವಲ ಊಹಾಪೋಹ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ವಾಗ್ದಾಳಿ

'ಸಿದ್ದರಾಮಯ್ಯಗೆ ಹಿಜಾಬ್ ಅಲ್ಲ; ಕೇಸರಿ ಶಾಲು ಸಮಸ್ಯೆ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸಿದ್ದರಾಮಯ್ಯ ಅವರಿಗೆ 'ಹಿಜಾಬ್ ವಿವಾದ' ದೊಡ್ಡ ವಿಷಯ ಆಗಲಿಲ್ಲ. ಬದಲಿಗೆ ಕೇಸರಿ ಶಾಲು ಧರಿಸಿ ಹುಡುಗರು ಕಾಲೇಜಿಗೆ ಬಂದಿದ್ದು ದೊಡ್ಡ ವಿಷಯ ಆಯಿತು. ಹಿಜಾಬ್ ಬಗ್ಗೆ ಮಾತನಾಡಿದರೆ ಮತ ಬ್ಯಾಂಕ್ ನಷ್ಟವಾಗಬಹುದೆಂಬ ಭಯದಿಂದ, ಅದರ ನೆಪದಲ್ಲಿ ಗೋಧ್ರಾ ಘಟನೆ ಬಗ್ಗೆ ಮಾತನಾಡುತ್ತಿದ್ದಾರೆ' ಎಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರು ಆರೋಪಿಸಿದರು.



ಕಲ್ಲಡ್ಕ ಪ್ರಭಾಕರ ಭಟ್

ಗೋಧ್ರಾ ಹಿಂಸಾಚಾರದ ಬಗ್ಗೆ ಸಿದ್ದರಾಮಯ್ಯ ಅವರು ಈಚೆಗೆ ನೀಡಿದ್ದ ಹೇಳಿಕೆಗೆ, ಪ್ರತಿಕ್ರಿಯಿಸಿದ ಅವರು, 'ಗೋಧ್ರಾದಲ್ಲಿ ರೈಲು ಬೋಗಿಗೆ ಬೆಂಕಿ ಹಾಕಿದ ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಹಿಂದೂಗಳ ಮನೆಗೊಮ್ಮೆ ಸಿದ್ದರಾಮಯ್ಯ ಭೇಟಿ ನೀಡಿ ಬರಲಿ. ಅಲ್ಲಿ ಮುಸ್ಲಿಮರು ಮಾಡಿದ ಅತ್ಯಾಚಾರವನ್ನು ನಾಗರಿಕ ಸಮಾಜ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಗೋಧ್ರಾದಲ್ಲಿ 'ಆ್ಯಕ್ಷನ್'ಗೆ ಆನಂತರ 'ರಿಯಾಕ್ಷನ್' ನಡೆದಿತ್ತು' ಎಂದು ಅವರು ಹೇಳಿದರು.

'ಹಿಂದೂಗಳು ಈವರೆಗೆ ರಿಯಾಕ್ಷನ್ ನೀಡಿದ್ದಾರೆಯೇ ಹೊರತು ಆ್ಯಕ್ಷನ್ ಮಾಡಿಲ್ಲ. ಆದರೆ, ನಮ್ಮ ಬದುಕಿಗಾಗಿ ಹೋರಾಟ ಮಾಡುವುದು ಈಗ ಅನಿವಾರ್ಯವಾಗಿದೆ. ಅವರು ಆ್ಯಕ್ಷನ್ ನಿಲ್ಲಿಸಿದರೆ ರಿಯಾಕ್ಷನ್ ತಾನಾಗಿಯೇ ನಿಲ್ಲುತ್ತದೆ' ಎಂದು ಅವರು ಹೇಳಿದರು.

'ಸಮವಸ್ತ್ರ ಸಂಹಿತೆಗೆ ವಿದ್ಯಾರ್ಥಿನಿಯರ ಸಮ್ಮತಿ'

ಉಪ್ಪಿನಂಗಡಿ: ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಮುಸ್ಲಿಂ ವಿದ್ಯಾರ್ಥಿನಿಯರು ಸೋಮವಾರದಿಂದ ಕಾಲೇಜಿನ ಸಮವಸ್ತ್ರ ನಿಯಮಾವಳಿ ಪಾಲನೆ ಮಾಡಿ, ತರಗತಿಗೆ ಹಾಜರಾಗಲು ಒಪ್ಪಿದ್ದಾರೆ ಎಂದು ತಿಳಿದುಬಂದಿದೆ.

ನ್ಯಾಯಾಲಯದ ನಿಯಮಾವಳಿ ಅನುಸಾರ ಹಿಜಾಬ್ ಧರಿಸದೆ ಕಾಲೇಜಿಗೆ ಬರಬೇಕೆಂಬ ಕಾಲೇಜಿನ ಆಡಳಿತದ ನಿಲುವನ್ನು ಒಪ್ಪದ ವಿದ್ಯಾರ್ಥಿನಿಯರು ಶನಿವಾರವೂ ತರಗತಿ ಬಹಿಷ್ಕರಿಸಿದ್ದರು. ಈ ಕುರಿತು ಮಾತುಕತೆ ನಡೆದಾಗ 'ತೀರ್ಪನ್ನು ಯಾವುದೇ ಕಾರಣಕ್ಕೂ ಉಲ್ಲಂಘಿಸಲಾಗದು' ಎಂದು ಆಡಳಿತ ಮಂಡಳಿಯವರು ಮಾತುಕತೆಗೆ ಬಂದಿದ್ದ ಮುಖಂಡರಿಗೆ ಸ್ಪಷ್ಟಪಡಿಸಿದ್ದರು.

'ಮುಖಂಡರು ಮಾತುಕತೆ ನಡೆಸಿ, ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯಕ್ಕೆ ತೊಡಕುಂಟಾಗಬಾರದೆಂದು ಸೋಮವಾರದ ಬಳಿಕ ಕಾಲೇಜಿನ ನಿಯಮಪಾಲನೆಯೊಂದಿಗೆ ಕಾಲೇಜಿಗೆ ಹಾಜರಾಗಲು ನಿರ್ಧರಿಸಿದ್ದಾರೆ ಎಂಬ ಮಾಹಿತಿ ಬಂದಿದೆ' ಎಂದು ಕಾಲೇಜಿನ ಆಡಳಿತ ಸಮಿತಿ ಕಾರ್ಯಾಧ್ಯಕ್ಷ ಸುರೇಶ್ ಅತ್ರಮಜಲು ತಿಳಿಸಿದ್ದಾರೆ.

ಅಮಾನತು: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ, ಹೈಕೋರ್ಟ್ ತೀರ್ಪನ್ನು ಧಿಕ್ಕರಿಸಿ ಹಿಜಾಬ್ ಧರಿಸಿಯೇ ತರಗತಿಯೊಳಗೆ ಕುಳಿತಿದ್ದ ವಿದ್ಯಾರ್ಥಿನಿಯರು ಮತ್ತು ಅವರನ್ನು ಬೆಂಬಲಿಸಿ ದಾಂದಲೆ ಮಾಡಿ, ಉಪನ್ಯಾಸಕಿಯೊಂದಿಗೆ ಅನುಚಿತವಾಗಿ ವರ್ತಿಸಿದ ಕೆಲವು ವಿದ್ಯಾರ್ಥಿಗಳ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಕಾಲೇಜಿನ ಆಡಳಿತ ಮಂಡಳಿಯು ಅವರನ್ನು ಅಮಾನತುಗೊಳಿಸಲು ನಿರ್ಧರಿಸಿದೆ.

'ಪಠ್ಯದಲ್ಲಿ ಭಗವದ್ಗೀತೆ ಸೇರಿಸುವ ಪ್ರಸ್ತಾವ ಇಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪಠ್ಯಪುಸ್ತಕದಲ್ಲಿ ಭಗವದ್ಗೀತೆ ಸೇರಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಹೀಗಿರುವಾಗ ಆ ವಿಷಯದ ಬಗ್ಗೆ ಚರ್ಚೆ ಅನಗತ್ಯ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ಭಾನುವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿ, 'ಹಿಜಾಬ್ ವಿಚಾರದಲ್ಲಿ ಪರೀಕ್ಷೆಗೆ ಗೈರಾದರೆ ಮರುಪರೀಕ್ಷೆಗೆ ಅವಕಾಶವಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಆ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ' ಎಂದು ಅವರು ತಿಳಿಸಿದರು.

'ಹೈಕೋರ್ಟ್ ತೀರ್ಪು ಪರವಾಗಿ ಬಂದಿಲ್ಲ ಎಂದಾದರೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಉಲ್ಲಂಘಿಸುವುದು, ಪ್ರತಿಭಟಿಸುವುದು ಸರಿಯಲ್ಲ. ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸುವುದು ನಮ್ಮ ಜವಾಬ್ದಾರಿ. ಈ ಕರ್ತವ್ಯದಲ್ಲಿ ವಿಫಲರಾಗಿ ಛೀಮಾರಿ ಹಾಕಿಸಿಕೊಳ್ಳಲು ನಾವು ತಯಾರಿಲ್ಲ' ಎಂದು ತಿಳಿಸಿದರು.

'ದಿ ಕಾಶ್ಮೀರ್ ಫೈಲ್ಸ್' ನೋಡಲು ಯಾರಿಗೂ ಬಲವಂತ ಮಾಡುವುದಿಲ್ಲ. ಈ ಹಿಂದೆ ಏನು ನಡೆದಿತ್ತು ಎಂಬುದು ಜನರಿಗೆ ತಿಳಿಯಬೇಕು. ಕಾಶ್ಮೀರದ ಪಂಡಿತರು ಅನುಭವಿಸಿದ್ದ ನೋವನ್ನು ಸಿನಿಮಾ ಮಾಧ್ಯಮದ ಮೂಲಕ ಜನರಿಗೆ ತಿಳಿಸುವ ಕೆಲಸ ಆಗಿದೆ. ಅದರಲ್ಲಿ ತಪ್ಪೇನಿದೆ' ಎಂದು ಅವರು ಪ್ರಶ್ನಿಸಿದರು.

'ಗುಬ್ಬಿ ಕ್ಷೇತ್ರಕ್ಕೆ ಹೊಸ ಅಭ್ಯರ್ಥಿ'

ಗುಬ್ಬಿ (ತುಮಕೂರು): ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗುಬ್ಬಿ ಕ್ಷೇತ್ರದಿಂದ ಜೆಡಿಎಸ್ ಶಾಸಕ ಎಸ್.ಆರ್. ಶ್ರೀನಿವಾಸ್ ಬದಲು ಹೊಸ ಅಭ್ಯರ್ಥಿಯನ್ನು ಪಕ್ಷದಿಂದ ಕಣಕ್ಕಿಳಿಸಲಾಗುವುದು ಎಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಘೋಷಿಸಿದ್ದಾರೆ.

'ಶಾಸಕ ಎಸ್.ಆರ್ ಶ್ರೀನಿವಾಸ್ ಮತ್ತು ಜೆಡಿಎಸ್‌ಗೆ ಯಾವುದೇ ಸಂಬಂಧವಿಲ್ಲ. ಬಿ.ಎಸ್. ನಾಗರಾಜು ಅವರೇ ಪಕ್ಷದ ಅಭ್ಯರ್ಥಿ' ಎಂದರು.

'ಆಸನಿ' ಚಂಡಮಾರುತ: ರಾಜ್ಯಕ್ಕಿಲ್ಲ ಅಪಾಯ –ಹವಾಮಾನ ಇಲಾಖೆ

ರಾಜ್ಯದಲ್ಲಿ ಇದೇ 24ರವರೆಗೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಡಮಾನ್ ಮತ್ತು ನಿಕೋಬಾರ್ ಭಾಗದಲ್ಲಿ ಅಪ್ಪಳಿಸಲಿರುವ 'ಆಸನಿ' ಚಂಡಮಾರುತದಿಂದ ರಾಜ್ಯಕ್ಕೆ ಹೆಚ್ಚಿನ ಅಪಾಯ ಇರುವುದಿಲ್ಲ. ಆದರೆ, ರಾಜ್ಯದ ಹಲವು ಜಿಲ್ಲೆಗಳಲ್ಲಿ ಇದೇ 24ರವರೆಗೆ ಮಳೆಯಾಗುವ ಮುನ್ಸೂಚನೆ ಇರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

'ಬಂಗಾಳ ಕೊಲ್ಲಿಯಲ್ಲಿ ಸಂಭವಿಸಿರುವ ಪ್ರಬಲ ವಾಯುಭಾರ ಕುಸಿತವು ಸೋಮವಾರ (ಮಾ.21) ಸಂಜೆ ವೇಳೆ ಮತ್ತಷ್ಟು ತೀವ್ರಗೊಂಡು ಚಂಡಮಾರುತವಾಗಿ ಪರಿವರ್ತನೆಗೊಳ್ಳಲಿದೆ. ಚಂಡಮಾರುತ ರಾಜ್ಯಕ್ಕೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಕೆಲವೆಡೆ ಗುಡುಗು, ಸಿಡಿಲು ಸಹಿತ ಮಳೆಯಾಗಬಹುದು' ಎಂದು ಹವಾಮಾನ ಇಲಾಖೆಯ ತಜ್ಞ ಸದಾನಂದ ಅಡಿಗ 'ಪ್ರಜಾವಾಣಿ'ಗೆ ತಿಳಿಸಿದರು.

'ಆಗ್ನೇಯ ಬಂಗಾಳಕೊಲ್ಲಿ ಹಾಗೂ ದಕ್ಷಿಣ ಅಂಡಮಾನ್ ಪ್ರದೇಶದಲ್ಲಿ ವಾಯುಭಾರ ಕುಸಿತ ಪ್ರಬಲಗೊಂಡಿದೆ. ಮುಂದಿನ 24 ಗಂಟೆಗಳಲ್ಲಿ ಇದರ ತೀವ್ರತೆ ಹೆಚ್ಚಾಗಲಿದೆ. ಬಳಿಕ ಚಂಡಮಾರುತವಾಗಿ ಬಾಂಗ್ಲಾದೇಶ ಹಾಗೂ ಮ್ಯಾನ್ಮಾರ್ ಕರಾವಳಿಯತ್ತ ಸಾಗುವ ಸಾಧ್ಯತೆ ಇದೆ' ಎಂದು ಹೇಳಿದರು.

'ಮತ್ತೊಂದೆಡೆ ಮಧ್ಯಪ್ರದೇಶದಿಂದ ರಾಜ್ಯದ ಉತ್ತರ ಒಳನಾಡಿನವರೆಗೆ ಮೇಲ್ಮೈ ಸುಳಿಗಾಳಿ ವ್ಯಾಪಿಸಿದೆ. ಇವುಗಳ ಪರಿಣಾಮ ರಾಜ್ಯದಲ್ಲಿ ಎರಡು ದಿನಗಳಿಂದ ಮಳೆಯಾಗುತ್ತಿದೆ. ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳ ಹಲವೆಡೆ ಮುಂದಿನ ಐದು ದಿನಗಳವರೆಗೆ ಮಳೆಯಾಗುವ ಮುನ್ಸೂಚನೆ ಇದೆ' ಎಂದರು.

ಮಳೆ ಎಲ್ಲಿ, ಎಷ್ಟು?: ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಹಾಗೂ ಮೈಸೂರು ಭಾಗದಲ್ಲಿ ಭಾನುವಾರ 4 ಸೆಂ.ಮೀ ಮಳೆ ಸುರಿದಿದೆ. ಚಿಕ್ಕೋಡಿ, ಎಚ್.ಡಿ.ಕೋಟೆ 3, ಪುತ್ತೂರು, ಧರ್ಮಸ್ಥಳ, ನಿಪ್ಪಾಣಿ, ಧಾರವಾಡ, ರಾಯಚೂರು ಹಾಗೂ ಬೆಳಗಾವಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ರಾಯಚೂರಿನಲ್ಲಿ 40 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ದಾವಣಗೆರೆಯಲ್ಲಿ 16 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ತಿಕೋಟಾ: ಭಾರಿ ಬಿರುಗಾಳಿಗೆ ಧರೆಗುರುಳಿದ ದ್ರಾಕ್ಷಿ ಪಡ

ತಿಕೋಟಾ (ವಿಜಯಪುರ ಜಿಲ್ಲೆ): ತಾಲ್ಲೂಕಿನ ತಾಜಪುರ ಗ್ರಾಮದ ಸುತ್ತಮುತ್ತಲಿರುವ ಆರೇಳು ರೈತರ ದ್ರಾಕ್ಷಿ ತೋಟದಲ್ಲಿ ಕಟಾವಿಗೆ ಬಂದ ಹಣ್ಣಾದ ದ್ರಾಕ್ಷಿ ಪಡದ ಸಾಲುಗಳು ಭಾರಿ ಬಿರುಗಾಳಿ ಸಹಿತ ಅಕಾಲಿಕ ಮಳೆಗೆ ಶನಿವಾರ ರಾತ್ರಿ ನೆಲಕ್ಕುರುಳಿ ಬಿದ್ದಿವೆ.

'ಪ್ರಜಾವಾಣಿ' ಯೊಂದಿಗೆ ಮಾತನಾಡಿದ ರೈತ ಮಡ್ಡೆಪ್ಪಾ ಕುಮಟಗಿ, 'ಏಕಾಏಕಿ ಜೋರಾಗಿ ಗಾಳಿ ಬೀಸಿದ್ದರಿಂದ ದ್ರಾಕ್ಷಿ ಪಡದ ಸಾಲುಗಳು ನೆಲಕ್ಕೆ ಬಿದ್ದಿವೆ. ಗಾಳಿಯೊಂದಿಗೆ ಮಳೆ ಕೂಡ ಬಂದಿದ್ದರಿಂದ ಹಣ್ಣಾದ ದ್ರಾಕ್ಷಿ ಗೊಂಚಲುಗಳು ನೆಲಕ್ಕೆ ಬಿದ್ದವು. ಸಾಲ ಮಾಡಿ ಕಷ್ಟದಿಂದ ದ್ರಾಕ್ಷಿ ಪಡ ತಯಾರು ಮಾಡಿದ್ದೆವು. ಈಗ ನೆಲಕ್ಕುರುಳಿದ ಸಾಲುಗಳನ್ನು ನಿಲ್ಲಿಸಲು ಮತ್ತಷ್ಟು ಖರ್ಚು ಮಾಡಬೇಕಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ತಹಶೀಲ್ದಾರ್, ತೋಟಗಾರಿಕಾ ಅಧಿಕಾರಿಗಳು ರೈತರ ತೋಟಗಳಿಗೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನ ತಾಜಪುರ ಗ್ರಾಮದ ತೋಟದಲ್ಲಿ ಹಣ್ಣಾದ ದ್ರಾಕ್ಷಿ ಪಡದ ಸಾಲುಗಳು ಶನಿವಾರ ರಾತ್ರಿ ಧರೆಗುರುಳಿವೆ

ಈಗಾಗಲೇ ದ್ರಾಕ್ಷಿ ಕಟಾವು ಮಾಡಿ ರ್‍ಯಾಕ್ (ಒಣದ್ರಾಕ್ಷಿ ಘಟಕ) ನಲ್ಲಿ ಹಾಕಿದ್ದರೂ ಒಣದ್ರಾಕ್ಷಿ ಕಪ್ಪಾಗಿ ದರ ಕುಸಿಯುವ ಆತಂಕ ರೈತರಿಗೆ ಎದುರಾಗಿದೆ.

ಸಿಡಿಲು ಬಡಿದು ಮಹಿಳೆ ಸಾವು

ಹೊಳೆನರಸೀಪುರ: ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯ ಕಲ್ಲಹಳ್ಳಿಯಲ್ಲಿ ಶನಿವಾರ ಸಂಜೆ ಜಮೀನಿನಲ್ಲಿ ಕೆಲಸ ಮಾಡುವಾಗ ಸಿಡಿಲು ಬಡಿದು ವಿನೋದಾ (35) ಮೃತಪಟ್ಟಿದ್ದಾರೆ.

ಗ್ರಾಮಕ್ಕೆ ಭಾನುವಾರ ಭೇಟಿ ನೀಡಿದ್ದ ಶಾಸಕ ಎ.ಟಿ.ರಾಮಸ್ವಾಮಿ, ₹ 5 ಲಕ್ಷ ಪರಿಹಾರದ ಚೆಕ್ ವಿತರಿಸಿದರು.

'ಮುಖ್ಯಮಂತ್ರಿಗೆ ಸಿನಿಮಾ ಪ್ರಚಾರ ಮುಖ್ಯ'

ಪ್ರಜಾವಾಣಿ ವಾರ್ತೆ

ತುಮಕೂರು: 'ಪಾವಗಡ ಬಳಿ ಶನಿವಾರ ಭೀಕರ ಅಪಘಾತವಾದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅದನ್ನೆಲ್ಲಾ ಮರೆತು ಚಿತ್ರ ಬಿಡುಗಡೆ ಸಮಾರಂಭದಲ್ಲಿ ಭಾಗಿಯಾಗಿದ್ದರು. ಅವರಿಗೆ ಜನರ ಸಮಸ್ಯೆಗಿಂತ ಚಿತ್ರದ ಪ್ರಚಾರ ಮುಖ್ಯವಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಜಿಲ್ಲಾ ಆಸ್ಪತ್ರೆಗೆ ಭಾನುವಾರ ಭೇಟಿ ನೀಡಿ, ಪಾವಗಡ ತಾಲ್ಲೂಕಿನ ಪಳವಳ್ಳಿ ಕಟ್ಟೆ ಬಳಿ ನಡೆದ ಅಪಘಾತದಲ್ಲಿ ಗಾಯಗೊಂಡವರ ಆರೋಗ್ಯ ವಿಚಾರಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವ ಕೆ.ಸುಧಾಕರ್ ಅವರು ಸಿನಿಮಾ ಪ್ರಚಾರಕ್ಕೆ ನಾಲ್ಕು ತಾಸು ಸಮಯ ನೀಡಿದ್ದಾರೆ' ಎಂದು ಟೀಕಿಸಿದ್ದಾರೆ.

ಆಗ್ರಹ: ಮೃತಪಟ್ಟವರು ಮತ್ತು ಗಾಯಾಳುಗಳು ಕಡು ಬಡವರಿದ್ದಾರೆ. ಹಾಗಾಗಿ ಮೃತರ ಕುಟುಂಬಗಳಿಗೆ ₹25 ಲಕ್ಷ ಪರಿಹಾರ, ಗಾಯಾಳುಗಳಿಗೆ ಉಚಿತ ಚಿಕಿತ್ಸೆ ನೀಡಬೇಕು' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಭಾನುವಾರ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಜೆಡಿಎಸ್ ಮುಖಂಡ ತಿಮ್ಮರಾಯಪ್ಪ ಉಪಸ್ಥಿತರಿದ್ದರು

ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ 'ಜಗ್ಗಲಗಿ ಹಬ್ಬ'ದಲ್ಲಿ ಗೋವಾದ ಮಹಿಳಾ ತಂಡದವರು ಡೋಲು ಬಾರಿಸಿ ಗಮನ ಸೆಳೆದರು
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ನಂದಿ ಗಿರಿಧಾಮ: ಪ್ರವಾಸಿಗರು ವಾಪಸ್

ಚಿಕ್ಕಬಳ್ಳಾಪುರ : ತಾಲ್ಲೂಕಿನ ನಂದಿ ಗಿರಿಧಾಮಕ್ಕೆ ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದ್ದು ಅವರಿಗೆ ಅವಕಾಶ ನೀಡದೆ ಅವರನ್ನು ಅಲ್ಲಿನ ಅಧಿಕಾರಿಗಳು ವಾಪಸ್ ಕಳುಹಿಸಿದ್ದಾರೆ.

ರಾಜ್ಯದ ಎಲ್ಲೆಡೆ ವಾರಾಂತ್ಯದ ಕರ್ಫ್ಯೂ ತೆರವಾಗಿದೆ. ಆದರೆ ನಂದಿ ಗಿರಿಧಾಮದಲ್ಲಿ ಮಾತ್ರ ವಾರಾಂತ್ಯದ ಕರ್ಫ್ಯೂ ಮುಂದುವರಿದಿದೆ. ಪ್ರತಿ ವಾರಾಂತ್ಯದಲ್ಲಿ ಹೆಚ್ಚಿನ ಪ್ರವಾಸಿಗರು ಗಿರಿಧಾಮಕ್ಕೆ ಭೇಟಿ ನೀಡಿ ಪ್ರವೇಶ ಇಲ್ಲ ಎನ್ನುವುದನ್ನು ತಿಳಿದು ಅಸಮಾಧಾನ ಹೊರ ಹಾಕುತ್ತಿದ್ದಾರೆ.

ಈ ಎರಡು ದಿನಗಳಲ್ಲಿ ಗಿರಿಧಾಮದಲ್ಲಿನ ವಸತಿ ನಿಲಯಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸಿದವರಿಗೆ ಮಾತ್ರ ಪ್ರವೇಶವಿದೆ. ಸಾಮಾನ್ಯ ಪ್ರವಾಸಿಗರಿಗೆ ಪ್ರವೇಶವಿಲ್ಲ.

ಸಾಮಾನ್ಯವಾಗಿ ವಾರಾಂತ್ಯದ ದಿನಗಳಲ್ಲಿ 10 ರಿಂದ 15 ಸಾವಿರ ಪ್ರವಾಸಿಗರು ಭೇಟಿ ನೀಡುವರು. ಶನಿವಾರ ಮತ್ತು ಭಾನುವಾರ ಪ್ರವೇಶ ದ್ವಾರದಲ್ಲಿ ಪೊಲೀಸರು ಬ್ಯಾರಿಕೇಡ್ ಹಾಕಿ ಕಾವಲಿಗೆ ಇರುವರು. ಈ ವೇಳೆ ಪ್ರವಾಸಿಗರು ಪೊಲೀಸರ ಜತೆ ವಾಗ್ವಾದ ನಡೆಸಿದ ನಿದರ್ಶನಗಳಿವೆ.

ಬೇಸಿಗೆಯ ಈ ದಿನಗಳಲ್ಲಿ ಗಿರಿಧಾಮಕ್ಕೆ ಬರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಆದರೆ ವಾರಾಂತ್ಯದಲ್ಲಿ ಗಿರಿಧಾಮಕ್ಕೆ ಅವಕಾಶ ನೀಡದಿರುವುದು ಪ್ರವಾಸಿಗರ ಆಕ್ರೋಶಕ್ಕೆ ಕಾರಣವಾಗಿದೆ.

ಈ ನಡುವೆ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಪ್ರವಾಸಿಗರ ಪ್ರವೇಶಕ್ಕೆ ಮಿತಿ ಹೇರಿದೆ. ನಿತ್ಯ 2,500 ಮಂದಿಗೆ ಮಾತ್ರ ಗಿರಿಧಾಮ ಪ್ರವೇಶಕ್ಕೆ ಅವಕಾಶವಿದೆ. ಇದರಲ್ಲಿ 1,250 ಟಿಕೆಟ್ ಗಳನ್ನು ಆನ್ ಲೈನ್ ಮೂಲಕ ಮತ್ತು 1,250 ಟಿಕೆಟ್ ಗಳನ್ನು ಆಫ್ ಲೈನ್ ನಲ್ಲಿ ಖರೀದಿಸಬಹುದು.

ಹಣ ಕೊಟ್ಟರೆ ಕಾಳಸಂತೆಯಲ್ಲಿ ಔಷಧಿ • ಜೀವಕ್ಕಿಂತ ಹಣವೇ ಮುಖ್ಯ

‘ಚಿಕಿತ್ಸೆ’ಯೇ ಸುಲಿಗೆಯ ದಾರಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಆಸ್ಪತ್ರೆಗಳಲ್ಲಿ ‘ಚಿಕಿತ್ಸೆ’ ಎನ್ನುವುದು ಸುಲಿಗೆಯ ದಂಧೆಯಾಗಿ ಎಷ್ಟೋ ವರ್ಷಗಳು ಕಳೆದಿವೆ. ಆಸ್ಪತ್ರೆಗೆ ಹೋದರೆ ಜೀವವೂ ಉಳಿಯುವುದಿಲ್ಲ, ಮಾಡಿಟ್ಟ ಆಸ್ತಿಯೂ ಉಳಿಯುವುದಿಲ್ಲ ಎಂಬ ಗೋಳಿಗೆ ಖಾಸಗಿ ಆಸ್ಪತ್ರೆಗಳಷ್ಟೆ ಸಾಕ್ಷಿಯಾಗಿದ್ದವು. ಇತ್ತೀಚೆಗೆ ಈ ಸಾಲಿಗೆ ಸರ್ಕಾರಿ ಆಸ್ಪತ್ರೆಗಳೂ ಸೇರಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ ಎನ್ನುತ್ತಾರೆ. ಆದರೆ, ಹಣ ಕೊಟ್ಟರೆ ಅದೇ ಆಸ್ಪತ್ರೆಯಲ್ಲಿ ಕಾಳಸಂತೆಯಲ್ಲಿ ಔಷಧಿ ಸಿಗುತ್ತವೆ. ಅಷ್ಟರಮಟ್ಟಿಗೆ, ಆರೋಗ್ಯ ಇಲಾಖೆ ವೈದ್ಯಾಧಿಕಾರಿಗಳು ಅಕ್ರಮಕ್ಕಿಳಿದಿದ್ದಾರೆ ಎಂಬ ಆರೋಪವಿದೆ.

ಕೋವಿಡ್ ಸಮಯದಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದಿನ ಕೃತಕ ಕೊರತೆ ನೆನಪಿನಿಂದ ಇನ್ನೂ ಮಾಸಿಲ್ಲ. ₹ 3,500ಕ್ಕೆ ಸಿಗುತ್ತಿದ್ದ ಈ ಚುಚ್ಚುಮದ್ದನ್ನು ₹25 ಸಾವಿರದಿಂದ ₹ 27 ಸಾವಿರಕ್ಕೆ ಆರೋಗ್ಯ ಅಧಿಕಾರಿಗಳು ಮಾರಾಟ ಮಾಡಿದ್ದರು. ಖಾಸಗಿ ಕ್ಲಿನಿಕ್ ನಡೆಸುವ ಸರ್ಕಾರಿ ವೈದ್ಯರೇ ಈ ‘ವ್ಯವಹಾರ’ದ ಹಿಂದಿದ್ದರು. ರೆಮ್‌ಡಿಸಿವಿರ್ ಸಿಗದೆ ಜನ ನರಳುತ್ತಿದ್ದರೂ, ಅವರಿಗೆ ಜೀವಕ್ಕಿಂತ ಹಣವೇ ಮುಖ್ಯವಾಗಿ ಬಿಟ್ಟಿತ್ತು.

‘ತಾಯಿಯಾಗುವ ಸಂಭ್ರಮದ ನೋವು ಅನುಭವಿಸುತ್ತಿರುವ ಗರ್ಭಿಣಿಗೆ ಸಾಮಾನ್ಯ ಹೆರಿಗೆಯ (ನಾರ್ಮಲ್ ಡೆಲಿವರಿ) ಸಾಧ್ಯತೆ ಇದ್ದರೂ, ಇನ್ನಷ್ಟು ಸಮಯ ಕಾದರೆ ತಾಯಿ ಮತ್ತು ಮಗುವಿನ ಜೀವಕ್ಕೇ ಅಪಾಯವಿದೆ ಎಂದು ಪೋಷಕರನ್ನು ಬೆದರಿಸಿ ಸಿಜೇರಿಯನ್ ಮಾಡುವ ವೈದ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿ ತುಂಬಿದ್ದಾರೆ. ಸಾಮಾನ್ಯ ಹೆರಿಗೆಯಾದರೆ ₹ 2,000ದಿಂದ ₹ 3,000 ಲಂಚ ನೀಡಬೇಕು. ಸಿಜೇರಿಯನ್‌ಗೆ ₹ 8,000ದಿಂದ ₹ 10,000 ಕೊಡಬೇಕು. ಇಲ್ಲವಾದರೆ ಹೆರಿಗೆಯನ್ನೇ ಮಾಡಿಸುವುದಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಸಿಜೇರಿಯನ್‌ಗೆ ₹ 45,000 ಪಾವತಿಸಬೇಕು’ ಎನ್ನುತ್ತಾರೆ ಮಗಳ ಹೆರಿಗೆ ವೇಳೆ ಮೊಮ್ಮಗುವನ್ನು ಕಳೆದುಕೊಂಡ ಗದಗದ ಮಹಿಳೆಯೊಬ್ಬರು.

‘ಸಹಜ ಹೆರಿಗೆ ಆಗಲಿದೆ ಎಂದಿದ್ದ ಸಿಬ್ಬಂದಿ, ಅದಕ್ಕೆ ಪ್ರಯತ್ನಿಸುವುದಾಗಿ ಹೇಳಿದ್ದರು. ಬಳಿಕ ಸಿಜೇರಿಯನ್ ಮಾಡಲು ತೀರ್ಮಾನಿಸಿ, ಸಹಜ ಹೆರಿಗೆ ಆಗದ ಬಗ್ಗೆ ತಜ್ಞ ವೈದ್ಯರಿಗೆ ಮಾಹಿತಿ ನೀಡಿದ್ದರು. ಆದರೆ, ಮೊದಲೇ ಹಣ ಕೊಟ್ಟಿಲ್ಲವೆಂದು ಕರ್ತವ್ಯದಲ್ಲಿದ್ದ ವೈದ್ಯರು ಸಮಯಕ್ಕೆ ಸರಿಯಾಗಿ ಬಾರದ ಕಾರಣ ಮಗು ಹುಟ್ಟುವ ಮುನ್ನವೆ ಹೊಟ್ಟೆಯಲ್ಲಿ ಅಸುನೀಗಿತ್ತು’ ಎಂದರು.

‘ರಕ್ತದೊತ್ತಡ ಜಾಸ್ತಿಯಾಗಿದೆ, ಅರಿವಳಿಕೆ ವೈದ್ಯರಿಲ್ಲ ಎಂದೆಲ್ಲ ನೆಪ ಹೇಳಿ ಖಾಸಗಿ ಆಸ್ಪತ್ರೆಗೆ ಹೋಗಿ ಅಥವಾ ಜಿಲ್ಲಾ ಆಸ್ಪತ್ರೆ ಹೋಗಿ ಎಂದು ಹೇಳುತ್ತಾರೆ. ಹಣ ಕೊಟ್ಟು ಹೆರಿಗೆ ಮಾಡಿಸಬೇಕಾದ ಅನಿವಾರ್ಯ ಸ್ಥಿತಿ ತಾಲ್ಲೂಕು ಆಸ್ಪತ್ರೆಗಳಲ್ಲಿವೆ. ಹೀಗಾಗಿ, ಹೆರಿಗೆಗೆ ಬರುವವರು ಕೈಯಲ್ಲಿ ಹಣ ಹಿಡಿದುಕೊಂಡೇ ಬರಬೇಕು. ₹ 2 ಸಾವಿರ ಕೊಟ್ಟರೆ ಮಾತ್ರ ಹೆರಿಗೆ. ಇಲ್ಲಾಂದ್ರೆ ಇಲ್ಲ. ಸರ್ಕಾರಿ ಆಸ್ಪತ್ರೆಗೆ ಬಡವರು, ಕೂಲಿಕಾರರು ಬರುತ್ತಾರೆ. ಅವರು ಎಲ್ಲಿಂದ ಹಣ ತರಬೇಕು’ ಎಂದೂ ಪ್ರಶ್ನಿಸಿದರು.



ಭಾವು ಪತ್ತಾರ್

ಬೈಕೇ ಆಂಬ್ಯುಲೆನ್ಸ್, ಆಟೋ ಇನೋವಾ

ಕೋವಿಡ್ ತೀವ್ರವಾಗಿದ್ದ ದಿನಗಳಲ್ಲಿ ವೈದ್ಯಾಧಿಕಾರಿಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಮತ್ತು ಸೋಂಕಿತರನ್ನು ಆಸ್ಪತ್ರೆಗೆ ಕರೆತರಲು ಟ್ರಾವೆಲ್ಸ್ ಕಂಪನಿಗಳಿಂದ ವಾಹನಗಳನ್ನು ಬಾಡಿಗೆ ಪಡೆದಿದ್ದ ಆರೋಗ್ಯ ಇಲಾಖೆ ಅಧಿಕಾರಿಗಳು, ಅದರಲ್ಲೂ ಹಣ ನುಂಗಿರುವುದು ಭ್ರಷ್ಟಾಚಾರದ ಮತ್ತೊಂದು ಮುಖ!

‘ಆಂಬ್ಯುಲೆನ್ಸ್ ಹೆಸರಿನಲ್ಲಿ ಬೈಕು, ಆಟೊ, ಸರ್ಕಾರಿ ವಾಹನ ಸೇರಿದಂತೆ ಸಿಕ್ಕ ಸಿಕ್ಕ ವಾಹನಗಳ ನಂಬರ್‌ಗಳನ್ನು ನಮೂದಿಸಿ ಹಣ ಲಪಟಾಯಿಸಲಾಗಿದೆ. ಖಾಸಗಿ ಟ್ರಾವೆಲ್ಸ್ ಕಂಪನಿಗಳ ಜೊತೆ ಇಲಾಖೆಯ ಅಧಿಕಾರಿಗಳು ಕೈಜೋಡಿಸಿದ್ದರು. ದಾಖಲೆಗಳಲ್ಲಿ ಬಾಡಿಗೆ ಪಡೆದಿದ್ದ ಕಾರುಗಳ ನಂಬರ್ ಪರಿಶೀಲಿಸಿದಾಗ ಇಂಡಿಕಾ, ಸ್ವಿಫ್ಟ್ ಸೇರಿದಂತೆ ಸಾಮಾನ್ಯ ವರ್ಗದ ಕಾರುಗಳೆಂದು ಗೊತ್ತಾಗಿದೆ. ಆದರೆ, ಇನ್ನೋವಾ ಕ್ರೆಸ್ಟಾದಂಥ ದುಬಾರಿ ಕಾರುಗಳ ಬಿಲ್ ಮಾಡಲಾಗಿತ್ತು. ಹೀಗೆ ಬಾಡಿಗೆ ರೂಪದಲ್ಲಿ ₹ 5 ಕೋಟಿಗೂ ಹೆಚ್ಚು ಬಾಡಿಗೆ ಪಾವತಿಸಿ ಹಗಲು ದರೋಡೆ ನಡೆಸಲಾಗಿದೆ’ ಎಂದು ಇಲಾಖೆಯ ಅಧಿಕಾರಿಯೇ ಮಾಹಿತಿ ನೀಡಿದರು.

ಆರೋಗ್ಯ ಅಧಿಕಾರಿಗಳಿಂದ ಹುದ್ದೆ ಬಿಕರಿ!

ಕೋವಿಡ್ ಉಲ್ಬಣವಾಗಿದ್ದ ಅವಧಿಯಲ್ಲಿ ಯಾದಗಿರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಶುಶ್ರೂಷಕಿ ನೇಮಕಾತಿಗೆ ಬಂದಿದ್ದ ಅಭ್ಯರ್ಥಿಯೊಬ್ಬರಿಂದ ₹ 30 ಸಾವಿರ ಲಂಚ ಪಡೆಯುತ್ತಿದ್ದ ಆರೋಗ್ಯ ಇಲಾಖೆ ಮುಖ್ಯಾಧಿಕಾರಿ ಎಸಿಬಿ ಬಲೆಗೆ ಬಿದ್ದಿದ್ದರು. ಪ್ರತಿ ಅಭ್ಯರ್ಥಿಯಿಂದ ₹ 30 ಸಾವಿರದಿಂದ ₹ 50 ಸಾವಿರ ಲಂಚದ ಬೇಡಿಕೆ ಇಟ್ಟಿರುವ ಬಗ್ಗೆ ಬಂದ ದೂರು ಆಧರಿಸಿ ಅಧಿಕಾರಿಗಳು ದಾಳಿ ನಡೆಸಿದ್ದರು.

ಇಂಥದ್ದೇ ಪ್ರಕರಣ ಗದಗದಲ್ಲೂ ನಡೆದಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ನರ್ಸಿಂಗ್ ಹುದ್ದೆಗಳ ಭರ್ತಿಗೆ ಅಧಿಕಾರಿಗಳು ₹ 1 ಲಕ್ಷ ಬೇಡಿಕೆ ಇಟ್ಟಿದ್ದರು. ಅರ್ಹತೆ ಆಧಾರದಲ್ಲಿ ನೇಮಕಾತಿ ಪಟ್ಟಿ ಸಿದ್ಧಪಡಿಸಿದ್ದರಿಂದ ನೇಮಕಾತಿ ಆದೇಶ ಬರಬಹುದೆಂದು ಕಾಯುತ್ತಿದ್ದವರಿಗೆ, ಲಂಚ ಕೊಟ್ಟು ಹುದ್ದೆ ಗಿಟ್ಟಿಸಿಕೊಳ್ಳುವಂತೆ ಕರೆ ಬಂದಿತ್ತು. ಈ ಬಗ್ಗೆ ಅಭ್ಯರ್ಥಿಯೊಬ್ಬರು ದೂರು ನೀಡಿದ ಪರಿಣಾಮ, ₹ 90 ಸಾವಿರ ಹಣ ಪಡೆಯುವ ವೇಳೆ ಮಧ್ಯವರ್ತಿಯೊಬ್ಬ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದಿದ್ದ.

‘ಆರೋಗ್ಯ’ಕ್ಕೆ ಲಂಚದ ‘ವೈರಸ್’

ಒಂದನೇ ಪುಟದಿಂದ

ಭ್ರಷ್ಟಾಚಾರ ನಿಗ್ರಹ ದಳದಲ್ಲೂ (ಎಸಿಬಿ) ಹಲವು ದೂರುಗಳು ದಾಖಲಾಗಿವೆ. ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಸಮಿತಿ (ಪಿಎಸಿ) ಕೂಡಾ ಇಂಥ ಪ್ರಕರಣಗಳ ವಿಚಾರಣೆ ನಡೆಸಿದೆ. ಆದರೆ, ಯಾವುದೇ ತನಿಖೆ, ವಿಚಾರಣೆ ತಾರ್ಕಿಕ ಅಂತ್ಯ ಕಂಡಿಲ್ಲ.

ಕೋವಿಡ್ ಭೀಕರತೆಯ ದಿನಗಳಲ್ಲಿ ‘ತುರ್ತು ಅಗತ್ಯ’ದ ನೆಪದಲ್ಲಿ ₹ 30ರಿಂದ ₹ 40 ಬೆಲೆಯ ಎನ್95 ಮಾಸ್ಕ್‌ಗಳನ್ನು ₹ 150, ₹ 200, ₹ 300 ಬೆಲೆಗೆ, ₹ 600 ದರ ಇದ್ದ ಪಿಪಿಇ ಕಿಟ್ ₹ 1,500ರಿಂದ ₹ 2,000 ಹೀಗೆ ದುಪ್ಪಟ್ಟು ಬೆಲೆ ನೀಡಿ ಆರೋಗ್ಯ ಇಲಾಖೆ ಖರೀದಿಸಿರುವ ಆರೋಪ ಕೇಳಿಬಂದಿತ್ತು.

ಆರಂಭದಲ್ಲಿ ಕೆಲವು ಕಳಪೆ ಉಪಕರಣಗಳನ್ನೂ ಖರೀದಿ ಮಾಡಲಾಗಿತ್ತು. ವೈದ್ಯರಿಂದ ದೂರುಗಳು ಬಂದಿದ್ದರಿಂದ ನಂತರ ಉತ್ತಮ ಗುಣಮಟ್ಟದ ಉಪಕರಣಗಳನ್ನು ಖರೀದಿಸಲಾಗಿದೆ. ಹಾಗೆಂದು, ‘ಕಮಿಷನ್’ ಮೊತ್ತ ಕಡಿಮೆ ಆಗುತ್ತದೆ ಎಂದು ಅನಿಸಿದ್ದರೆ ಅದು ಸುಳ್ಳು. ಏಕೆಂದರೆ, ಹೆಚ್ಚಿನ ಕಮಿಷನ್ ಹೊಡೆಯಲು ಅದೇ ಪ್ರಮಾಣದಲ್ಲಿ ಖರೀದಿ ದರ ಏರಿಸಲಾಗಿತ್ತು.

‘ಗುತ್ತಿಗೆ ಸಿಗಬೇಕಾದರೆ ಮೊದಲೇ ‘ಕಮಿಟ್‌ಮೆಂಟ್ ಹಣ’ ಎಂದು ಶೇ 10 ಕೊಡಬೇಕು. ಎಲ್ಲ ಮುಗಿದ ಬಳಿಕ ‘ಒಪ್ಪಂದ’ ಮಾಡಿಕೊಂಡಷ್ಟು ಹಣವನ್ನು ಸಂಬಂಧಪಟ್ಟವರಿಗೆ ತಲುಪಿಸಲೇಬೇಕು. ಅದೂ ಇಲಾಖೆಯ ಹಿರಿಯ ಅಧಿಕಾರಿಯೇ ಇರಬಹುದು, ಖಾತೆ ವಹಿಸಿಕೊಂಡಿದ್ದ ಸಚಿವರಿಗೇ ಇರಬಹುದು’ ಎಂದು ಹೆಸರು ಹೇಳಲು ಬಯಸದ ಉಪಕರಣಗಳ ಸರಬರಾಜುದಾರರು ಹೇಳುತ್ತಾರೆ.

ಔಷಧ ಖರೀದಿಯಲ್ಲಿ ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳು, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್– ಹಿಂದಿನ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ಆ್ಯಂಡ್ ವೇರ್‌ಹೌಸಿಂಗ್ ಸೊಸೈಟಿ– ಕೆಡಿಎಲ್‌ಡಬ್ಲ್ಯೂಎಸ್) ಅಧಿಕಾರಿಗಳು, ಮಧ್ಯವರ್ತಿಗಳು ಶಾಮೀಲಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟಿ– ಕೋಟಿ ನಷ್ಟ ಉಂಟು ಮಾಡಿರುವ ಹಲವು ಪ್ರಕರಣಗಳು ಸಿಗುತ್ತವೆ. ವೈದ್ಯಕೀಯ ಉಪಕರಣಗಳು, ಔಷಧಗಳ ದರ ಪರಿಶೀಲಿಸದೆ ಕಂಪನಿಗಳು ನಮೂದಿಸಿದ ದುಪ್ಪಟ್ಟು ದರವನ್ನು ಕೆಎಸ್‌ಎಂಎಸ್‌ಸಿಎಲ್ ಅನುಮೋದಿಸಿ, ಖರೀದಿಸಿದೆ. ಪಿಪಿಇ ಕಿಟ್, ಸ್ಯಾನಿಟೈಸರ್, ವೆಂಟಿಲೇಟರ್– ಹೀಗೆ ಎಲ್ಲ ಪರಿಕರಗಳ ಖರೀದಿಯಲ್ಲೂ ಈ ಕರಾಮತ್ತು ನಡೆದಿದೆ. ಉಪಕರಣಗಳನ್ನು ಸರಬರಾಜು ಮಾಡಿದ ಕಂಪನಿಗಳು ತನ್ನದೇ ಉತ್ಪನ್ನಕ್ಕೆ ಎರಡೆರಡು ದರ ನಮೂದಿಸಿಯೂ ಅಕ್ರಮ ನಡೆಸಿವೆ. ಇನ್ನೂ ಕೆಲವು ಕಂಪನಿಗಳು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರಕ್ಕೆ ಉಪಕರಣಗಳನ್ನು ಸರಬರಾಜು ಮಾಡಿವೆ.

ಕೋವಿಡ್ ಎದುರಿಸಲು ತರಾತುರಿಯಲ್ಲಿ ವೈದ್ಯಕೀಯ ಉಪಕರಣಗಳು ಮತ್ತು ಔಷಧಗಳ ಖರೀದಿಗೆ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಪಡೆದಿದ್ದ ಕೆಎಸ್‌ಎಂಎಸ್‌ಸಿಎಲ್, ಉಪಕರಣಗಳು ಮತ್ತು ಔಷಧ ಖರೀದಿಗೆ ಕಂಪನಿಗೆ ಕಾರ್ಯಾದೇಶ ನೀಡುವ ಮೊದಲು ಮಾರುಕಟ್ಟೆ ದರ ಮತ್ತು ಕಂಪನಿ ನಮೂದಿಸಿದ್ದ ದರವನ್ನು ಹೋಲಿಸಿ ನೋಡಬೇಕಿತ್ತು. ಆದರೆ, ಈ ಕೆಲಸ ಮಾಡದ ನಿಗಮದ ಕೆಲವು ಅಧಿಕಾರಿಗಳು, ನಿರ್ದಿಷ್ಟ ಕಂಪನಿಗಳಿಂದ ಮಾತ್ರ ಕೊಟೇಷನ್ ಪಡೆದು ಖರೀದಿಸಿದ ಆರೋಪವೂ ಇದೆ.

‘ಸಿರಿಂಜ್ ಪಂಪ್, ಟೇಬಲ್ ಟಾಪ್ ಪಲ್ಸ್ ಆಕ್ಸಿಮೀಟರ್, ಇಸಿಜಿ ಯಂತ್ರ, ಮಲ್ಟಿ ಪ್ಯಾರಾ ಪೇಷೆಂಟ್ ಮಾನಿಟರ್ ಉಪಕರಣ ಖರೀದಿಗೆ ಮುಂದಾಗುವ ಮೊದಲು ಕೊಟೇಷನ್ ಅನ್ನು ಎಲ್ಲ ಪೂರೈಕೆದಾರ ಕಂಪನಿಗಳಿಗೆ ತಲುಪಿಬೇಕಿತ್ತು. ಸಂಸ್ಥೆಯ ಇ– ಪೋರ್ಟಲ್‌ನಲ್ಲಿ ಅಥವಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಿತ್ತು. ಆದರೆ, ಅದನ್ನು ಮಾಡದೆ ನಿರ್ದಿಷ್ಟ ಕಂಪನಿಯಿಂದ ಖರೀದಿಸಿರುವುದರ ಹಿಂದೆ ಅಕ್ರಮದ ವಾಸನೆ ದಟ್ಟವಾಗಿದೆ. ಕೊಟೇಷನ್ ಕೊಟ್ಟಿದ್ದರೆ ಸ್ಪರ್ಧಾತ್ಮಕ ದರದಲ್ಲಿ ಖರೀದಿಸಲು ಅವಕಾಶ ಇತ್ತು. ಆದರೆ, ಕಮಿಷನ್ ಪಡೆಯುವ ಉದ್ದೇಶದಿಂದ ನಿರ್ದಿಷ್ಟ ಕಂಪನಿಗಳಿಂದ ಕೊಟೇಷನ್ ಪಡೆದು ದುಪ್ಪಟ್ಟು ದರದಲ್ಲಿ ಉಪಕರಣಗಳನ್ನು ಖರೀದಿಸಲಾಗಿದೆ’ ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಗಳೇ ವಿವರಿಸುತ್ತಾರೆ.

ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಕೆಎಸ್‌ಎಂಎಸ್‌ಸಿಎಲ್ ಭಾರಿ ಅಕ್ರಮ ನಡೆಸಿದೆ ಎಂದು ಆರೋಪಿಸಿ, ಕೆಲವು ದಾಖಲೆಗಳ ಸಹಿತ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ, ‘ಈ ವ್ಯವಹಾರಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಎಸಿಬಿಗೆ ದೂರು ನೀಡಿತ್ತು. ಆರೋಪಕ್ಕೆ ಪೂರಕವಾದ ದಾಖಲೆಗಳನ್ನು ಸಲ್ಲಿಸಿಲ್ಲ ಎಂಬ ನೆಪ ಹೇಳಿದ ಎಸಿಬಿ, ತನಿಖೆ ನಡೆಸುವ ಗೋಜಿಗೇ ಹೋಗಿಲ್ಲ.

ಇಲಾಖೆಯಲ್ಲಿ ₹ 50 ಲಕ್ಷಕ್ಕಿಂತ ಹೆಚ್ಚು ಮೊತ್ತದ ಔಷಧಿಗಳನ್ನು ಖರೀದಿಸಬೇಕಾದರೆ ಹಿರಿಯ ತಜ್ಞರನ್ನು ಒಳಗೊಂಡ ಪರಿಣತರ ತಂಡ ಪರಿಶೀಲನಾ ಸಭೆ ನಡೆಸಬೇಕು. ಯಾವ ಕಂಪನಿಗೆ ನೀಡಲಾಗುತ್ತಿದೆ, ಕಂಪನಿಯ ಹಿನ್ನೆಲೆ ಏನು, ಉತ್ಪಾದನಾ ಸಾಮರ್ಥ್ಯ, ಪಾರದರ್ಶಕತೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ಪರಿಶೀಲಿಸಿದ ಬಳಿಕವೇ ಟೆಂಡರ್ ನೀಡಬೇಕಾಗುತ್ತದೆ. ಆದರೆ, ಈ ಎಲ್ಲ ಮಾನದಂಡಗಳು ಇತ್ತೀಚಿನ ದಿನಗಳಲ್ಲಿ ಕಾಗದದಲ್ಲಷ್ಟೆ ಉಳಿದಿವೆ.

‘ಸರ್ಕಾರಿ ವೈದ್ಯಕೀಯ ಕಾಲೇಜುಗಳು ಸ್ವಾಯತ್ತ ಸಂಸ್ಥೆಗಳಾದ ಬಳಿಕ ವೈದ್ಯಕೀಯ ಪರಿಕರಗಳನ್ನು ಆಯಾ ಕಾಲೇಜುಗಳ ಹಂತದಲ್ಲೇ ಟೆಂಡರ್ ಕರೆದು, ಕೆಟಿಪಿಪಿ ನಿಯಮಾವಳಿ ಪಾಲಿಸಿ ಖರೀದಿಸಲಾಗುತ್ತಿತ್ತು. ಕಾಲೇಜುಗಳಲ್ಲಿ ಇರುವ ಖರೀದಿ ಸಮಿತಿ ಮತ್ತು ಆರ್ಥಿಕ ಸಮಿತಿಗಳಲ್ಲಿ ಅನುಮೋದನೆ ಪಡೆದು ಖರೀದಿ ಮಾಡಲಾಗುತ್ತಿತ್ತು. ನಿರ್ದೇಶಕರ ಮತ್ತು ಕಚೇರಿ ಹಂತದಲ್ಲಿ ಸ್ವಲ್ಪ ಮಟ್ಟನ ಲಂಚ ವ್ಯವಹಾರ ನಡೆದರೂ ಗುಣಮಟ್ಟದ ಉಪಕರಣಗಳನ್ನು ಖರೀದಿ ಮಾಡುತ್ತಿದ್ದರು. ಸಚಿವರ ಕಚೇರಿ ಅಷ್ಟಾಗಿ ಇದರಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆದರೆ, ಕೋವಿಡ್ ಸಮಯದಲ್ಲಿ ವೈದ್ಯಕೀಯ ಕಾಲೇಜುಗಳಿಗೆ ಬೇಕಾದ ಉಪಕರಣಗಳನ್ನು ರಾಜ್ಯಮಟ್ಟದಲ್ಲಿ ಕೇಂದ್ರೀಕೃತವಾಗಿ ಖರೀದಿಸಲಾಯಿತು. ಆ ಬಳಿಕ ‘ಪದ್ಧತಿ’ ಬದಲಾಗಿ, ಎಲ್ಲವೂ ಇಲಾಖೆಯ ‘ಪ್ರಭಾವಿ’ಗಳ ಮೇಲುಸ್ತುವಾರಿಗೆ ಸೀಮಿತವಾಯಿತು. ಟೆಂಡರ್ ಕರೆಯುವ ಅಧಿಕೃತ ವ್ಯವಹಾರ ವೈದ್ಯಕೀಯ ಶಿಕ್ಷಣ ನಿರ್ದೇಶಕರ (ಡಿಎಂಇ) ಮೂಲಕ ನಡೆಯಿತು.

ತುರ್ತು ಖರೀದಿ ನೆಪ ಒಡ್ಡಿ ಅನೇಕ ಉಪಕರಣಗಳ ಖರೀದಿಗೆ ಆರ್ಥಿಕ ಸಂಹಿತೆಯಿಂದ ವಿನಾಯಿತಿ ಪಡೆಯಲಾಯಿತು. ಇದರಿಂದ ಉಪಕರಣಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರಕ್ಕೆ ಖರೀದಿಸಿ ಭಾರಿ ಕಮಿಷನ್ ಹೊಡೆಯಲು ಅವಕಾಶ ಸೃಷ್ಟಿಸಿಕೊಳ್ಳಲಾಯಿತು. ಈ ‘ವ್ಯವಸ್ಥೆ’ ಅಳವಡಿಸಿಕೊಂಡಿದ್ದರಿಂದ, ಮುಂದೇನಾದರೂ ತನಿಖೆಯಾದರೆ ಅಧಿಕಾರಿ ಸಿಕ್ಕಿ ಹಾಕಿಕೊಳ್ಳುತ್ತಾರೆಯೇ ಹೊರತು, ‘ವ್ಯವಹಾರ’ದ ಮೂಲದಲ್ಲಿರುವವರು ತಪ್ಪಿಸಿಕೊಳ್ಳುತ್ತಾರೆ. ಇದೆಲ್ಲ ಡಿಎಂಇ ಅವರಿಗೆ ಗೊತ್ತಿದ್ದರೂ, ಮರ್ಜಿಗೆ ಬಿದ್ದು ಒಪ್ಪಿಕೊಳ್ಳಲೇಬೇಕಾಗಿ ಬಂದಿತ್ತು’ ಎನ್ನುತ್ತವೆ ವೈದ್ಯಕೀಯ ಶಿಕ್ಷಣ ಇಲಾಖೆ ಮೂಲಗಳು.

‘ಸಂಧಾನ ಸಮಿತಿ’ ಸಭೆಯಲ್ಲಿ ‘ಮ್ಯಾಚ್ ಫಿಕ್ಸಿಂಗ್’



ಜಿಲ್ಲಾ ಆರೋಗ್ಯ ಅಧಿಕಾರಿಗಳು ಹಾಗೂ ಜಿಲ್ಲಾ ಆಸ್ಪತ್ರೆಯ ಮುಖ್ಯ ಶಸ್ತ್ರಚಿಕಿತ್ಸಕರು ತಮಗೆ ಬೇಕಾದ ಜಿಲ್ಲೆಗೆ ವರ್ಗಾವಣೆ ಬಯಸಿದರೆ, ಆರೋಗ್ಯ ಸಚಿವರಿಗೆ ₹ 25 ಲಕ್ಷ ಲಂಚ ನೀಡಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ. ಆರೋಗ್ಯ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಗ್ಯ ಸಚಿವರ ಕಾರ್ಯಾಲಯದಿಂದಲೇ ಆರಂಭವಾಗುತ್ತದೆ. ಉಪಕರಣ ಖರೀದಿಗಾಗಿ ಕೆಎಸ್‌ಎಂಎಸ್‌ಸಿಎಲ್ ಟೆಂಡರ್ ಆಹ್ವಾನಿಸುತ್ತದೆ. ಲಂಚ ನೀಡಲು ಸಾಧ್ಯವಾಗದ ಬಿಡ್ಡರ್‌ಗಳನ್ನು ತೆಗೆದುಹಾಕಲು ಮಾತ್ರ ಡೆಮೋ (ಪ್ರದರ್ಶನ) ಮಾಡಲಾಗುತ್ತದೆ. ಡೆಮೋ ಹಂತದಲ್ಲಿ ಸಾಕಷ್ಟು ಲಂಚ ಪಡೆಯಲಾಗುತ್ತದೆ. ಟೆಂಡರ್ ಆಹ್ವಾನಿಸಿ, ಕಾರ್ಯಾದೇಶ ನೀಡುವಾಗ ಲಂಚ ಪಡೆದು ಅಂತಿಮಗೊಳಿಸಲಾಗುತ್ತದೆ. ಔಷಧ, ಉಪಕರಣಗಳ ಖರೀದಿಗೆ ಸಂಧಾನ ಸಮಿತಿ ಸಭೆಯಲ್ಲಿ ‘ಮ್ಯಾಚ್ ಫಿಕ್ಸಿಂಗ್’ ನಡೆಯುತ್ತದೆ. ಮರು ಮಾತುಕತೆಯ ವೇಳೆ, ಲಂಚ ಎಷ್ಟು, ಎಲ್ಲಿ, ಹೇಗೆ ನೀಡಬೇಕು ಎನ್ನುವುದು ನಿಗದಿಯಾದ ಬಳಿಕ, ಟೆಂಡರ್ ಅನುಮೋದಿಸಲಾಗುತ್ತದೆ. ಇಲಾಖೆಗೆ ಪೂರೈಕೆ ಮಾಡಿದ ಔಷಧ ಮತ್ತು ಉಪಕರಣಗಳ ಬಿಲ್ ಪಾವತಿ ಮಾಡುವಾಗಲೂ ದೊಡ್ಡ ಭ್ರಷ್ಟಾಚಾರ ನಡೆಯುತ್ತದೆ. ಇಎಂಡಿ ಮತ್ತು ಭದ್ರತಾ ಠೇವಣಿಯನ್ನು ಪೂರೈಕೆದಾರರಿಗೆ ಮರಳಿ ನೀಡುವಾಗಲೂ ಲಂಚಕ್ಕೆ ಬೇಡಿಕೆ ಇಡಲಾಗುತ್ತಿದೆ. ಆರೋಗ್ಯ ಇಲಾಖೆಯಲ್ಲಿ ಯಾವುದೇ ಖರೀದಿಗೆ ಜೆಮ್ ಪೋರ್ಟಲ್ ಬಳಸಬೇಕು. ಆದರೆ, ಅದನ್ನು ಉಪಯೋಗಿಸುವುದಿಲ್ಲ.

ಡಾ. ಸಾರ್ವಭೌಮ ಬಗಲಿ, ಬಿಜೆಪಿ ಮಾಜಿ ಶಾಸಕ, ನಿವೃತ್ತ ಜಿಲ್ಲಾ ಆರೋಗ್ಯ ಅಧಿಕಾರಿ

‘ಲಂಚಮುಕ್ತ, ಉತ್ತರದಾಯಿಯಾಗಿಸಲು ಕ್ರಮ’

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತದಲ್ಲಿ ಭ್ರಷ್ಟಾಚಾರ ಮುಕ್ತಗೊಳಿಸಿ ಗುಣಮಟ್ಟದ ಸೇವೆ ನೀಡಲು ಸಾಕಷ್ಟು ಕ್ರಮಗಳನ್ನು ತೆಗೆದುಗೊಳ್ಳಲಾಗಿದೆ. ಮೊದಲ ಬಾರಿಗೆ ಎರಡೂವರೆ ಸಾವಿರಕ್ಕೂ ಹೆಚ್ಚಿನ ವೈದ್ಯರು ಮತ್ತು ತಜ್ಞರ ನೇಮಕ ಮಾಡಲಾಗಿದೆ. ಅಂಕ ಮತ್ತು ಮೀಸಲು ಆಧಾರದಲ್ಲಿ ಆಯ್ಕೆ ಪಟ್ಟಿ ಪ್ರಕಟಿಸಲಾಯಿತು. ಹಾಜರಾಗದವರ ಬದಲು ಕಾದಿರಿಸಿದ ಪಟ್ಟಿಯಿಂದ ಅಭ್ಯರ್ಥಿಗಳಿಗೆ ನೇಮಕ ಆದೇಶ ನೀಡಲಾಗುತ್ತಿದೆ. ದೂರುಗಳ ಹಿನ್ನಲೆಯಲ್ಲಿ ಇಲಾಖಾ ನಿಯಮಗಳ ಅನ್ವಯ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ ನಡೆಸಲು ಸೂಚಿಸಲಾಗಿದೆ. ಇಲಾಖಾ ಮುಂಬಡ್ತಿ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿ ಬಡ್ತಿ ನೀಡಲಾಗುತ್ತಿದೆ. ಹೊಸ ವೈದ್ಯಕೀಯ ಕಾಲೇಜುಗಳ ನೇಮಕಕ್ಕೆ ಮಾರ್ಗಸೂಚಿ ಮತ್ತು ನಿಯಮಗಳ ಅನ್ವಯ ತಜ್ಞರ ಸಮಿತಿ ರಚಿಸಲಾಗಿದೆ. ಅಭ್ಯರ್ಥಿಗಳು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಅದೇ ದಿನ ಪ್ರಕಟಿಸಲಾಗಿದೆ. ರೋಸ್ಟರ್ ಬಗ್ಗೆ ಡಿಪಿಎಆರ್‌ನಿಂದ ಸ್ಪಷ್ಟನೆ ಪಡೆದ ಬಳಿಕ ನೇಮಕ ಆದೇಶ ನೀಡಲಾಗುತ್ತಿದೆ.

ಖರೀದಿಯಲ್ಲಿ ಪಾರದರ್ಶಕತೆ ತಂದು, ಕೆಎಸ್‌ಎಂಎಸ್‌ಸಿಎಲ್ ಮೂಲಕ ಕೆಟಿಪಿಪಿ ಕಾಯ್ದೆ ಅನ್ವಯ ಟೆಂಡರ್ ಮೂಲಕವೇ ಔಷಧ ಮತ್ತು ವೈದ್ಯಕೀಯ ಉಪಕರಣಗಳನ್ನು ಖರೀದಿಸಲಾಗುತ್ತಿದೆ. ಕೋವಿಡ್ ಸಂದರ್ಭದ ಎಲ್ಲ ಖರೀದಿ ಪ್ರಕ್ರಿಯೆಗಳು ವಿಶೇಷ ಕಾರ್ಯಪಡೆ ಮತ್ತು ತಜ್ಞರ ಶಿಫಾರಸಿನ ಅನ್ವಯವೇ ನಡೆದಿವೆ. ವಿಧಾನಮಂಡಲದ ಉಭಯ ಸದನಗಳಲ್ಲಿ ಆ ವಿವರಗಳನ್ನು ನೀಡಲಾಗಿದೆ. ಎಲ್ಲ ಹಂತದ ಅಧಿಕಾರಿಗಳು ಪ್ರತಿ ಬುಧವಾರ ಆಸ್ಪತ್ರೆ, ಕಚೇರಿಗೆ ಭೇಟಿ ನೀಡಿ ಪರಿಶೀಲಿಸುವ ಮತ್ತು ಸಾರ್ವಜನಿಕರ ಅಹವಾಲು ಸ್ವೀಕರಿಸುವ ವಿನೂತನ ಕಾರ್ಯಕ್ರಮ ಜಾರಿಗೆ ತರಲಾಗಿದೆ.ಯಾರಾದರೂ ಲಂಚಕ್ಕೆ ಬೇಡಿಕೆ ಇಟ್ಟರೆ ಇಲಾಖೆಯ ಮುಖ್ಯ ಆಡಳಿತಾಧಿಕಾರಿಗೆ ಹೆಚ್ಚುವರಿಯಾಗಿ ಮುಖ್ಯ ವಿಚಕ್ಷಣಾ ದಳದ ಉಸ್ತುವಾರಿ ನೀಡಲಾಗಿದ್ದು, ಅವರಿಗೆ ದೂರು ಸಲ್ಲಿಸಿದರೆ ಇಲಾಖೆ ಹಂತದಲ್ಲಿ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತದೆ.

ಗುಣಮಟ್ಟದ ಆಡಳಿತಕ್ಕಾಗಿ ಇ- ಆಡಳಿತ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ. ಆಯುಕ್ತರ ಹಂತದಿಂದ ಪಿಎಚ್‌ಸಿವರೆಗೆ ಎಲ್ಲ ಕಚೇರಿಗಳನ್ನು ಆನ್‌ಲೈನ್ ಮೂಲಕ ಸಂಪರ್ಕಗೊಳಿಸಲಾಗುತ್ತಿದೆ. ವೈದ್ಯಾಧಿಕಾರಿಗಳಿಗೆ ಆಡಳಿತದ ತರಬೇತಿ ನೀಡಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಜತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ

ಡಾ.ಕೆ. ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಹುದ್ದೆಗೆ ಲಕ್ಷ, ಲಕ್ಷದ ಲೆಕ್ಕ!

‘ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆಯುವ ನೇಮಕಾತಿಗಳಲ್ಲಿ ಆಯಾ ಹುದ್ದೆಗೆ, ಈ ಹಿಂದೆ 10 ತಿಂಗಳ ವೇತನ ಲಂಚವಾಗಿ ನೀಡಬೇಕಿತ್ತು. ಈಗ ಆ ಪದ್ಧತಿ ಬದಲಾಗಿದೆ. ನೇಮಕಾತಿ ಆದೇಶ ಪತ್ರ ಕೈಗೆ ಸಿಗಬೇಕಿದ್ದರೆ 20 ತಿಂಗಳ ವೇತನ ನೀಡಲೇಬೇಕು’ ಎಂದು ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

‘ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಈಗ ಅಟಲ್ ಬಿಹಾರಿ ವಾಜಪೇಯಿ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ) ಸಹಾಯಕ ಪ್ರಾಧ್ಯಾಪಕ ಹುದ್ದೆ ಬೇಕಿದ್ದರೆ ₹ 80 ಲಕ್ಷ ಲಂಚ ನೀಡಬೇಕಿದೆ. ಇತರ ವೈದ್ಯಕೀಯ ಕಾಲೇಜುಗಳಲ್ಲಿ ಈ ಮೊತ್ತ ₹ 25 ಲಕ್ಷದಿಂದ 35 ಲಕ್ಷವಿದೆ. ಚಿಕ್ಕಬಳ್ಳಾಪುರ ವೈದ್ಯಕೀಯ ಕಾಲೇಜಿಗೆ 60 ಬೋಧಕ ಸಿಬ್ಬಂದಿಯ ನೇಮಕಕ್ಕೆ ಸಂದರ್ಶನ ನಡೆದು ವರ್ಷ ಕಳೆದಿದೆ. ಹಣ ಕೊಟ್ಟವರಿಗೆ ಮಾತ್ರ ನೇಮಕಾತಿ ಆದೇಶ ನೀಡಲಾಗಿದೆ. ಲಂಚ ನೀಡದ ಇನ್ನೂ 20 ಮಂದಿಗೆ ನೇಮಕಾತಿ ಆದೇಶ ಪತ್ರವನ್ನೇ ನೀಡಿಲ್ಲ’ ಎಂದೂ ಅವರು ದೂರಿದರು. ‘ಇನ್ನೂ ಹೊಸದಾಗಿ ಆರಂಭವಾಗುವ ವೈದ್ಯಕೀಯ ಕಾಲೇಜುಗಳಲ್ಲಿ ಪೀಠೋಪಕರಣ, ಗ್ರಂಥಾಲಯ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ₹ 50 ಕೋಟಿಯಿಂದ ₹ 60 ಕೋಟಿ ಲಂಚವಾಗಿ ಹೋಗುತ್ತದೆ. ಚಿಕ್ಕಮಗಳೂರು, ಹಾವೇರಿ, ಚಿತ್ರದುರ್ಗ, ಯಾದಗಿರಿ ವೈದ್ಯಕೀಯ ಕಾಲೇಜುಗಳು ನಿರ್ಮಾಣ ಹಂತದಲ್ಲಿವೆ. ಈ ಪೈಕಿ, ಚಿಕ್ಕಮಗಳೂರು, ಹಾವೇರಿ ವೈದ್ಯಕೀಯ ಕಾಲೇಜುಗಳಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೂಡಾ ಪೂರ್ಣಗೊಂಡಿದೆ’ ಎಂದರು.

‘ವ್ಯವಸ್ಥೆ’ಯೂ ಕಾರಣ

‘ನೇಮಕಾತಿಗಳಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ದೇಶಕರೇ ದಲ್ಲಾಳಿಗಳಾಗಿದ್ದಾರೆ. ಅಭ್ಯರ್ಥಿಯಿಂದ ಕಿತ್ತು ಕೊಡುವುದು ಅವರ ಕೆಲಸ. ಗುತ್ತಿಗೆದಾರರಿಂದ, ವಿತರಕರಿಂದ, ವೈದ್ಯರಿಂದ, ಸಿಬ್ಬಂದಿಯಿಂದ ವಸೂಲಿ ಮಾಡಿ ತಲುಪಿಸಬೇಕಾದಲ್ಲಿಗೆ ನಿಯಮಿತವಾಗಿ ಹಣ ತಲುಪಿಸುತ್ತಾರೆ. ಜ್ಯೇಷ್ಠತೆ ಪರಿಗಣಿಸದೆ ಯಾರನ್ನು ಬೇಕಾದರೂ ನೇಮಕ ಮಾಡಬಹುದು, ಯಾವಾಗ ಬೇಕಾದರೂ ತೆಗೆದು ಹಾಕಬಹುದೆಂಬ ಭಯದಿಂದಾಗಿ ಹೇಳಿದಂತೆ ಕೇಳುತ್ತಾರೆಂಬ ಕಾರಣಕ್ಕೆ ಬಹಳಷ್ಟು ವೈದ್ಯಕೀಯ ಕಾಲೇಜುಗಳಿಗೆ ನಿರ್ದೇಶಕರನ್ನು ಪ್ರಭಾರಿಯಾಗಿ ನೇಮಿಸಲಾಗುತ್ತಿದೆ. ಕಾಲೇಜಿನಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿದ್ದರೆ, ಹೆಚ್ಚು ಹೆಚ್ಚು ಉಪಕರಣ ಖರೀದಿ ಮಾಡಿದರೆ ಹೆಚ್ಚಿನ ಮೊತ್ತ ನೀಡಬೇಕು. ಈ ‘ವ್ಯವಸ್ಥೆ’ಯಿಂದಲೇ ಕೆಲವು ನಿರ್ದೇಶಕರು ಭ್ರಷ್ಟರಾಗಿ ಬದಲಾಗಿದ್ದಾರೆ ಎನ್ನುತ್ತಾರೆ ಅವರು.

ಟೆಂಡರ್ ದಾಖಲೆ ಸೋರಿಕೆ!

ಪ್ರತಿ ವರ್ಷ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ವೈದ್ಯಕೀಯ ಮಹಾವಿಶ್ವವಿದ್ಯಾಲಯ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬ್ಯಾಂಡೇಜ್ ಬಟ್ಟೆ, ಹತ್ತಿ, ಗ್ಲೂಕೋಸ್ ಬಾಟಲ್, ಚುಚ್ಚುಮದ್ದು ಸೇರಿ ಕೆಲವು ಕೋಟಿ ಮೊತ್ತದ ಔಷಧಗಳ ಖರೀದಿಗೆ ಟೆಂಡರ್ ಕರೆಯಲಾಗುತ್ತದೆ. ಆದರೆ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಬಿಡ್‌ದಾರರು ಸಲ್ಲಿಕೆ ಮಾಡಿರುವ ರಹಸ್ಯ ದಾಖಲೆಗಳು ಹಿಂದಿನ ಕೆಡಿಎಲ್‌ಡಬ್ಲ್ಯೂಎಸ್ ಅಧಿಕಾರಿಗಳಿಂದಲೇ ಅಕ್ರಮವಾಗಿ ಸೋರಿಕೆಯಾದ ಪ್ರಕರಣ ನಡೆದಿವೆ. 2018-19ನೇ ಸಾಲಿನಲ್ಲಿ ಔಷಧಗಳ ಖರೀದಿಗೆ ಕರೆದಿದ್ದ ಸುಮಾರು ₹ 300 ಕೋಟಿ ಮೊತ್ತದ ಟೆಂಡರ್ ಪ್ರಕ್ರಿಯೆಯಲ್ಲಿ ಈ ರೀತಿಯ ಅಕ್ರಮ ನಡೆದಿತ್ತು. ನಾಲ್ವರು ಅಧಿಕಾರಿಗಳಿಗೆ ಷೋಕಾಸ್ ನೋಟಿಸ್ ಕೂಡಾ ಜಾರಿ ಮಾಡಲಾಗಿತ್ತು.

ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಮಾರಾಟ ತೆರಿಗೆ, ಆದಾಯ ತೆರಿಗೆ ದಾಖಲೆ ಸಲ್ಲಿಸದವರು, ಅರ್ಹರಲ್ಲದ ಬಿಡ್‌ದಾರರ ಹೆಸರು ಬಹಿರಂಗಗೊಂಡರೂ ಬಾಹ್ಯ ಒತ್ತಡಗಳ ಕಾರಣಕ್ಕೆ ಅಂಥ ಲೋಪಗಳು ಗೌಣ ಆಗುತ್ತವೆ ಎನ್ನುವುದು ಖರೀದಿಯ ಒಳ–ಹೊರಗು ಗೊತ್ತಿರುವವರ ಅಭಿಪ್ರಾಯ.

ವಿಮಾನದಲ್ಲಿ ಬಾಂಬ್: ಹುಸಿ ಕರೆ

ಬೆಂಗಳೂರು: ಮಸ್ಕತ್‌ನಿಂದ ನಗರಕ್ಕೆ ಬರುತ್ತಿದ್ದ ವಿಮಾನದಲ್ಲಿ ಬಾಂಬ್ ಇಟ್ಟಿರುವುದಾಗಿ ಕರೆ ಬಂದಿದ್ದರಿಂದ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

‘ಕರೆ ಮಾಡಿದ್ದು ಯಾರು ಎಂಬುದು ಗೊತ್ತಾಗಿಲ್ಲ. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ’ ಎಂದೂ ಮೂಲಗಳು ಮಾಹಿತಿ ನೀಡಿದೆ.

ನ್ಯಾಯಮೂರ್ತಿಗಳಿಗೆ ‘ವೈ’ ಭದ್ರತೆ

ಒಂದನೇ ಪುಟದಿಂದ

‘ಕೊಲೆ ಬೆದರಿಕೆ ಬಗ್ಗೆ ತಮಿಳುನಾಡಿನಲ್ಲಿ ಪ್ರಕರಣ ದಾಖಲಾಗಿದೆ. ವಕೀಲರೊಬ್ಬರು ವಿಧಾನಸೌಧದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಬಗ್ಗೆ ಕೂಡಲೇ ತನಿಖೆ ನಡೆಸಲು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಸೂಚಿಸಲಾಗಿದೆ. ತಮಿಳುನಾಡಿನಿಂದ ಆರೋಪಿಗಳನ್ನು ವಶಕ್ಕೆ ಪಡೆದು, ಕಠಿಣ ಕಾನೂನು ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಲಾಗಿದೆ’ ಎಂದು ಹೇಳಿದರು.

‘ನ್ಯಾಯಾಲಯದ ತೀರ್ಪನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಅರ್ಜಿದಾರರಿಗೆ ತೀರ್ಪು ಸಮಂಜಸ ಎನಿಸದಿದ್ದರೆ ಮೇಲ್ಮನವಿ ಸಲ್ಲಿಸಲು ಎಲ್ಲ ಅವಕಾಶಗಳಿವೆ. ಆದರೂ ವಿಚ್ಛಿದ್ರಕಾರಿ ಶಕ್ತಿಗಳು ಇಂಥ ಹೇಳಿಕೆಗಳನ್ನು ನೀಡುವ ಮೂಲಕ ಜನರನ್ನು ಪ್ರಚೋದಿಸಿ ವ್ಯವಸ್ಥೆಯ ವಿರುದ್ಧ ಎತ್ತಿಕಟ್ಟುತ್ತಿವೆ’ ಎಂದರು.

ಜಾತ್ಯತೀತರು ಮೌನ ಮುರಿಯಬೇಕು: ‘ಈ ಪ್ರಕರಣದ ಬಗ್ಗೆ ಡೋಂಗಿ ಜಾತ್ಯತೀತರು ಮೌನ ವಹಿಸಿದ್ದಾರೆ. ಒಂದು ವರ್ಗದ ಜನರನ್ನು ಈ ರೀತಿ ಓಲೈಸುವುದು ಜಾತ್ಯತೀತತೆ ಅಲ್ಲ, ಕೋಮುವಾದ ಎಂದೆನಿಸುತ್ತದೆ. ಈ ಪ್ರಕರಣದ ಬಗ್ಗೆ ಎಲ್ಲರೂ ಒಗ್ಗಟ್ಟಾಗಿ ಕ್ರಮ ಕೈಗೊಂಡು ಈ ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಕಾಯ್ದುಕೊಳ್ಳಬೇಕಿದೆ. ಈ ರೀತಿಯ ಪ್ರಕರಣಗಳು ದೇಶದ ಪ್ರಜಾಪ್ರಭುತ್ವಕ್ಕೆ ಆತಂಕಕಾರಿ’ ಎಂದೂ ಹೇಳಿದರು.

ಸರ್ಕಾರವೇ ವೆಚ್ಚ ಭರಿಸಲಿದೆ: ‘ಪಾವಗಡದಲ್ಲಿ ಶುಕ್ರವಾರ ಸಂಭವಿಸಿದ ಬಸ್ ದುರಂತದಲ್ಲಿ ಗಾಯಗೊಂಡವರಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದರೆ ಬೆಂಗಳೂರಿಗೆ ಸ್ಥಳಾಂತರಿಸಲು ತಿಳಿಸಲಾಗಿದೆ. ಗಾಯಾಳುಗಳ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಲಿದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

ಸುದ್ದಿ 2 ನಿಮಿಷ

‘ಸಂಸದ ಮುನಿಸ್ವಾಮಿಗೆ ಪ್ರಾಣ ಬೆದರಿಕೆ ಕರೆ: ಪೊಲೀಸ್ ಭದ್ರತೆ’

ಕೋಲಾರ: ‘ಜಿಲ್ಲಾ ಕೇಂದ್ರದ ಕ್ಲಾಕ್ ಟವರ್‌ನಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿದ ವಿಚಾರವಾಗಿ ಸಂಸದ ಎಸ್.ಮುನಿಸ್ವಾಮಿ ಮತ್ತು ಅವರ ಕುಟುಂಬ ಸದಸ್ಯರಿಗೆ ಪ್ರಾಣ ಬೆದರಿಕೆ ಕರೆ ಬಂದಿದೆ. ಈ ರೀತಿ ಬೆದರಿಕೆ ಹಾಕಿರುವವರನ್ನು ಸುಮ್ಮನೆ ಬಿಡುವುದಿಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕ್ಲಾಕ್ ಟವರ್‌ನಲ್ಲಿ ಧ್ವಜಾರೋಹಣವಾದ ನಂತರ ಜೀವ ಬೆದರಿಕೆ ಕರೆ ಬಂದಿರುವ ಸಂಗತಿಯನ್ನು ಸಂಸದರು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದ್ದೇನೆ’ ಎಂದರು.

‘ಸಂಸದರು, ಶಾಸಕರು ಅಥವಾ ಜನಪ್ರತಿನಿಧಿಗಳಿಗೆ ಕರೆ ಮಾಡಿ ಭಯಪಡಿಸುವುದು ಈ ಕಾಲದಲ್ಲಿ ಸಾಧ್ಯವಿಲ್ಲ. ಇದನ್ನು ಮಟ್ಟ ಹಾಕುತ್ತೇವೆ. ಈ ರೀತಿ ಭಯೋತ್ಪಾದನೆ ಮಾಡುವವರನ್ನು ಸುಮ್ಮನೆ ಬಿಡುವುದಿಲ್ಲ. ಎಲ್ಲಿಂದ ಮತ್ತು ಹೇಗೆ ಬೆದರಿಕೆ ಕರೆ ಬಂದಿವೆ ಎಂಬುದನ್ನು ಪತ್ತೆ ಹಚ್ಚುತ್ತೇವೆ. ಇಂತಹ ದುಷ್ಕೃತ್ಯಗಳ ವಿರುದ್ಧ ನಮ್ಮ ಪೊಲೀಸ್ ಅಧಿಕಾರಿಗಳು ಗಟ್ಟಿಯಾಗಿ ನಿಲ್ಲುತ್ತಾರೆ. ಈ ರೀತಿಯ ಕಳಂಕಗಳನ್ನು ಸರಿಪಡಿಸುತ್ತೇವೆ’ ಎಂದು ತಿಳಿಸಿದರು.

‘ಪೊಲೀಸರು, ಸಂಸದರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ರಕ್ಷಣೆ ಕೊಡುತ್ತಾರೆ. ಜನಪ್ರತಿನಿಧಿಗಳ ಪ್ರಾಣ ತೆಗೆಯುವ ಮಟ್ಟಿಗೆ ಭಯೋತ್ಪಾದನೆ ನಡೆಯುತ್ತದೆ ಎಂದರೆ ನಮ್ಮಲ್ಲಿ ಪೊಲೀಸ್ ವ್ಯವಸ್ಥೆ ಇದೆ ಎಂಬುದನ್ನು ಅವರಿಗೆ ತೋರಿಸುತ್ತೇವೆ’ ಎಂದು ಗುಡುಗಿದರು.

‘2023ರ ಚುನಾವಣೆ: ಮೀಸಲಾತಿಗೆ ದುಡಿಯುವವರ ಬೆಂಬಲಿಸಿ’

ಹುನಗುಂದ (ಬಾಗಲಕೋಟೆ):‘ಹಿಂದುಳಿದ ಪಂಚಮಸಾಲಿ ಸಮಾಜದ ಮಕ್ಕಳ ಭವಿಷ್ಯಕ್ಕಾಗಿ ದುಡಿಯುವವರೇ ಸಮಾಜದ ನಾಯಕರು. 2023ರ ವಿಧಾನಸಭೆ ಚುನಾವಣೆಯಲ್ಲಿ ಮೀಸಲಾತಿಗಾಗಿ ದುಡಿಯುವವರನ್ನು ಬೆಂಬಲಿಸಿ’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠ, ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ, ಹುನಗುಂದ-ಇಳಕಲ್ ತಾಲ್ಲೂಕು ಘಟಕಗಳ ಆಶ್ರಯದಲ್ಲಿ ಭಾನುವಾರ ತಾಲ್ಲೂಕಿನ ಹಿರೇಬಾದವಾಡಗಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ವೀರರಾಣಿ ಕಿತ್ತೂರ ಚನ್ನಮ್ಮನ ಪ್ರತಿಮೆ ಅನಾವರಣ ಮತ್ತು 2ಎ ಮೀಸಲಾತಿಗಾಗಿ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

‘2022ನೇ ವರ್ಷ ಪಂಚಮಸಾಲಿ ಸಮಾಜಕ್ಕೆ ನಿರ್ಣಾಯಕ ವರ್ಷ. ಸಮಾಜಕ್ಕೆ 2ಎ ಮೀಸಲಾತಿ ಪಡೆದೇ ತೀರುತ್ತೇವೆ’ ಎಂದು ಸ್ವಾಮೀಜಿ ಹೇಳಿದರು.

ವೈದ್ಯಕೀಯ ಸ್ನಾತಕೋತ್ತರ ಪದವಿ ಸೀಟು ಹಂಚಿಕೆ

ರಾಜ್ಯದ ಪಾಲಿನ ಉಳಿದ ಸೀಟು ಕೇಂದ್ರಕ್ಕೆ ನೀಡದಿರಿ: ಕರವೇ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ನಲ್ಲಿ ರಾಜ್ಯಕ್ಕೆ ದೊರೆತ ಸೀಟುಗಳಲ್ಲಿ ಕೌನ್ಸೆಲಿಂಗ್ ನಂತರ ಹಂಚಿಕೆಯಾಗದೇ ಉಳಿದಿರುವ ಸೀಟುಗಳನ್ನು ರಾಜ್ಯ ಸರ್ಕಾರವು ಕೇಂದ್ರಕ್ಕೆ ಮರಳಿಸುತ್ತಿದೆ. ಇದು ರಾಜ್ಯದ ಅಭ್ಯರ್ಥಿಗಳಿಗೆ ಮಾಡುವ ಅನ್ಯಾಯದ ಪರಮಾವಧಿ’ ಎಂದು ಕರ್ನಾಟಕ ರಕ್ಷಣಾ ವೇದಿಕೆ ಟೀಕಿಸಿದೆ.

‘ರಾಜ್ಯದ ಕಿರಿಯ ವೈದ್ಯರು ವೈದ್ಯಕೀಯ ಸ್ನಾತಕೋತ್ತರ ಪದವಿಯ ಸೀಟುಗಳು ಪಡೆಯಲು ಅನುಕೂಲವಾಗುವಂತೆ 2022ರ ಮಾರ್ಚ್ 12ರಂದು ಕಟ್-ಆಫ್ ಅಂಕಗಳನ್ನು ಕಡಿಮೆ ಮಾಡಲಾಗಿತ್ತು. ಇದರಿಂದಾಗಿ ಕರ್ನಾಟಕದ ಸೇವಾನಿರತ ವೈದ್ಯರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದರು. ಆದರೆ, ರಾಜ್ಯ ಸರ್ಕಾರವು ಸೇವಾನಿರತ ವೈದ್ಯರಿಗೆ ಕಾಯ್ದಿರಿಸಿದ್ದ ಸೀಟುಗಳನ್ನು ಕೇಂದ್ರ ಸರ್ಕಾರಕ್ಕೆ ಮಾರ್ಚ್ 16ರಂದು ಮರಳಿಸಿದೆ. ಈ ನಿರ್ಧಾರದಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗಲಿದೆ’ ಎಂದು ವೇದಿಕೆಯ ಅಧ್ಯಕ್ಷ ಟಿ.ಎ.ನಾರಾಯಣ ಗೌಡ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಸುಧಾಕರ್ ಅವರ ಪ್ರಯತ್ನದಿಂದಲೇ ಕಿರಿಯ ವೈದ್ಯರು ಸ್ನಾತಕೋತ್ತರ ಸೀಟು ಗಿಟ್ಟಿಸಿಕೊಳ್ಳಲು ಕಟ್-ಆಫ್ ಅಂಕದಲ್ಲಿ ಕಡಿತ ಸಾಧ್ಯವಾಗಿತ್ತು. ಸಚಿವರ ಪ್ರಯತ್ನವನ್ನು ವಿಫಲಗೊಳಿಸಿದ ಕಾಣದ ಶಕ್ತಿಗಳು ಯಾವುವು’ ಎಂದು ಅವರು ಪ್ರಶ್ನಿಸಿದ್ದಾರೆ.

‘ತಮಿಳುನಾಡಿನಲ್ಲಿ ಕೌನ್ಸೆಲಿಂಗ್ ನಂತರ ಉಳಿದ ಸೀಟುಗಳನ್ನು ಮರುಹಂಚಿಕೆ ಮಾಡುತ್ತಾರೆ. ಕಟ್ ಆಫ್ ಅಂಕ ಕಡಿಮೆ ಮಾಡುವ ಮೂಲಕ ರಾಜ್ಯದ ಅಭ್ಯರ್ಥಿಗಳಿಗೆ ಉಳಿಕೆ ಸೀಟುಗಳು ಸಿಗುವಂತೆ ನೋಡಿಕೊಳ್ಳುತ್ತಾರೆ. ನಾಡಿನ ಹಕ್ಕುಗಳನ್ನು ಅವರು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದ್ದಾರೆ. ಅಲ್ಲಿನ ಸರ್ಕಾರದಿಂದ ನಮ್ಮವರು ಕಲಿಯುವುದು ತುಂಬಾ ಇದೆ’ ಎಂದರು.

ಮೊದಲೇ ನೀಟ್ ಪರೀಕ್ಷೆ ಜಾರಿಯಾದ ಬಳಿಕ ರಾಜ್ಯದ ವೈದ್ಯಕೀಯ ಕಾಲೇಜುಗಳ ಎಂಬಿಬಿಎಸ್ ಹಾಗೂ ಎಂಡಿ ಸೀಟುಗಳು ಪರಭಾಷಿಕರ ಪಾಲಾಗುತ್ತಿವೆ. ಈಗ ರಾಜ್ಯದ ಪಟ್ಟಿಯಲ್ಲಿರುವ ಸೀಟುಗಳನ್ನು ಮತ್ತೆ ಕೇಂದ್ರಕ್ಕೆ ಮರಳಿಸಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ಕರ್ನಾಟಕದ ಕಿರಿಯ ವೈದ್ಯರು ಪ್ರಾಣದ ಹಂಗು ತೊರೆದು ಸರ್ಕಾರಿ ಆಸ್ಪತ್ರೆಗಳಲ್ಲಿ ದುಡಿದಿದ್ದರು. ಈ ಕೊರೊನಾ ಯೋಧರ ಹಕ್ಕುಗಳನ್ನು ಸರ್ಕಾರ ಕಸಿಯುವುದು ಎಷ್ಟು ಸರಿ’ ಎಂದು ಅವರು ಪ್ರಶ್ನಿಸಿದ್ದಾರೆ.

ಒಳನೋಟ

ಹಗಲಲ್ಲಿ ಕೃಷಿಗೆ ವಿದ್ಯುತ್ ಇಲ್ಲ

ಬೆಂಗಳೂರು: ‘ರಾತ್ರಿ ವಿದ್ಯುತ್; ಕೃಷಿಗೆ ಕಂಟಕ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಮಾ.20) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಹಗಲಿನಲ್ಲಿ ವಿದ್ಯುತ್ ನೀಡಿ

ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ಭಾಗದಲ್ಲಿ ಹಗಲು ಹೊತ್ತಿನಲ್ಲಿ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಪಂಪ್‌ಸೆಟ್‌ಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಹಾಗಾಗಿ, ಬಹುತೇಕ ರೈತರು ರಾತ್ರಿ ವೇಳೆ ಬೆಳೆಗಳಿಗೆ ನೀರು ಹಾಯಿಸುತ್ತಾರೆ. ಈ ವೇಳೆ ವಿಷ ಜಂತುಗಳಿಂದ ರೈತರಿಗೆ ಅಪಾಯಗಳೂ ಸಂಭವಿಸಿವೆ. ಹಗಲಿನಲ್ಲೇ ವಿದ್ಯುತ್ ಅನ್ನು ಹೆಚ್ಚಿನ ಸಮಯ ಪೂರೈಸಿದರೆ, ಕೃಷಿಗೆ ಅನುಕೂಲವಾಗಲಿದೆ.

ಅಜಯಕುಮಾರ ಉತ್ನಾಳ, ವಿಜಯಪುರ

ಬೆಳೆ ರಕ್ಷಣೆಗೆ ಪರದಾಟ

ದೇಶದ ಬೆನ್ನೆಲುಬು ಆಗಿರುವ ರೈತರಿಗೆ ಸಮಸ್ಯೆಗಳ ಭಾರ ತಗ್ಗಲೇ ಇಲ್ಲ. ನೀರಿನ ಅಭಾವ ಇರುವಂತಹ ಪ್ರದೇಶದಲ್ಲಿ ಇವರ ಗೋಳು ಹೇಳತೀರದು. ರೈತರು ನೀರು ಸಾಲದೆ, ತಮ್ಮ ಬೆಳೆಗಳನ್ನು ರಕ್ಷಿಸಿಕೊಳ್ಳಲು ಪರದಾಡುತ್ತಾರೆ. ವಿದ್ಯುತ್ ಅಡಚಣೆಯಿಂದ ಅವರಿಗೆ ಬದುಕು ಅತಂತ್ರವಾಗಿದೆ. ರಾತ್ರಿ ವೇಳೆ ವಿದ್ಯುತ್ ನೀಡುವುದರಿಂದ ನಿದ್ದೆ ಬಿಟ್ಟು, ತೋಟಗಳಿಗೆ ಹೋಗುವುದು ಅನಿವಾರ್ಯ. ಹಗಲಿನಲ್ಲೇ ವಿದ್ಯುತ್ ನೀಡಿದರೆ ರೈತರ ಬಾಳು ಹಸನಾಗುತ್ತದೆ.

ಅಶೋಕ, ನೆಲಮಂಗಲ, ಬೆಂಗಳೂರು ಗ್ರಾಮಾಂತರ

ವಿದ್ಯುತ್ ಖಾಸಗೀಕರಣ ಬೇಡ



ರೈತರಿಗೆ ಉಚಿತ ವಿದ್ಯುತ್ ನೀಡಿದರೆ ಸರ್ಕಾರಕ್ಕೆ ಹೊರೆ ಎನ್ನುತ್ತಾರೆ. ಆದರೆ, ವಿದ್ಯುತ್ ಉತ್ಪಾದನೆಯನ್ನು ಖಾಸಗಿಯವರಿಗೆ ನೀಡಿ ರೈತರ ಬದುಕಿಗೆ ಬರೆ ಎಳೆಯಲು ಸರ್ಕಾರವೇ ಮುಂದಾಗಿದೆ. ವಿದ್ಯುತ್ ಪೂರೈಕೆಯಲ್ಲಿ ಆಗುವ ಸೋರಿಕೆ, ಕೈಗಾರಿಕೆಗಳಿಂದ ವಿದ್ಯುತ್ ಅಕ್ರಮ ಬಳಕೆ ತಡೆಗಟ್ಟಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣಕ್ಕೆ ಅವಕಾಶ ನೀಡಬಾರದು.

ಷಣ್ಮುಖಸ್ವಾಮಿ ಕುಕ್ಕುವಾಡ, ದಾವಣಗೆರೆ

ಉಚಿತ ವಿದ್ಯುತ್ ನೀಡಿ

‘ಹಳ್ಳಿಗಳ ಅಭಿವೃದ್ಧಿ ದೇಶದ ಪ್ರಗತಿ’ ಎನ್ನುವಂತೆ ಹಳ್ಳಿಗಳನ್ನು ‘ಸ್ಮಾರ್ಟ್’ಗೊಳಿಸುವ ಪರಿಕಲ್ಪನೆಗೆ ಸರ್ಕಾರ ರೂಪರೇಷೆಗಳನ್ನು ಹಾಕಿಕೊಳ್ಳಬೇಕು. ನೀರು, ವಿದ್ಯುತ್‌ನಂತಹ ಮೂಲಸೌಕರ್ಯಗಳು ಉಚಿತವಾಗಿ ಲಭ್ಯವಾಗಬೇಕು. ಹಳ್ಳಿಗಳಿಗೆ ಬೋರ್‌ವೆಲ್‌ಗಳಿಂದ ನೀರು ಪೂರೈಕೆ ಮಾಡಬೇಕು. ವಿದ್ಯುತ್ ವ್ಯವಸ್ಥೆಯನ್ನು ಸಮರ್ಪಕವಾಗಿ ಒದಗಿಸಬೇಕು. ಈ ಯೋಜನೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸ್ಥಳೀಯ ಮಟ್ಟದ ಅಧಿಕಾರಿಗಳು, ಶಾಸಕರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು.

ಮಂಜುಳಾ, ಬೆಂಗಳೂರು

ನೀರಿಲ್ಲದೆ ಬೆಳೆ ಹಾನಿ

ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲಿ ಹೆಚ್ಚು ತಾಸು ವಿದ್ಯುತ್ ಸರಬರಾಜು ಮಾಡಲು ಸರ್ಕಾರದ ಸೂಚನೆ ಇದ್ದರೂ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಇದರ ಅನುಷ್ಠಾನ ಸಾಧ್ಯವಾಗಿಲ್ಲ. ಇದರಿಂದ ಬೆಳೆಗಳಿಗೆ ನೀರು ಸಾಲದೆ ಒಣಗುತ್ತಿವೆ. ರಾತ್ರಿ ಸಮಯದಲ್ಲಿ ಹೆಚ್ಚು ವಿದ್ಯುತ್ ನೀಡುವ ಕಾರಣ ರೈತರು ನಿದ್ದೆಗೆಟ್ಟು ಜಮೀನುಗಳಿಗೆ ನೀರು ಹರಿಸಿ ಹೈರಾಣಾಗಿದ್ದಾರೆ. ರೈತರು ರಾತ್ರಿ ವೇಳೆ ತೋಟಗಳಿಗೆ ಹೋಗುವುದು ಅಪಾಯಕಾರಿ.

ಸಿದ್ದರಾಜು, ನಂಜನಗೂಡು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ● 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ

ಮಹಿಳೆಯರಿಗಾಗಿ ವಿವಿಧೋದ್ದೇಶ ಸಹಕಾರಿ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಶೇ 90ರಷ್ಟು ಷೇರು ಬಂಡವಾಳದೊಂದಿಗೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಮಹಿಳೆಯರಿಗಾಗಿ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಆರಂಭಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಸಹಕಾರ ವಸತಿ ಮಹಾಮಂಡಳ ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಾಧಕರಿಗೆ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ದಿವಂಗತ ನಟ ಪುನೀತ್ ರಾಜ್‌ಕುಮಾರ್ ಸೇರಿ ಒಟ್ಟು 60 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

'ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರು ಸಹಕಾರ ರಂಗದ ವಿವಿಧ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಬೇಕು. ಇದನ್ನು ಉತ್ತೇಜಿಸಲು ಈ ಸಮುದಾಯದವರ ಸದಸ್ಯತ್ವ ಶುಲ್ಕವನ್ನು ಸರ್ಕಾರವೇ ಭರಿಸಲಿದೆ. ಸಹಕಾರ ರಂಗದ ಯಶಸ್ಸಿನಲ್ಲಿ ದುಡಿಯುವ ವರ್ಗ ಹಾಗೂ ಮಹಿಳೆಯರ ಪಾಲ್ಗೊಳ್ಳುವಿಕೆ ಮಹತ್ವದ್ದಾಗಿದೆ. ನಾವು ಸಹಕಾರಿ ಕ್ಷೇತ್ರದಲ್ಲಿ ಔದ್ಯೋಗಿಕ ಕ್ರಾಂತಿ ಮಾಡಲು ನಿರ್ಧರಿಸಿದ್ದೇವೆ' ಎಂದರು.

'ಹಾಲು ಉತ್ಪಾದನೆಯ ಲಾಭವು ನೇರವಾಗಿ ಹೈನುಗಾರರಿಗೆ ಸೇರಬೇಕು. ಇದನ್ನು ಗಮನದಲ್ಲಿಟ್ಟುಕೊಂಡು 'ಕ್ಷೀರ ಸಮೃದ್ಧಿ ಬ್ಯಾಂಕ್' ಸ್ಥಾಪಿಸಲು ತೀರ್ಮಾನಿಸಿದ್ದೇವೆ. ಇದಕ್ಕಾಗಿ ಬಜೆಟ್‌ನಲ್ಲಿ ₹100 ಕೋಟಿ ಅನುದಾನ ಒದಗಿಸಿದ್ದೇವೆ. ಪ್ರತಿ ತಾಲ್ಲೂಕಿನಲ್ಲೂ ಶೀಘ್ರವೇ ಬ್ಯಾಂಕ್ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಈ ಬ್ಯಾಂಕ್ ಮೂಲಕ ಹಾಲು ಉತ್ಪಾದಕರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗಲಿದೆ' ಎಂದು ತಿಳಿಸಿದರು.

'ಪಠ್ಯಪುಸ್ತಕಗಳಲ್ಲಿ ಸಹಕಾರ ಕ್ಷೇತ್ರದ ಮಾಹಿತಿ ಅಳವಡಿಕೆಗೆ ಮನವಿ ಮಾಡಲಾಗಿದೆ. ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಶಾಸಕರ ನಿಧಿ ಬಳಸಲು ಅವಕಾಶ ನೀಡುವಂತೆ ಹಲವರು ಒತ್ತಾಯಿಸಿದ್ದಾರೆ. ಈ ಬೇಡಿಕೆಗಳನ್ನು ಪರಿಶೀಲಿಸುತ್ತೇವೆ' ಎಂದರು.

ಕಾರ್ಯಕ್ರಮದಲ್ಲಿ ಸಾಧಕರಿಗೆ 'ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಾಜ್ಯ ಸಹಕಾರ ಮಹಾಮಂಡಲ ಅಧ್ಯಕ್ಷ ಜಿ.ಟಿ.ದೇವೇಗೌಡ, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು, ಸಹಕಾರ ಸಚಿವ ಎಸ್‌ಟಿ.ಸೋಮಶೇಖರ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಡಿ.ವಿ.ಸದಾನಂದಗೌಡ ಪರಿಸರ ಸಚಿವ ಆನಂದ್ ಸಿಂಗ್ ಹಾಗೂ ಇತರರು ಇದ್ದಾರೆ

'ಅಧ್ಯಕ್ಷರು ಬದಲಾಗಬೇಕು'

'ಸಹಕಾರ ರಂಗದಲ್ಲಿರುವವರೇ ಸಾಹುಕಾರರಾಗಬಾರದು. ಅಧ್ಯಕ್ಷ ಸ್ಥಾನದ ಅವಧಿ ಮುಗಿದ ಬಳಿಕ ಮತ್ತೊಬ್ಬರಿಗೆ ಅವಕಾಶ ನೀಡಿ ನಂತರದ ಅವಧಿಗೆ ಅವರೇ ಅಧ್ಯಕ್ಷರಾಗುತ್ತಿದ್ದಾರೆ. ಈ ಧೋರಣೆ ಬದಲಾಗಬೇಕು' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'ಸಹಕಾರ ರಂಗ ಸಹಕಾರಿಯಾಗಿಯೇ ಉಳಿಯಬೇಕು. ಬಂಡವಾಳಶಾಹಿ ಮತ್ತು ಸಮತಾವಾದಕ್ಕೆ ಸಹಕಾರ ರಂಗವೇ ಉತ್ತರ' ಎಂದರು.

33 ಲಕ್ಷ ಮಂದಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ

'ಪ್ರಸಕ್ತ ಸಾಲಿನಲ್ಲಿ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸುಮಾರು ₹23 ಸಾವಿರ ಕೋಟಿ ಸಾಲ ನೀಡಲಾಗುತ್ತದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

'ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ₹5 ಪ್ರೋತ್ಸಾಹ ಧನ ನೀಡಲು ₹1,050 ಕೋಟಿ ಅನುದಾನ ಮೀಸಲಿಡಲಾಗಿದೆ' ಎಂದೂ ತಿಳಿಸಿದರು.

ಕೋವಿಡ್: ವಾರದಲ್ಲಿ 908 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ನಿಯಂತ್ರಣಕ್ಕೆ ಬಂದಿದ್ದು, ವಾರದಲ್ಲಿ 908 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ಅವಧಿಯಲ್ಲಿ 1,547 ಮಂದಿ ಚೇತರಿಸಿಕೊಂಡಿದ್ದಾರೆ. ಕೊರೊನಾ ಸೋಂಕಿತರಲ್ಲಿ ಏಳು ದಿನಗಳಲ್ಲಿ 19 ಮಂದಿ ಮೃತಪಟ್ಟಿರುವುದು ಖಚಿತಪಟ್ಟಿದೆ. ಹೊಸ ಪ್ರಕರಣಗಳಿಗಿಂತ ಚೇತರಿಕೆ ಹೊಂದುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ 1,995ಕ್ಕೆ ಇಳಿಕೆಯಾಗಿದೆ.

ಕೋವಿಡ್ ಮೂರನೇ ಅಲೆಯಲ್ಲಿ ಪ್ರಕರಣಗಳು ಗರಿಷ್ಠ ಸಂಖ್ಯೆಗೆ ತಲುಪಿದಾಗ ಎರಡು ಲಕ್ಷದವರೆಗೆ ಏರಿಕೆ ಕಂಡಿದ್ದ ಪರೀಕ್ಷೆಗಳ ಸಂಖ್ಯೆ ಈಗ 27 ಸಾವಿರಕ್ಕೆ ಇಳಿಕೆಯಾಗಿದೆ. ರಾಜ್ಯದಲ್ಲಿ ಭಾನುವಾರ 109 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 0.39ಕ್ಕೆ ಇಳಿಕೆಯಾಗಿದೆ.

14 ಜಿಲ್ಲೆಗಳಲ್ಲಿ ಮಾತ್ರ ಹೊಸದಾಗಿ ಪ್ರಕರಣಗಳು ಪತ್ತೆಯಾಗಿದ್ದು, 13 ಜಿಲ್ಲೆಗಳಲ್ಲಿ ಈ ಸಂಖ್ಯೆ ಒಂದಂಕಿಯಲ್ಲಿದೆ. ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.44 ಲಕ್ಷಕ್ಕೆ ಏರಿಕೆಯಾಗಿದೆ.

2 ಜಿಲ್ಲೆ ಕೋವಿಡ್ ಮುಕ್ತ: ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 125 ಮಂದಿ ಸೇರಿದಂತೆ ರಾಜ್ಯದಲ್ಲಿ 143 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 39.02 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 1,995ಕ್ಕೆ ಇಳಿಕೆಯಾಗಿದೆ. ಕೊಪ್ಪಳ ಹಾಗೂ ಗದಗ ಜಿಲ್ಲೆ ಕೋವಿಡ್ ಮುಕ್ತವಾಗಿದೆ. ಯಾದಗಿರಿ, ವಿಜಯಪುರ ಸೇರಿದಂತೆ 16 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಬೆಂಗಳೂರಿನಲ್ಲಿ 1,706 ಸೋಂಕಿತರಿದ್ದಾರೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರು ಹಾಗೂ ಹಾಸನದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 1.83 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,037ಕ್ಕೆ ಏರಿಕೆಯಾಗಿದೆ.

ಕೋವಿಡ್ ಸಾವು: ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದ ಕೋರಿಕೆ

ಪರಿಹಾರ ಅರ್ಜಿ ಸಲ್ಲಿಕೆಗೆ ಗಡುವು: ಮನವಿ

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಮೃತರಾದವರ ಕುಟುಂಬಕ್ಕೆ ₹ 50 ಸಾವಿರ ಪರಿಹಾರ ಕುರಿತು ರಾಜ್ಯಗಳು ಒದಗಿಸಿರುವ ದಾಖಲೆಗಳನ್ನು ಮಾದರಿ ಪರಿಶೀಲನೆಗೆ ಒಳಪಡಿಸಲು ಅವಕಾಶ ಕಲ್ಪಿಸಬೇಕು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಕೇಳಿದೆ.

ಅಲ್ಲದೆ, ಮುಂದಿನ ದಿನಗಳಲ್ಲಿ ಕೋವಿಡ್ ಸಾವಿನ ಪ್ರಕರಣಗಳಲ್ಲಿ ಪರಿಹಾರವನ್ನು ಕೋರಿ ದಾವೆ ಮಂಡಿಸಲು ಗರಿಷ್ಠ ನಾಲ್ಕು ವಾರದ ಸಮಯ ಮಿತಿ ನಿಗದಿಪಡಿಸಬೇಕು ಎಂದೂ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಕೇಂದ್ರ ಸರ್ಕಾರ ಕೋರಿದೆ.

ನಿಯಮಬಾಹಿರವಾಗಿ ಪರಿಹಾರವನ್ನು ಪಡೆಯಲು ಸ್ಥಳೀಯ ಅಧಿಕಾರಿಗಳ ನೆರವಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗುತ್ತಿದ್ದು, ಈ ಸಂಬಂಧ ಅಕ್ರಮ ಜಾಲವು ಸಕ್ರಿಯವಾಗಿದೆ ಎಂದು ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರ ಮತ್ತು ಕೆಲ ರಾಜ್ಯಗಳ ಸರ್ಕಾರಗಳಿಗೆ ಪರಿಹಾರ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳು ನಕಲಿ ದಾಖಲೆಗಳನ್ನು ಒಳಗೊಂಡಿವೆ ವರದಿಗಳಿವೆ ಎಂದು ಕೇಂದ್ರ ಸರ್ಕಾರ ತನ್ನ ಅರ್ಜಿಯಲ್ಲಿ ತಿಳಿಸಿದೆ.

ಈ ಹಿಂದೆ ಅಕ್ರಮ ಜಾಲ ಕಾರ್ಯತತ್ಪರವಾಗಿದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ಈ ಸಂಬಂಧ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರಿಂದ ತನಿಖೆ ನಡೆಸಬೇಕು ಎಂದು ನಿರ್ದೇಶನ ನೀಡಿತ್ತು.

ಕೋವಿಡ್–19ನಿಂದಾಗಿ ದೇಶದಲ್ಲಿ ಇದುವರೆಗೂ ಸುಮಾರು 5.16 ಲಕ್ಷಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

'ಭವಿಷ್ಯದ ಅಲೆಗಳಿಂದ ಪರಿಣಾಮ ಕಡಿಮೆ'

ನವದೆಹಲಿ: ದೇಶದಲ್ಲಿ ಕೋವಿಡ್ ಲಸಿಕೆ ನೀಡಿಕೆ ಪ್ರಮಾಣ ಹೆಚ್ಚಿದೆ. ಸೋಂಕು ತಗುಲಿದ ನಂತರ ಹಲವರಲ್ಲಿ ಸ್ವಾಭಾವಿಕವಾಗಿಯೇ ರೋಗ ನಿರೋಧಕ ಶಕ್ತಿಯೂ ವೃದ್ದಿಸಿದೆ. ಭವಿಷ್ಯದಲ್ಲಿ ಕಂಡುಬರುವ ಅಲೆಗಳು ಪರಿಣಾಮ ಬೀರವು ಎಂದು ತಜ್ಞರು ಹೇಳಿದ್ದಾರೆ.

ಎಐಎಂಐಎಂ ಬೆಂಬಲ ಪ್ರಸ್ತಾವ, ಬಿಜೆಪಿಯ ಪಿತೂರಿ: ಉದ್ಧವ್

ಮುಂಬೈ(ಪಿಟಿಐ): ಮಹಾ ವಿಕಾಸ್ ಅಘಾಡಿ ಸರ್ಕಾರಕ್ಕೆ ಬೆಂಬಲ ನೀಡುವ ಎಐಎಂಐಎಂ ಪಕ್ಷದ ಪ್ರಸ್ತಾವನೆಯು ಶಿವಸೇನಾ ಪಕ್ಷಕ್ಕೆ ಮಸಿ ಬಳಿಯುವ ಪ್ರತಿಪಕ್ಷ ಬಿಜೆಪಿಯ ಪಿತೂರಿಯಾಗಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಆರೋಪಿಸಿದ್ದಾರೆ.

ಶಿವಸೇನಾ ಪಕ್ಷದ ಮುಖ್ಯಸ್ಥರೂ ಆಗಿರುವ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಭಾನುವಾರ ವಿಡಿಯೊ ಸಂವಾದದ ಮೂಲಕ ಪಕ್ಷದ ಸಂಸದರು ಮತ್ತು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಈ ವೇಳೆ ಶಿವಸೇನಾ ಪಕ್ಷವು 'ಹಿಂದುತ್ವವಾದಿ' ಪಕ್ಷ ಎಂದು ಪ್ರತಿಪಾದಿಸಿದ ಅವರು, ಹಿಂದುತ್ವ ಮತ್ತಿತ್ತರೆ ವಿಚಾರಗಳ ಕುರಿತಾಗಿ ಪ್ರತಿಪಕ್ಷ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

'ಎಐಎಂಐಎಂ ಪಕ್ಷದ ಮೈತ್ರಿಯನ್ನು ಯಾರು ಬಯಸಿದ್ದಾರೆ? ಇದು ಬಿಜೆಪಿಯ ಪಿತೂರಿ ಮತ್ತು ಯೋಜನೆಯಾಗಿದೆ. ಎಐಎಂಐಎಂ ಮತ್ತು ಬಿಜೆಪಿ ಮಧ್ಯೆ ಬಹಿರಂಗಪಡಿಸಲಾಗದ ಒಪ್ಪಂದವಿದೆ. ಇದರ ಭಾಗವಾಗಿ ಶಿವಸೇನಾಗೆ ಮಸಿ ಬಳಿಯಲು ಎಐಎಂಐಎಂ ಪಕ್ಷಕ್ಕೆ ಬಿಜೆಪಿ ಆದೇಶಿಸಿದೆ. ತನ್ಮೂಲಕ ಶಿವಸೇನಾದ ಹಿಂದುತ್ವವಾದ ಪ್ರಶ್ನಿಸುವುದು ಅವರ ಉದ್ದೇಶವಾಗಿದೆ. ಇದರ ಪ್ರಕಾರ ಎಐಎಂಐಎಂ ಪಕ್ಷದ ನಾಯಕರು ಅಘಾಡಿ ಸರ್ಕಾರಕ್ಕೆ ಬೆಂಬಲ ನೀಡುವ ಮಾತನಾಡುತ್ತಿದ್ದಾರೆ' ಎಂದು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಐಎಂಐಎಂ ಸಂಸದ ಇಮ್ತಿಯಾಜ್ ಅವರು ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಶಿವಸೇನಾ ನೇತೃತ್ವದ ಮಹಾ ವಿಕಾಸ್ ಅಘಾಡಿ ಸರ್ಕಾರಕ್ಕೆ ಬೆಂಬಲ ನೀಡುವುದಾಗಿ ಹೇಳಿದ್ದರು. ಇದನ್ನು ಶಿವಸೇನಾ, ಎನ್‌ಸಿಪಿ, ಕಾಂಗ್ರೆಸ್ ವಿರೋಧಿಸಿತ್ತು.

ಕೋವಿಶೀಲ್ಡ್: 8 ವಾರಗಳ ನಂತರ 2ನೇ ಡೋಸ್‌ಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಲಸಿಕೆ ಕೋವಿಶೀಲ್ಡ್‌ನ ಮೊದಲ ಡೋಸ್ ನೀಡಿದ ನಂತರ 8–16 ವಾರಗಳ ಅವಧಿಯಲ್ಲಿ ಎರಡನೇ ಡೋಸ್ ನೀಡಬಹುದು ಎಂದು ಕೋವಿಡ್–19 ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ) ಶಿಫಾರಸು ಮಾಡಿದೆ. ಪ್ರಸ್ತುತ, ಕೋವಿಶೀಲ್ಡ್‌ನ ಮೊದಲ ಡೋಸ್ ನೀಡಿದ ನಂತರ 12–16 ವಾರಗಳ ಅವಧಿಯಲ್ಲಿ ಎರಡನೇ ಡೋಸ್ ನೀಡಲಾಗುತ್ತಿದೆ.

ಕೋವಿಶೀಲ್ಡ್ ಲಸಿಕೆಗೆ ಸಂಬಂಧಿಸಿದ ಈ ಶಿಫಾರಸನ್ನು ರಾಷ್ಟ್ರೀಯ ಕೋವಿಡ್–19 ಲಸಿಕೆ ಕಾರ್ಯಕ್ರಮದಡಿ ಇನ್ನೂ ಅನುಷ್ಠಾನಗೊಳಿಸಿಲ್ಲ. ಆದರೆ, ಭಾರತ್ ಬಯೋಟೆಕ್ ಉತ್ಪಾದಿಸುವ ಕೋವ್ಯಾಕ್ಸಿನ್ ಲಸಿಕೆಯ ಮೊದಲ ಡೋಸ್ ನೀಡಿದ 28 ದಿನಗಳ ನಂತರ ಎರಡನೇ ಡೋಸ್ ನೀಡಲಾಗುತ್ತಿದೆ. ಈ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರ ಬದಲಾಯಿಸುವುದಕ್ಕೆ ಸಂಬಂಧಿಸಿ ಎನ್‌ಟಿಎಜಿಐ ಯಾವುದೇ ಶಿಫಾರಸು ಮಾಡಿಲ್ಲ.

ಚೀನಾ: ಕೋವಿಡ್ ಹೆಚ್ಚಳ, ಲಾಕ್‌ಡೌನ್

ಬೀಜಿಂಗ್ (ಎಎಫ್‌ಪಿ): ಚೀನಾದ ಈಶಾನ್ಯ ಭಾಗದಲ್ಲಿ ಕೋವಿಡ್–19ರ ಪ್ರಕಣಗಳಲ್ಲಿ ಏರಿಕೆ ಕಂಡು ಬಂದಿದ್ದು ಮುನ್ನೆಚ್ಚರಿಕೆ ಕ್ರಮವಾಗಿ ಈ ಭಾಗದ ಲಕ್ಷಾಂತರ ಜನರನ್ನು ಮನೆಯಲ್ಲಿಯೇ ಇರುವಂತೆ ಸೂಚಿಸಲಾಗಿದ್ದು, ಕೆಲ ನಗರಗಳಲ್ಲಿ ಲಾಕ್‌ಡೌನ್ ಸೇರಿದಂತೆ ಬಿಗಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

2020ರಲ್ಲಿ ದೇಶವನ್ನು ಕಂಗೆಡಿಸಿದ್ದ ಕೋವಿಡ್ ಅನ್ನು ಲಾಕ್‌ಡೌನ್, ಸಾಮೂಹಿಕ ಪರೀಕ್ಷೆ, ಸಾರಿಗೆ ನಿರ್ಬಂಧಗಳಂತಹ ಕ್ರಮಗಳಿಂದ ಹತೋಟಿಗೆ ತರಲಾಗಿತ್ತು. ಆದರೆ ಕೋವಿಡ್ ರೂಪಾಂತರ ತಳಿ ಓಮ್ರೈಕ್ರಾನ್‌ನಿಂದ ದೇಶದ ಹಲವು ನಗರಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ.

ಜಿಲಿನ್ ಪ್ರಾಂತ್ಯದ ಎರಡನೇ ದೊಡ್ಡ ನಗರವಾದ ಜಿಲಿನ್‌ನಲ್ಲಿ ಕೋವಿಡ್ ಪ್ರಕರಣ ಹೆಚ್ಚಳವಾಗುತ್ತಿರುವ ಹಿನ್ನೆಲೆ ಸೋಮವಾರ ರಾತ್ರಿಯಿಂದ ಮೂರು ದಿನಗಳ ಕಾಲ ಲಾಕ್‌ಡೌನ್ ವಿಧಿಸಿ ಸ್ಥಳೀಯ ಆಡಳಿತ ಆದೇಶಿಸಿದೆ. ಈ ನಗರದಲ್ಲಿ ಸುಮಾರು 45 ಲಕ್ಷ ಜನಸಂಖ್ಯೆಯಿದೆ.

ಜಿಲಿನ್ ಪ್ರಾಂತ್ಯದ ರಾಜಧಾನಿ ಚಾಂಗ್ಚುನ್‌ನಲ್ಲಿ ಶನಿವಾರದಿಂದ ಮೂರು ದಿನಗಳ ಕಾಲ ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ.

ಚೀನಾದಾದ್ಯಂತ ಭಾನುವಾರ 4 ಸಾವಿರಕ್ಕಿಂತ ಹೆಚ್ಚು ಕೋವಿಡ್–19ರ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ ಜಿಲಿನ್ ಪ್ರಾಂತ್ಯದಲ್ಲಿಯೇ ಮೂರನೇ ಎರಡರಷ್ಟು ಪ್ರಕರಣಗಳು ದೃಢಪಟ್ಟಿವೆ.

ಇಟಲಿಯಲ್ಲಿ ಒಂದೇ ದಿನ 60 ಸಾವಿರ ಮಂದಿಗೆ ಸೋಂಕು

ಮಿಲಾನ್(ರಾಯಿಟರ್ಸ್): ಇಟಲಿಯಲ್ಲಿ ಭಾನುವಾರ ಒಂದೇ ದಿನ 60,415 ಮಂದಿ ಕೋವಿಡ್ ಸೋಂಕು ದೃಢಪಟ್ಟಿದ್ದು, 95 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ. ಶನಿವಾರ 74,024 ಪ್ರಕರಣಗಳು ದಾಖಲಾಗಿದ್ದವು. ಭಾನುವಾರ ಕೋವಿಡ್ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಆದರೆ, ಸಾವಿನ ಸಂಖ್ಯೆ ಹೆಚ್ಚಿದೆ. ಶನಿವಾರ 85 ಮಂದಿ ಕೋವಿಡ್ ಸೋಂಕಿನಿಂದ ಮೃತಪಟ್ಟಿದ್ದರು.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನೆ ವೃತ್ತ ಕಚೇರಿ, ಚಿಕ್ಕಮಗಳೂರು. ದೂ: 08262–233313
CIN: U40109 KA 2002 SGC 030425

ಸಂಖ್ಯೆ: ಮೆಸ್ಕಾಂ/ಅಇಂ(ವಿ)/ಕಾಪಾ/ಚಿವೃ/ಕಾನಿಇಂ/ಸಕಾಇಂ/ಸಇಂ/2021–22/15132 ದಿನಾಂಕ: 15.03.2022

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

"ಮಾದರಿ ಗ್ರಾಮ ಯೋಜನೆಯಡಿ" ಚಿಕ್ಕಮಗಳೂರು ವೃತ್ತದ ಕೊಪ್ಪ ವಿಭಾಗ ವ್ಯಾಪ್ತಿಯಲ್ಲಿನ ಈ ಕೆಳಕಂಡ ಗ್ರಾಮಗಳಿಗೆ ಪೂರ್ಣ ಗುತ್ತಿಗೆ ಆಧಾರದಲ್ಲಿ ವಿದ್ಯುತ್ ವಿತರಣಾ ಜಾಲ ವ್ಯವಸ್ಥೆಯನ್ನು ಬಲಪಡಿಸುವ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ.

ಕ್ರ.ಸಂ	ಗ್ರಾಮಗಳ ಹೆಸರು	ಬಿಡ್ ವಿಚಾರಣಾ ಸಂಖ್ಯೆ	ವರ್ಗ
1	ಕುಳೂರು	MESCOM/2021-22/EL/WORK_INDENT 1777	ಸಾಮಾನ್ಯ
2	ಮಡಬೂರು	MESCOM/2021-22/EL/WORK_INDENT 1778	ಪರಿಶಿಷ್ಟ ಜಾತಿ
3	ಮಾಗುಂಡಿ	MESCOM/2021-22/EL/WORK_INDENT 1781	ಸಾಮಾನ್ಯ
4	ನಾರ್ವೆ	MESCOM/2021-22/EL/WORK_INDENT 1782	ಪರಿಶಿಷ್ಟ ಪಂಗಡ
5	ಮೇಣಸೆ	MESCOM/2021-22/EL/WORK_INDENT 1783	ಸಾಮಾನ್ಯ

ಆಸಕ್ತ ಹಾಗೂ ಅರ್ಹ ಬಿಡ್ದುದಾರರು ದಿನಾಂಕ: 21.03.2022 ರಂದು ಅಥವಾ ತದನಂತರ www.eproc.karnataka.gov.in ವೆಬ್‌ಸೈಟ್‌ಗೆ ಲಾಗ್–ಆನ್ ಮಾಡಿ ಮಾಹಿತಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ ಚಿಕ್ಕಮಗಳೂರು

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಲಿ – ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–10/2021–22 ದಿನಾಂಕ: 15–03–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ॥ ಉಪಕಾರ್ ಡೆವಲಪರ್ಸ್ ಬೆಂಗಳೂರು ಇವರ ಜಂಟಿ ಸಹಭಾಗಿತ್ವ ಯೋಜನೆಯಡಿ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು ಕಸಬಾ ಹೋಬಳಿ, ದೊಡ್ಡ ಹುಣಸೂರು 2ನೇ ಹಂತದ ಬಡಾವಣೆಯ ಸರ್ವೆ ನಂ 135/1 & 137/2 ರಲ್ಲಿ ನಾಗೀರಕ ಸೌಲಭ್ಯಗಳೊಂದಿಗೆ ನಿವೇಶನಗಳನ್ನು ಅಭಿವೃದ್ಧಿಪಡಿಸಿಲಾಗಿದ್ದು, ಸದರಿ ನಿವೇಶನಗಳ ಹಂಚಿಕೆಗೆ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಸಾರ್ವಜನಿಕರು ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ. ಹಂಚಿಕೆಗೆ ಲಭ್ಯವಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ಸ್ಥಳ ಮತ್ತು ಜಿಲ್ಲೆ	ವರ್ಗ	ಒಟ್ಟು ಸ್ವತ್ತುಗಳು	ನೊಂದಣಿ ಶುಲ್ಕ	ಆರಂಭಿಕ ಠೇವಣಿ	ನಿವೇಶನದ ಬೆಲೆ
1	ದೊಡ್ಡ ಹುಣಸೂರು 2ನೇ ಹಂತ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕು	EWS	28	350/-	30,000/-	525/-
2		LIG	15	500/-	1,00,000/-	1050/-

ಅರ್ಜಿ ಮತ್ತು ಅರಂಭಿಕ ಠೇವಣಿ ಹಣ e-payment ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28–03–2022

ಷರತ್ತು ಮತ್ತು ನಿಬಂಧನೆಗಳು:

1) ಸ್ವತ್ತುಗಳನ್ನು ಪ್ರವರ್ಗವಾರು ಮೀಸಲಾತಿಯನ್ವಯ ಕ.ಗೃ.ಮಂ ಹಂಚಿಕೆ ನಿಯಮಾವಳಿ 1983 ರ ನಿಯಮ 9 ರಂತೆ ಸ್ವತ್ತುಗಳನ್ನು ಪ್ರವರ್ಗವಾರು ಮೀಸಲಾತಿಯನ್ವಯ ವಿಂಗಡಿಸಿ ಇ–ಲಾಟರಿ ಮುಂಖಾಂತರ ಹಂಚಿಕೆ ಮಾಡಲಾಗುವುದು.
2) ಆಯಾ ಪ್ರವರ್ಗವಾರು ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವರು (SC,ST,Defence/Ex-service,Central Govt, State Govt, Phy - Challenged Person, Senior Citizens, Others) ಸಂಬಂಧಿಸಿದ ದೃಢಿಕೃತ ದಾಖಲಾತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
3) ನಿಗಧಿತ ಆರಂಭಿಕ ಠೇವಣಿ ಹಣಕ್ಕಿಂತ ಕಡಿಮೆ ಹಣ ಪಾವತಿಸಿದಲ್ಲಿ ಅಂತಹ ಅರ್ಜಿಗಳನ್ನು ಲಾಟರಿಗೆ ಪರಿಗಣಿಸಲಾಗುವುದಿಲ್ಲ.
4) ಅರ್ಜಿದಾರರು ನಗರ, ಪುರಸಭೆ ವ್ಯಾಪ್ತಿಯಲ್ಲಿ ಗಂಡ/ಹೆಂಡತಿ ಅಪ್ರಾಪ್ತ ವಯಸ್ಕ ಮಕ್ಕಳ ಹೆಸರಿನಲ್ಲಿ ಮನೆ ಅಥವಾ ನಿವೇಶನವನ್ನು ಹೊಂದಿಲ್ಲದಿರುವುದರ ಮತ್ತು ಕರ್ನಾಟಕ ಗೃಹ ಮಂಡಳಿಯಿಂದಾಗಲಿ ಅಥವಾ ಇನ್ನಿತರೆ ಯಾವುದೇ ಪ್ರಾಧಿಕಾರದಿಂದಾಗಲಿ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣಿಕರಿಸಿ ಅಫಿಡೆವಿಟ್ ಸಲ್ಲಿಸಬೇಕು.
5) ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯ ಸಾಮಾನ್ಯ ನಿವಾಸಿಯಾಗಿರಬೇಕು.
6) ಆರ್ಥಿಕ ದುರ್ಬಲ ವರ್ಗದ (EWS) ನಿವೇಶನಗಳಿಗೆ ಅರ್ಜಿ ಸಲ್ಲಿಸುವವರು ಗ್ರಾಮೀಣ ನಿವಾಸಿಯಾಗಿದ್ದಲ್ಲಿ ರೂ.32,000/– ಹಾಗೂ ನಗರ/ಪಟ್ಟಣ ವಾಸಿಯಾಗಿದ್ದಲ್ಲಿ ರೂ. 87,000/– ಮೀರದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧ ಪಟ್ಟ ತಹಸೀಲ್ದಾರರವರಿಂದ ಆದಾಯ ಪ್ರಮಾಣ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಸಲಿಸುವುದು.
7) ಸ್ವತ್ತುಗಳನ್ನು ಪೂರ್ಣ ಬೆಲೆಯ ಮಾರಾಟದ (Outright sale Basis) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
8) ಪ್ರಕಟಣೆಯಲ್ಲಿ ನಮೂದಿಸಿರುವ ಸ್ವತ್ತುಗಳ ಒಟ್ಟು ಸಂಖ್ಯೆಗಳು ಬದಲಾವಣೆಗೆ ಒಳಪಟ್ಟಿರುತ್ತದೆ.
9) ನಿವೇಶನ ಹಂಚಿಕೆಯಾಗದೆ ಇರುವ ಅರ್ಜಿದಾರರಿಗೆ ಅರ್ಜಿಯೊಂದಿಗೆ ಪಾವತಿಸಿರುವ ಆರಂಭಿಕ ಠೇವಣಿಯನ್ನು ಯಾವುದೆ ಬಡ್ಡಿಯಿಲ್ಲದೆ ಮರುಪಾವತಿ ಮಾಡಲಾಗುವುದು. ಹಂಚಿಕೆ ನಂತರ ರದ್ದತಿಯಾದಲ್ಲಿ ಆರಂಭಿಕ ಠೇವಣಿ ಹಣದಲ್ಲಿ ಶೇ.25% ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10) ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಮೈಸೂರು ದೂರವಾಣಿ ಸಂಖ್ಯೆ:0821 2543237 ಇತರೆ ಮಾಹಿತಿಗಾಗಿ ಉಪಪ್ರಧಾನ ವ್ಯವಸ್ಥಾಪಕರು(ಗ್ರಾಸೇ) ಮತ್ತು ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080–227311 335 ಹಾಗೂ ವೆಬ್‌ಸೈಟ್ https://www.khb.karnataka.gov.in ಯಿಂದ ಮಾಹಿತಿ ಪಡೆಯಬಹುದು.

ದಿನಾಂಕ: 15–03–2022

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/DDU/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬೆಂ.ಅ.ಪ್ರಾ/ಕಾನಿಅ–1/ಡಿಎಸ್‌ಕೆಎಲ್/ಟೆಂಡರ್/02/2021–22 ದಿನಾಂಕ: 19.03.2022

ಅಧಿಸೂಚನೆ

1. ಆಯುಕ್ತರು, ಬಿಡಿಎ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಡಿಎಸ್‌ಕೆಎಲ್, ವಿಭಾಗ–1, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೆಂಗಳೂರು ಇವರು ಟೇಬಲ್–1ರಲ್ಲಿ ವಿವರಿಸಿರುವ ಕಾಮಗಾರಿಗಳ ನಿರ್ಮಾಣಕ್ಕಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೇಬಲ್–1 ರಲ್ಲಿ ನೀಡಿರುವ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರ್‌ದಾರರು ಟೆಂಡರ್ ಸಲ್ಲಿಸಬಹುದು. ಟೆಂಡರ್‌ದಾರರು ಏಕಕಾಲದಲ್ಲಿ ಎರಡು ಪ್ರತ್ಯೇಕ ವಿದ್ಯುನ್ಮಾನ ದಸ್ತಾವೇಜುಗಳನ್ನು ಸಲ್ಲಿಸತಕ್ಕದ್ದು. ಮೊದಲು ತೆರೆಯುವ ಮೊದಲನೇ ದಸ್ತಾವೇಜಿನಲ್ಲಿ ಇಎಂಡಿ ಮತ್ತು ಟೆಂಡರನ್ನು ಕೈಗೊಳ್ಳಲು ಅವರಿಗಿರುವ ಸಾಮರ್ಥ್ಯದ ಬಗ್ಗೆ (ಐಟಿಟಿ ಕಲಂ 2 ಮತ್ತು 3ರಲ್ಲಿ ವಿವರಿಸಿರುವಂತೆ) ತಿಳಿಸತಕ್ಕದ್ದು ಹಾಗೂ ಟೆಂಡರ್ ಮಾಡಿದ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹತೆ ಹೊಂದಿರುವ ಟೆಂಡರ್‌ದಾರರಿಗೆ ಮಾತ್ರ ಬೆಲೆ ಟೆಂಡರ್ (ಕಲಂ 4 ಮತ್ತು 9ರಲ್ಲಿ ವಿವರಿಸಿರುವಂತೆ) ಒಳಗೊಂಡಿರುವ ಎರಡನೇ ವಿದ್ಯುನ್ಮಾನ ದಸ್ತಾವೇಜುಗಳನ್ನು ತೆರೆಯಲಾಗುವುದು. ಟೆಂಡರ್ ಪಡೆಯಲು ಅರ್ಹತೆಗಾಗಿ ಟೆಂಡರ್‌ದಾರರು ಸೂಚನೆಗಳಲ್ಲಿನ ಕಲಂ–3ರಲ್ಲಿ ವಿವರಿಸಿರುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಹೊಂದಿರಬೇಕು.
2. ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜಿಕ ಸಂಗ್ರಹಣೆ ಪೋರ್ಟಲ್ (https://eproc.karnataka.gov.in) ನಲ್ಲಿ ಟೆಂಡರ್ ಪ್ರಕಟಣೆಯಾದ ದಿನಾಂಕ ಮತ್ತು ಸಮಯದಿಂದ ಕೊನೆಯ ದಿನಾಂಕ ಮತ್ತು ಸಮಯದವರೆಗೆ ಉಚಿತವಾಗಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಕೆಪಿಪಿ ಪೋರ್ಟಲ್‌ನಲ್ಲಿ ವಿವರಿಸಿದಂತೆ ವಿಸ್ತರಣೆ ದಿನಾಂಕದವರೆಗೂ ಸಲ್ಲಿಸಬಹುದು. ಆಸಕ್ತ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಡಿಎಸ್‌ಕೆಎಲ್, ವಿಭಾಗ–1, ಬಿಡಿಎ, ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020 ಇಲ್ಲಿಂದ ಪಡೆಯಬಹುದು.
3. ಟೆಂಡರ್ ಜೊತೆಗೆ ಮುಂಗಡ ಹಣ ಠೇವಣಿ (ಇಎಂಡಿ) ಕಡ್ಡಾಯವಾಗಿ ಹಾಗೂ ಟೆಂಡರ್–1ರಲ್ಲಿ ವಿವರಿಸಿರುವ ಕಾಮಗಾರಿಗೆ ಹಿಂತಿರುಗಿಸಲಾಗದ ಟೆಂಡರ್ ಸಂಸ್ಕರಣಾ ಶುಲ್ಕ ಜೊತೆಗೂಡಿರಬೇಕು. ಟೆಂಡರ್ ದಸ್ತಾವೇಜುಗಳಲ್ಲಿ ವಿವರಿಸಿರುವ ಯಾವುದೇ ಒಂದು ವಿಧಾನದಲ್ಲಿ ಟೆಂಡರ್ ಸಂಸ್ಕರಣಾ ಶುಲ್ಕವಿರತಕ್ಕದ್ದು.
4. ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ (https://eproc.karnataka.gov.in) ವಿವರಿಸಿರುವ ರೀತಿಯಲ್ಲಿ ಖರೀದಿದಾರರು ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡತಕ್ಕದ್ದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ವಿವರಿಸಿರುವ ದಿನಾಂಕ ಮತ್ತು ಸಮಯದಲ್ಲಿ ಮೊದಲನೇ ವಿದ್ಯುನ್ಮಾನ ದಸ್ತಾವೇಜುಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಡಿಎಸ್‌ಕೆಲ್, ವಿಭಾನ ನಂ.1, ಬಿಡಿಎ, ಕುಮಾರ ಪಾರ್ಕ್ ಪಶ್ಚಿಮ, ಟಿ. ಚೌಡಯ್ಯ ರಸ್ತೆ, ಬೆಂಗಳೂರು–560 020 ಇಲ್ಲಿ ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಉಪಸ್ಥಿತಿ ಇಲ್ಲದೆಯೇ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕದಂದು ಕಚೇರಿ ರಜಾ ದಿನವಿದ್ದಲ್ಲಿ ಅದೇ ಸ್ಥಳ ಮತ್ತು ಸಮಯದಲ್ಲಿ ಮುಂದಿನ ಕೆಲಸದ ದಿನಾಂಕದಂದು ಟೆಂಡರ್ ತೆರೆಯಲಾಗುವುದು.
5. ಅಭಿಯಂತರ ಸದಸ್ಯರು, ಬಿಡಿಎ, ಕುಮಾರ ಪಾರ್ಕ್ ಪಶ್ಚಿಮ, ಟಿ. ಚೌಡಯ್ಯ ರಸ್ತೆ, ಬೆಂಗಳೂರು–560 020 ಇವರ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವಿವರಿಸಿರುವ ದಿನಾಂಕ ಮತ್ತು ಸಮಯದಂತೆ ಬಿಡ್ ಪೂರ್ವ ಸಭೆ ನಡೆಸಲಾಗುವುದು.
6. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹೊರತುಪಡಿಸಿ ದರಗಳನ್ನು ಉಲ್ಲೇಖಿಸಲಾಗಿದೆ (ವಿದ್ಯುತ್ ಕಾಮಗಾರಿಗಳನ್ನು ಹೊರತುಪಡಿಸಿ) ಹಾಗೂ ಕಾಲಾನುಗುಣಕ್ಕೆ ತಿದ್ದುಪಡಿಯಾದಂತೆ ಮತ್ತು ಸರ್ಕಾರಿ ಆದೇಶಗಳನ್ವಯ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ ಮೊತ್ತವನ್ನು) ಉದ್ಯೋಗದಾತನಿಂದ ಪ್ರತ್ಯೇಕವಾಗಿ ಹಿಂದಿರುಗಿಸಲಾಗುವುದು. ವಿದ್ಯುತ್ ಕಾಮಗಾರಿಗೆ ಜಿಎಸ್‌ಟಿ ಒಳಗೊಂಡಂತೆ ದರಗಳನ್ನು ನಮೂದಿಸುವುದು.
7. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡತಕ್ಕದ್ದು.

ಟೇಬಲ್–1: ಟೆಂಡರ್‌ನ ವಿವರಗಳು

ಕ್ರ. ಸಂ.	ಕಾಮಗಾರಿಗಳ ವಿವರಗಳು	ಟೆಂಡರ್‌ಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ)	ಇಎಂಡಿ (ರೂ. ಕೋಟಿ ಗಳಲ್ಲಿ)	ಟೆಂಡರ್ ಸಂಸ್ಕರಣಾ ಶುಲ್ಕ (ಟೆಂಡರ್ ವೆಚ್ಚ) (ರೂ)	ಪೂರ್ಣಗೊಳ್ಳುವ ಅವಧಿ
1	**ಗುತ್ತಿಗೆ–1:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–1ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	204.170	2.04	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
2	**ಗುತ್ತಿಗೆ–2:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–2ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	162.300	1.62	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
3	**ಗುತ್ತಿಗೆ–3:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–3ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	173.010	1.73	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
4	**ಗುತ್ತಿಗೆ–4:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–4ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	147.980	1.48	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
5	**ಗುತ್ತಿಗೆ–5:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–5ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	214.660	2.15	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
6	**ಗುತ್ತಿಗೆ–6:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–6ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	194.550	1.95	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
7	**ಗುತ್ತಿಗೆ–7:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–7ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	258.620	2.59	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
8	**ಗುತ್ತಿಗೆ–8:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–8ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	235.180	2.35	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು
9	**ಗುತ್ತಿಗೆ–9:** ಬೆಂಗಳೂರಿನ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್–9ರಲ್ಲಿ ನಿವೇಶನಗಳ ರಚನೆ ಮತ್ತು ರಸ್ತೆಗಳ ನಿರ್ಮಾಣ, ರಸ್ತೆ ಬದಿ ಒಳಚರಂಡಿ, ಅಡ್ಡ ಒಳಚರಂಡಿ ಕಾಮಗಾರಿಗಳು, ಮಳೆನೀರು ಒಳಚರಂಡಿ, ಮಳೆನೀರು ಕೊಯ್ಲು, ಸೌಲಭ್ಯಗಳ ಅಭಿವೃದ್ಧಿಯನ್ನು ಒಳಗೊಂಡಂತೆ ರಕ್ಷಣಾ ಕಾಮಗಾರಿಗಳು. (ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಕಾಮಗಾರಿಗಳು)	274.870	2.75	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ್ನು ಪರಾಮರ್ಶಿಸಿ	ಮಳೆಗಾಲ ಸೇರಿದಂತೆ 11 ತಿಂಗಳು

ವೇಳಾಪಟ್ಟಿ: ಟೆಂಡರ್ ಪ್ರಕಟಣೆ ದಿನಾಂಕ: **19.03.2022.** ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **23.03.2022, ಸಂಜೆ 4.00 ಗಂಟೆಯಿಂದ.** ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ: **31.03.2022, ಮಧ್ಯಾಹ್ನ 3.00 ಗಂಟೆವರೆಗೆ.** ಪ್ರೀ–ಬಿಡ್ ಸಭೆ: **05.04.2022, ಮಧ್ಯಾಹ್ನ 3.00 ಗಂಟೆ.** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **25.04.2022 ಸಂಜೆ 4.00 ಗಂಟೆಯವರೆಗೆ.** ಮೊದಲ ವಿದ್ಯಾನ್ಮಾನ ದಸ್ತಾವೇಜು ತೆರೆಯುವ ದಿನಾಂಕ (ತಾಂತ್ರಿಕ ಬಿಡ್): **26.04.2022 ಸಂಜೆ 4.30 ಗಂಟೆ.** ಎರಡನೇ ವಿದ್ಯಾನ್ಮಾನ ದಸ್ತಾವೇಜು ತೆರೆಯುವ ದಿನಾಂಕ (ಆರ್ಥಿಕ ಬಿಡ್): ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಡಿಎಸ್‌ಕೆಎಲ್-1, ಬಿಡಿಎ, ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಒಬ್ಬ ವ್ಯಕ್ತಿಗೆ ಸಂಬಂಧಿಸಿದ ವಿಷಯಗಳನ್ನು ಆತನ ದೃಷ್ಟಿಕೋನದಿಂದ ಗ್ರಹಿಸುವವರೆಗೂ ನೀವು ಆ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

–ಹಾರ್ಪರ್ ಲೀ

ವಿಶ್ವವಿದ್ಯಾಲಯಗಳಲ್ಲಿನ ನೇಮಕಾತಿ ಲೋಪ ಸರಿಪಡಿಸುವ ಕೆಲಸ ತಕ್ಷಣ ಆಗಲಿ

ಬೋಧನೆ ಮತ್ತು ಸಂಶೋಧನೆಯ ಮೂಲಕ ಶಿಕ್ಷಣದಲ್ಲಿ ಉತ್ಕೃಷ್ಟತೆ ಮೂಡಿಸಬೇಕಾದ ವಿಶ್ವವಿದ್ಯಾಲಯಗಳು ಕೆಟ್ಟ ಕಾರಣಗಳಿಗಾಗಿ ಸುದ್ದಿ ಆಗುತ್ತಿವೆ. ಇಂತಹ ವರದಿಗಳಿಗೆ ಪುಷ್ಟಿ ಕೊಡುವ ರೀತಿಯಲ್ಲಿ ವಿಶ್ವವಿದ್ಯಾಲಯವೊಂದರ ಕುಲಪತಿ ನೇಮಕವನ್ನು ಕರ್ನಾಟಕ ಹೈಕೋರ್ಟ್ ಬಹುಶಃ ಇದೇ ಮೊದಲ ಬಾರಿಗೆ ರದ್ದುಪಡಿಸಿದೆ. ಇದು, ಕುಲಪತಿ ನೇಮಕ ಪ್ರಕ್ರಿಯೆಯ ಬಗ್ಗೆಯೇ ಪ್ರಶ್ನೆಗಳನ್ನು ಮೂಡಿಸಿದೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಪ್ರೊ. ಕೆ.ಆರ್.ವೇಣುಗೋಪಾಲ್ ಅವರನ್ನು ನೇಮಕ ಮಾಡಿದ್ದನ್ನು ಏಕಸದಸ್ಯ ಪೀಠವು 2019ರಲ್ಲಿ ರದ್ದುಪಡಿಸಿತ್ತು. ನೇಮಕವನ್ನು ಪ್ರಶ್ನಿಸಿ ಗುಲ್ಬರ್ಗ ವಿಶ್ವವಿದ್ಯಾಲಯದ ಪ್ರೊ. ಸಂಗಮೇಶ ಪಾಟೀಲ ಅರ್ಜಿ ಸಲ್ಲಿಸಿದ್ದರು. ಅವರೂ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಸ್ಥಾನದ ಆಕಾಂಕ್ಷಿಯಾಗಿದ್ದರು. ವಜುಭಾಯಿ ವಾಲಾ ಅವರು ರಾಜ್ಯಪಾಲರಾಗಿದ್ದಾಗ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯ ಸೆಕ್ಷನ್ 14(4) ಉಲ್ಲಂಘಿಸಿ, ರಾಜ್ಯ ಸರ್ಕಾರದ ಸಹಮತ ಇಲ್ಲದೆಯೇ ವೇಣುಗೋಪಾಲ್ ಅವರನ್ನು ಏಕಪಕ್ಷೀಯವಾಗಿ ನೇಮಿಸಿದ್ದಾರೆ ಎಂದು ಪಾಟೀಲ ಆರೋಪಿಸಿದ್ದರು. ರಾಜ್ಯಪಾಲರು ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಹೌದು. ಏಕಸದಸ್ಯ ಪೀಠದ ಆದೇಶದ ಜಾರಿಗೆ ಈ ಹಿಂದೆ ತಡೆಯಾಜ್ಞೆ ನೀಡಿದ್ದ ವಿಭಾಗೀಯ ಪೀಠ ಈಗ ಆದೇಶವನ್ನು ಎತ್ತಿಹಿಡಿದಿದೆ. ವೇಣುಗೋಪಾಲ್ ಅವರ ನೇಮಕವನ್ನು ಸರ್ಕಾರವು ನಂತರದಲ್ಲಿ ಅನುಮೋದಿಸಿತ್ತು. ಆದರೆ, ‘ಕೆಲವು ಕೆಲಸಗಳನ್ನು ನಿರ್ದಿಷ್ಟ ರೀತಿಯಲ್ಲಿ ಮಾಡಬೇಕು ಎಂದು ಕಾನೂನು ಹೇಳಿರುವಾಗ, ಅದನ್ನು ಹಾಗೆಯೇ ಮಾಡಬೇಕು. ಇನ್ನೊಂದು ಬಗೆಯಲ್ಲಿ ಆ ಕೆಲಸ ಮಾಡಲು ಅವಕಾಶವಿಲ್ಲ. ಇದು ಒಪ್ಪಿತ ತತ್ವ’ ಎಂದು ಹೇಳಿರುವ ಹೈಕೋರ್ಟ್, ಸರ್ಕಾರ ಸಮ್ಮತಿ ನೀಡಿದ್ದು ಅಸಿಂಧು ಎಂದು ಹೇಳಿದೆ. ಉನ್ನತ ಕಲಿಕಾ ಕೇಂದ್ರಗಳ ಪಾವಿತ್ರ್ಯವನ್ನು ಕಾಯುವ ಉದ್ದೇಶದಿಂದ ರಾಜ್ಯಪಾಲರನ್ನು ವಿಶ್ವವಿದ್ಯಾಲಯಗಳ ಕುಲಾಧಿಪತಿಯನ್ನಾಗಿಸಲಾಗಿದೆ. ಆದರೆ, ಆ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ವಾಲಾ ಅವರು ವಿಫಲರಾಗಿರುವುದನ್ನು ಅವರ ಅಧಿಕಾರ ಅವಧಿಯಲ್ಲಿ ನಡೆದ ಕೆಲವು ನೇಮಕಾತಿಗಳ ಸುತ್ತ ಇರುವ ವಿವಾದವು ಸ್ಪಷ್ಟಪಡಿಸುತ್ತದೆ. ಖಾಸಗಿ ದಂತವೈದ್ಯಕೀಯ ಕಾಲೇಜೊಂದರ ಪ್ರೊಫೆಸರ್ ಒಬ್ಬರನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಯನ್ನಾಗಿ ಸರ್ಕಾರದ ಜೊತೆ ಸಮಾಲೋಚನೆ ನಡೆಸದೆಯೇ ನೇಮಕ ಮಾಡಲು ಮುಂದಾಗಿದ್ದಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಕೆ. ಸುಧಾಕರ್ ಅವರು ಸಾರ್ವಜನಿಕವಾಗಿ ವಿರೋಧ ವ್ಯಕ್ತಪಡಿಸಿದ್ದರು.

ಸಾಮರ್ಥ್ಯ ಮತ್ತು ಅರ್ಹತೆಯನ್ನು ಮಾತ್ರ ಅಳತೆಗೋಲಾಗಿ ಇರಿಸಿಕೊಳ್ಳುವ ಮೂಲಕ ನೇಮಕಾತಿಗಳಿಗೆ ವಿಶ್ವಾಸಾರ್ಹತೆ ಬರುವಂತೆ ನೋಡಿಕೊಳ್ಳಬೇಕು

ವಿಶ್ವವಿದ್ಯಾಲಯಗಳು ಲೋಕೋಪಯೋಗಿ ಇಲಾಖೆಯ ಶಾಖೆಗಳಂತೆ ವರ್ತಿಸುತ್ತಿರುವಂತಿದೆ, ದೊಡ್ಡ ಪ್ರಮಾಣದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿವೆ ಎಂಬ ಮಾತು ಈ ಹಿಂದಿನ ವಾರ ವಿಧಾನಮಂಡಲ ಅಧಿವೇಶನದಲ್ಲಿ ಪ್ರಸ್ತಾಪವಾಗಿತ್ತು. ಸಮಂಜಸವಲ್ಲದ ನೇಮಕಾತಿಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕಂಡುಬಂದಿರುವ ಗುಣಮಟ್ಟ ಕುಸಿತದ ನಡುವಿನ ನಂಟು ಕಣ್ಣಿಗೆ ರಾಚುವಂತೆ ಇದೆ. ಕುಲಪತಿಯಾಗಿ ನೇಮಕ ಆಗುವುದಕ್ಕೆ ₹ 8 ಕೋಟಿಯಿಂದ ₹ 10 ಕೋಟಿವರೆಗೆ ಲಂಚ ಕೊಡಬೇಕು ಎಂಬ ಮಾತು ಅಕಡೆಮಿಕ್ ವಲಯದಲ್ಲಿ ಇದೆ. ವಿಶ್ವವಿದ್ಯಾಲಯಗಳ ಕ್ಯಾಂಪಸ್‌ನಲ್ಲಿ ಆರಂಭಿಸುವ ಕಟ್ಟಡ ನಿರ್ಮಾಣ ಕಾಮಗಾರಿಗಳು ಈ ಹಣವನ್ನು ಹೊಂದಿಸುವುದಕ್ಕೆ ಅಥವಾ ಮಾಡಿರುವ ‘ಹೂಡಿಕೆ’ಯನ್ನು ಹಿಂದಕ್ಕೆ ಪಡೆಯಲು ನೆರವಾಗುತ್ತಿವೆ ಎಂಬ ಮಾತುಗಳೂ ಇವೆ. ತಪ್ಪು ಎಲ್ಲಿ ಆಗಿದೆ ಎಂದು ಶಾಸನಸಭೆಗಳ ಪ್ರತಿನಿಧಿಗಳಿಗೆ ಹಾಗೂ ಸರ್ಕಾರಕ್ಕೆ ಗೊತ್ತಿದೆ. ಸರಿಪಡಿಸಲು ಅವರು ಏಕೆ ಕ್ರಮ ಕೈಗೊಳ್ಳಲಿಲ್ಲ? ನೇಮಕಾತಿಗಳ ಗುಣಮಟ್ಟ ಸುಧಾರಣೆಗೆ ಹಿರಿಯ, ತಜ್ಞರ ಹೆಸರುಗಳ ಪಟ್ಟಿ ಮಾಡಲಾಗುವುದು, ಕುಲಪತಿಗಳು ಹಾಗೂ ಇತರ ಅಕಡೆಮಿಕ್ ನೇಮಕಗಳನ್ನು ಆ ಪಟ್ಟಿಯಿಂದ ಸೂಕ್ತ ಹೆಸರು ಆಯ್ಕೆ ಮಾಡಿ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಅವರು ಕೆಲವು ಸಮಯದ ಹಿಂದೆ ಭರವಸೆ ನೀಡಿದ್ದರು. ಆದರೆ ಅವರ ಮಾತುಗಳು ಕಾಗದದ ಮೇಲೆ ಮಾತ್ರವೇ ಉಳಿದಿವೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಮೂಡಿರುವ ಕೊಳಕನ್ನು ನಿವಾರಿಸಲು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಕ್ಷಣ ಕ್ರಮ ಕೈಗೊಳ್ಳಬೇಕು. ಅದನ್ನು ಮಾಡಲು ಅವರು ಮೊದಲ ಹೆಜ್ಜೆಯಾಗಿ, ನೇಮಕಾತಿಗಳಿಗೆ ವಿಶ್ವಾಸಾರ್ಹತೆ ಬರುವಂತೆ ನೋಡಿಕೊಳ್ಳಬೇಕು. ಸಾಮರ್ಥ್ಯ ಮತ್ತು ಅರ್ಹತೆಯನ್ನು ಮಾತ್ರ ಅಳತೆಗೋಲಾಗಿ ಇರಿಸಿಕೊಳ್ಳಬೇಕು. ನೇಮಕಾತಿಗಳ ಸಂದರ್ಭದಲ್ಲಿ ಪಾಲಿಸಬೇಕಾದ ಪ್ರಕ್ರಿಯೆಯಲ್ಲಿ ಲೋಪವಾಗದಂತೆ ನಿಗಾ ವಹಿಸಬೇಕು.

ದಿನದ ಟ್ವೀಟ್

ಗುಬ್ಬಚ್ಚಿ ಉಳಿಸೋಣ

ಮನೆಯಂಗಳ, ಬೀದಿಗಳಲ್ಲಿ ಸದಾ ಚಿಲಿಪಿಲಿಗುಟ್ಟುತ್ತಾ ಹಾರಾಡುವ ಗುಬ್ಬಚ್ಚಿಗಳು ಪ್ರಕೃತಿಮಾತೆಯ ಸುಂದರ ಮಕ್ಕಳು. ಪರಿಸರ ನಾಶ, ಆಧುನಿಕ ತಂತ್ರಜ್ಞಾನಗಳ ಅತಿಯಾದ ಬಳಕೆಯಿಂದ ಗುಬ್ಬಚ್ಚಿ ಸಂತತಿ ಅಪಾಯದ ಅಂಚಿಗೆ ಹೋಗುತ್ತಿರುವ ಕುರಿತು ಜಾಗೃತಿ ಮೂಡಿಸೋಣ. ಗುಬ್ಬಚ್ಚಿಗಳ ಸಂರಕ್ಷಣೆಗೆ ಮುಂದಾಗೋಣ.
#WorldSparrowDay

ಆರಗ ಜ್ಞಾನೇಂದ್ರ, ಗೃಹ ಸಚಿವ

ಕಿಡಿನುಡಿ

ಫೆಬ್ರುವರಿ ಹಿಜಾಬ್ ವಿವಾದ, ಮಾರ್ಚ್ ಭಗವದ್ಗೀತೆ, ಏಪ್ರಿಲ್ ಮತ್ತೊಂದು ವಿವಾದ... ಹೀಗೇ ಮುಂದಿನ ಚುನಾವಣೆತನಕ ಕಾಲಹರಣ. ಜನರನ್ನು ಮಂಗ ಮಾಡುವುದರಲ್ಲಿ ಇವರು ಎತ್ತಿದ ಕೈ.

ಸಂದೇಶ್ ಇಂದಾವರ, ಸಾಫ್ಟ್‌ವೇರ್ ಉದ್ಯೋಗಿ

25 ವರ್ಷಗಳ ಹಿಂದೆ

ಶುಕ್ರವಾರ, 21-3-1997

• ಉ.ಪ್ರ: ದಂಗುಬಡಿಸಿದ ಬೆಳವಣಿಗೆ

ನವದೆಹಲಿ, ಮಾರ್ಚ್ 20– ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತು ಬಿಎಸ್‌ಪಿ ಎರಡನೇ ಬಾರಿಗೆ ಒಂದುಗೂಡಿ ಸರ್ಕಾರ ರಚಿಸುವ ಒಪ್ಪಂದಕ್ಕೆ ಬಂದ ಹಠಾತ್ ರಾಜಕೀಯ ಬೆಳವಣಿಗೆಯು ದೆಹಲಿಯ ರಾಜಕೀಯ ವಲಯವನ್ನು ದಂಗುಬಡಿಸಿದೆ.

ಸರ್ಕಾರ ರಚಿಸುವ ಸಾಧ್ಯತೆಗಳ ರಹಸ್ಯ ಮಾತುಕತೆಗಳು, ಪ್ರಧಾನಿ ಅವರಿಗಾಗಲಿ, ಕೇಂದ್ರ ಗೂಢಚರ್ಯ ಸಂಸ್ಥೆಗಾಗಲಿ, ಇಲ್ಲವೇ ಸುದ್ದಿಯ ವಾಸನೆ ಹಿಡಿಯುವ ಮಾಧ್ಯಮಗಳಿಗಾಗಲಿ ಬುಧವಾರ ಮಧ್ಯಾಹ್ನ ಬಿಜೆಪಿ ವಕ್ತಾರರು ಪ್ರಕಟಿಸುವವರೆವಿಗೂ ತಿಳಿಯದೆ ಅಚ್ಚರಿ ಹುಟ್ಟಿಸಿತು.

ದೆಹಲಿಯ ಕೇರಳ ಮೂಲದ ಹಿರಿಯ ಪತ್ರಕರ್ತರೊಬ್ಬರ ಮಗಳ ವಿವಾಹ ಕಳೆದ ತಿಂಗಳ 28ರಂದು ಚೆನ್ನೈನಲ್ಲಿ ನೆರವೇರಿತು. ಈ ವಿವಾಹಕ್ಕೆ ಬಿಜೆಪಿಯ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಮತ್ತು ಬಿಎಸ್‌ಪಿಯ ನಾಯಕ ಕಾನ್ಷಿರಾಂ ಹೋಗಿದ್ದಾಗ, ಅಲ್ಲಿ ಮತ್ತೆ ಉತ್ತರಪ್ರದೇಶದ ಸಮಸ್ಯೆಯನ್ನು ಈ ಇಬ್ಬರು ನಾಯಕರು ಪರಸ್ಪರ ಚರ್ಚಿಸಿದ್ದೇ ಮುಂದೆ ದೆಹಲಿಯಲ್ಲಿ ಮತ್ತಷ್ಟು ಮಾತುಕತೆಗೆ ಅವಕಾಶ ಒದಗಿಸಿತು ಎಂಬುದಾಗಿ ಬಿಜೆಪಿಯ ನಂಬಲರ್ಹವಾದ ಮೂಲಗಳು ಹೇಳುತ್ತಿವೆ.

ಮಾಯಾವತಿ ನೇತೃತ್ವದ ಐವರು ಸಚಿವರ ಸಂಪುಟ ನಾಳೆ ಪ್ರಮಾಣವಚನ ಸ್ವೀಕರಿಸಲಿದೆ.

• ಭಂಡಾರಿ ವಜಾ ನಿರ್ಣಯ ಕೈಬಿಟ್ಟ ಬಿಜೆಪಿ

ನವದೆಹಲಿ, ಮಾರ್ಚ್ 20 (ಯುಎನ್‌ಐ)– ಲೋಕಸಭೆಯಲ್ಲಿ ಇಂದು ನಡೆದ ನಾಟಕೀಯ ಬೆಳವಣಿಗೆಯಲ್ಲಿ ತನ್ನ ಕಾರ್ಯತಂತ್ರವನ್ನು ಒಮ್ಮೆಲೇ ಬದಲಿಸಿದ ಬಿಜೆಪಿ, ಉತ್ತರ ಪ್ರದೇಶದ ರಾಜ್ಯಪಾಲ ರೋಮೇಶ್ ಭಂಡಾರಿ ಅವರನ್ನು ವಾಪಸ್ ಕರೆಸಿಕೊಳ್ಳುವಂತೆ ಒತ್ತಾಯಿಸುವ ನಿರ್ಣಯವನ್ನು ಕೈಬಿಟ್ಟಿತು.

ಈ ಕುರಿತು ಸಂಯುಕ್ತ ರಂಗ, ಕಾಂಗ್ರೆಸ್, ಸಿಪಿಎಂ ಹಾಗೂ ಐಯುಎಂಎಲ್ ಸದಸ್ಯರ ಆಕ್ಷೇಪಗಳನ್ನು ಸ್ಪೀಕರ್ ಪಿ.ಎ.ಸಂಗ್ಮಾ ತಳ್ಳಿ ಹಾಕಿದರು. ‘ಬಿಜೆಪಿ– ಬಿಎಸ್‌ಪಿ ಸರ್ಕಾರಕ್ಕೆ ಪ್ರಮಾಣ ವಚನ ಬೋಧಿಸಲು ರಾಜ್ಯಪಾಲರು ಅಗತ್ಯವಾದ್ದರಿಂದ ಅವರನ್ನು ವಜಾಕ್ಕೆ ಒತ್ತಾಯಿಸುವ ನಿರ್ಣಯವನ್ನು ಬಿಜೆಪಿ ಕೈ ಬಿಟ್ಟಿದೆ’ ಎಂದು ಚಿದಂಬರಂ ವ್ಯಂಗ್ಯವಾಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 21-3-1972

• ಮೂವರು ಸಚಿವರಿರುವ ಅರಸು ಸಂಪುಟದಿಂದ ಪ್ರಮಾಣ ಸ್ವೀಕಾರ

ಬೆಂಗಳೂರು, ಮಾರ್ಚ್ 20– ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರ ಮೂವರು ಸದಸ್ಯರ ಸಚಿವ ಸಂಪುಟ ಇಂದು ಮಧ್ಯಾಹ್ನ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸುವ ಮೂಲಕ 359 ದಿನಗಳ ನಂತರ ಕರ್ನಾಟಕದಲ್ಲಿ ಮತ್ತೆ ಜನತಾ ಸರ್ಕಾರ ಅಸ್ತಿತ್ವಕ್ಕೆ ಬಂದಿತು.

ರಾಷ್ಟ್ರಪತಿಗಳು ತಮ್ಮ ಆಡಳಿತವನ್ನು ರದ್ದುಪಡಿಸಿ ಆಜ್ಞೆ ಹೊರಡಿಸಿದರು. ಸಂವಿಧಾನರೀತ್ಯ ಮತ್ತೊಂದು ಪ್ರಕಟಣೆಯ ಮೂಲಕ ನೂತನ ವಿಧಾನಸಭೆ ಅಸ್ತಿತ್ವಕ್ಕೆ ಬಂದಿತು. ಜೊತೆಗೆ ಮಂತ್ರಿಮಂಡಲದ ಪ್ರಮಾಣವಚನವೂ ನಡೆದು ಸರ್ಕಾರವೂ ಸ್ಥಾಪಿತವಾಯಿತು.

ಕಾನೂನಿನ ದೃಷ್ಟಿಯಲ್ಲಿ ಈ ಮೂರೂ ಏಕಕಾಲದಲ್ಲಿ ಒಂದಾದ ಮೇಲೆ ಇನ್ನೊಂದು ನಡೆದ ಘಟನೆಗಳು.

ರಾಜಭವನದ ಹುಲ್ಲಿನ ಮೈದಾನದಲ್ಲಿ ಹಾಕಲಾಗಿದ್ದ ಭಾರಿ ಶಾಮಿಯಾನದಲ್ಲಿ ರಾಜ್ಯಪಾಲ ಶ್ರೀ ಸುಖಾಡಿಯಾ ಅವರು ಮುಖ್ಯಮಂತ್ರಿ ಹಾಗೂ ಇತರ ಇಬ್ಬರು ಸಚಿವರಿಗೆ ಪ್ರತಿಜ್ಞೆ ಮಾಡಿಸಿದರು.

ಕನ್ನಡದಲ್ಲಿ ಪ್ರತಿಜ್ಞಾವಿಧಿಯನ್ನು ಹಿಂದಿಯಲ್ಲಿ ಬರೆದುಕೊಂಡು ರಾಜ್ಯಪಾಲರು ಸ್ಪಷ್ಟವಾಗಿ ಓದಿದರು. ಸ್ಪಷ್ಟ ಹಾಗೂ ಸರಿಯಾದ ಉಚ್ಚಾರಣೆಯಿಂದ ಕನ್ನಡದಲ್ಲಿ ಪ್ರತಿಜ್ಞೆ ಮಾಡಿಸಿದ ರಾಜ್ಯಪಾಲರನ್ನು ಅನೇಕರು ಅಭಿನಂದಿಸಿದರು.

ಈ ನಿಲ್ದಾಣದ ನಿರ್ವಹಣೆಗೆ ಸಂಬಂಧಿಸಿ ರಷ್ಯಾ ಸಿಡಿಸಿರುವ ಮಾತಿನ ಬಾಂಬ್ ಕಳವಳಕಾರಿಯೇ ಹೌದು

ಆತಂಕ ತಂದ ಅಂತರಿಕ್ಷ ನಿಲ್ದಾಣ

ವಿಶ್ಲೇಷಣೆ

ಟಿ.ಆರ್. ಅನಂತರಾಮು

ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷ ಈಗ ಅಂತರಿಕ್ಷಕ್ಕೂ ಬಿಸಿ ಮುಟ್ಟಿಸಿದೆ. ನಮ್ಮ ತಲೆಯ ಮೇಲೆ ನೇರವಾಗಿ 400 ಕಿಲೊ ಮೀಟರ್ ಎತ್ತರದಲ್ಲಿ ದಿನಕ್ಕೆ 15 ಬಾರಿ ಸುತ್ತುವ ಅಂತರರಾಷ್ಟ್ರೀಯ ಅಂತರಿಕ್ಷ ನಿಲ್ದಾಣ ಮಾನವಸಹಿತ ಭೂಮಿಯನ್ನು ಪರಿಭ್ರಮಿಸುತ್ತಿರುವ ಬಹುದೊಡ್ಡ ಏಕೈಕ ಕೃತಕ ಉಪಗ್ರಹ. ಸದ್ಯ ಏಳು ಮಂದಿ ಸಂಶೋಧಕರು ಅಲ್ಲಿ ಕಾರ್ಯನಿರತರಾಗಿದ್ದಾರೆ. ಅದರ ಕಮಾಂಡರ್ ರಷ್ಯಾ ಸಂಜಾತ.

1998ರಲ್ಲಿ ಈ ನಿಲ್ದಾಣವನ್ನು ಭೂಸಮೀಪ ಕಕ್ಷೆಗೆ ಸೇರಿಸಿದಾಗ, ಅಂತರರಾಷ್ಟ್ರೀಯ ಸಹಕಾರಕ್ಕೆ ಅದು ಮುನ್ನುಡಿ ಬರೆದಂತಿತ್ತು. ಅಮೆರಿಕ, ರಷ್ಯಾ, ಜಪಾನ್, ಐರೋಪ್ಯ ಒಕ್ಕೂಟ ಮತ್ತು ಕೆನಡಾ ಇವಿಷ್ಟೂ ಅಂತರಿಕ್ಷ ನಿಲ್ದಾಣದ ಪ್ರಾಮುಖ್ಯ ಅರಿತು ಅದರ ನಿರ್ಮಾಣ, ನಿರ್ವಹಣೆ ಮತ್ತು ಮಾಲೀಕತ್ವದಲ್ಲಿ ಭಾಗಿದಾರ ಆದವು. ಅಲ್ಲಿನ ಸೂಕ್ಷ್ಮ ಗುರುತ್ವ ವಾತಾವರಣದಲ್ಲಿ ಅನೇಕ ಸಂಶೋಧನೆಗಳನ್ನು ಮಾಡಲು ಅವಕಾಶವಿದೆ. ಖಗೋಳವಿಜ್ಞಾನ, ಹವಾಮಾನ, ಭೌತವಿಜ್ಞಾನ, ಜೀವವಿಜ್ಞಾನ, ವಿಶೇಷವಾಗಿ ಸೂಕ್ಷ್ಮ ಗುರುತ್ವ ಗಗನಯಾನಿಗಳ ಆರೋಗ್ಯದ ಮೇಲೆ ಬೀರುವ ಪರಿಣಾಮ ಅರಿಯಲು ಇದು ಸರಿಯಾದ ವೇದಿಕೆ. ಈ ಅರ್ಥದಲ್ಲಿ ಅದು ‘ಹಾರಾಡುವ ಲ್ಯಾಬ್’ ಎಂದೇ ಪ್ರಸಿದ್ಧವಾಗಿದೆ. ಇತ್ತೀಚೆಗೆ ಕಾರ್ಬನ್ ಡೈ ಆಕ್ಸೈಡ್ ಮಾಲಿನ್ಯವನ್ನು ಅಳೆಯಲು ಉಪಕರಣವನ್ನೂ ಇಡಲಾಗಿದೆ. ಯಾವ ದೇಶವೂ ಸುಳ್ಳು ಹೇಳುವಂತಿಲ್ಲ. ಅಂಕಿಸಂಖ್ಯೆ ಸಮೇತ ಮುಂದಿಡಬಹುದು. ಇದರ ಜೊತೆಗೆ ಚಂದ್ರ, ಮಂಗಳ ಗ್ರಹದ ಶೋಧಕ್ಕೆ ಒಯ್ಯಬಹುದಾದ ಉಪಕರಣಗಳ ಪರೀಕ್ಷೆಗೂ ಇದು ಒದಗಿಬಂದಿದೆ.

ಅಂತರರಾಷ್ಟ್ರೀಯ ಅಂತರಿಕ್ಷ ನಿಲ್ದಾಣದ ಉಪಯೋಗ ಆ ಭಾಗಿದಾರ ದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಹತ್ತೊಂಬತ್ತು ದೇಶಗಳ ಇನ್ನೂರೈವತ್ತಕ್ಕೂ ಮಿಕ್ಕಿ ಸಂಶೋಧಕರು ಅಲ್ಲಿಗೆ ಹೋಗಿದ್ದಾರೆ, ಮರಳಿದ್ದಾರೆ. 66 ಟ್ರಿಪ್‌ಗಳು ಆಗಿವೆ. ಪ್ರತೀ ವ್ಯಕ್ತಿಗೆ ದಿನಕ್ಕೆ 75 ಲಕ್ಷ ಡಾಲರ್ ಖರ್ಚು ಬರುತ್ತಿದೆ. ಅದು 24 ಗಂಟೆಯೂ ಸಂಶೋಧನೆಗೆ ತೆರೆದಿದೆ. ಹೆಸರೇನೋ ನಿಲ್ದಾಣ, ಆದರೆ ಅದು ಎಲ್ಲೂ ನಿಲ್ಲುವಂತಿಲ್ಲ. ಸೆಕೆಂಡಿಗೆ 7.6 ಕಿಲೊಮೀಟರ್ ವೇಗದಲ್ಲಿ ಭೂಮಿಯನ್ನು ಪರಿಭ್ರಮಿಸುತ್ತಲೇ ಇರಬೇಕು. ಭಾರಿ ವಜನ್ ಇದೆ- 500 ಟನ್ನು ತೂಕ. ಒಂದು ಫುಟ್‌ಬಾಲ್ ಮೈದಾನಕ್ಕೆ ಹೋಲಿಸಬಹುದಾದಷ್ಟು ವಿಶಾಲ.

ಈಗ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಈ ಅಂತರಿಕ್ಷ ನಿಲ್ದಾಣದ ಮೇಲೂ ಕರಾಳ ಛಾಯೆಯನ್ನು ಒತ್ತುತ್ತಿದೆ. ಸಹಕಾರ ತತ್ವ ಎನ್ನುವುದನ್ನೇ ಪುನರ್‌ವಿಮರ್ಶೆ ಮಾಡುವಂತೆ ಮಾಡಿದೆ. ರಷ್ಯಾದ ಅಂತರಿಕ್ಷ ವಿಜ್ಞಾನ ಕೇಂದ್ರದ ಡೈರೆಕ್ಟರ್ ಜನರಲ್ ಇತ್ತೀಚೆಗೆ ಒಂದು ಮಾತಿನ ಬಾಂಬ್ ಸಿಡಿಸಿದ್ದಾರೆ. ‘ಇಂದಿನ ಯುದ್ಧ ಪರಿಸ್ಥಿತಿಯಲ್ಲಿ ಅಮೆರಿಕವು ರಷ್ಯಾದ ಮೇಲೆ ನಿರ್ಬಂಧಗಳನ್ನು ಹೇರುತ್ತಾ ಹೋದರೆ, ನಾಳಿನ ದಿನಗಳಲ್ಲಿ ಈ ಅಂತರಿಕ್ಷ ನಿಲ್ದಾಣದ ನಿರ್ವಹಣೆಯನ್ನು ರಷ್ಯಾ ಕೈಬಿಟ್ಟರೆ ಆಗಬಹುದಾದ ದುರಂತವನ್ನು ಊಹಿಸಿದ್ದೀರಾ? ನಿಯಂತ್ರಣ ತಪ್ಪಿ ಈ ನಿಲ್ದಾಣವು ಅಮೆರಿಕ ಅಥವಾ ಯುರೋಪಿನ ಯಾವ ಭಾಗದ ಮೇಲಾದರೂ ಬೀಳಬಹುದು. ಭಾರತ ಮತ್ತು ಚೀನಾ ಈ ಅಪಾಯದಿಂದ ಮುಕ್ತವಾಗಿವೆ ಎಂದು ನಾವು ಹೇಳಲಾರೆವು’ ಎಂದಿದ್ದಾರೆ. ಇದೊಂದು ಕಳವಳಕಾರಿ ಸುದ್ದಿಯೇ ಹೌದು. 500 ಟನ್ನಿನ ಉಪಗ್ರಹ ಬೀಳುವುದೆಂದರೆ ಎಲ್ಲಿ ಎಂಬುದು ಊಹೆಗೂ ನಿಲುಕದು. ಏಕೆಂದರೆ ನಿಯಂತ್ರಣ ಅಸಾಧ್ಯ.

ಸುತ್ತುತ್ತಿರುವ ಈ ಕೃತಕ ಉಪಗ್ರಹವು ಭೂಮಿಯ ಮೇಲೆ ಏಕೆ ಬೀಳಬೇಕು? ನಿಯಂತ್ರಣ ತಪ್ಪಿದರೆ ಭೂಮಿ ಸೆಳೆಯುತ್ತದೆ ಅಷ್ಟೇ. ಆದರೆ ಹಾಗೆ ನಿಯಂತ್ರಣ ತಪ್ಪಬಾರದು ಎಂದೇ ರಷ್ಯಾ ದೇಶವು ನಿಲ್ದಾಣವನ್ನು ಸುಸ್ಥಿತಿಯಲ್ಲಿ ಅದೇ ಸುರಕ್ಷಿತ ಕಕ್ಷೆಗೆ ಮತ್ತೆ ಮತ್ತೆ ನೂಕುತ್ತದೆ. ವಾಯುಗೋಳದಲ್ಲಾಗುವ ಸೆಳೆತದಿಂದ ತಿಂಗಳಿಗೆ ಸುಮಾರು ಎರಡು ಕಿಲೊಮೀಟರ್ ಕೆಳಗೆ ಆ ನಿಲ್ದಾಣ ಇಳಿಯಬಹುದು. ಮತ್ತೆ ಬೂಸ್ಟರ್ ಬಳಸಿ ಮೇಲೆತ್ತಬೇಕು. ಈ ತಂತ್ರಜ್ಞಾನವನ್ನು ಸಾಧಿಸಿರುವುದು ರಷ್ಯಾ. ಅದನ್ನು ಹೀಗೆ ನಿರ್ವಹಿಸುತ್ತಿದೆ ಕೂಡ. ಇಲ್ಲೇ ಅಂತರಿಕ್ಷ ನಿಲ್ದಾಣದ ನಿರ್ವಹಣೆಯಲ್ಲಿ ಈ ಭಾಗಿದಾರ ರಾಷ್ಟ್ರಗಳ ಅವಲಂಬನೆ ಇರುವುದು. ಅಂತರಿಕ್ಷ ನಿಲ್ದಾಣದ ರಷ್ಯಾದ ಮಾಡ್ಯೂಲ್‌ನಲ್ಲಿ (ಕೆಲಸ ಮಾಡುವ ಕ್ಯಾಬಿನ್) ವಾಯುಗೋಳ ನಿಯಂತ್ರಣ ವ್ಯವಸ್ಥೆ ಇದೆ, ನೀರಿನ ವ್ಯವಸ್ಥೆ ಇದೆ, ಆಹಾರ ಪೂರೈಕೆಯಾಗುವುದು ಇಲ್ಲಿಂದ. ಹಾಗೆಯೇ ಉಪಕರಣಗಳ ನಿರ್ವಹಣೆಯ ವ್ಯವಸ್ಥೆ ಕೂಡ ರಷ್ಯಾದ ಹೊಣೆ. ಗಗನಯಾನಿಗಳಿಗೆ ಆಕ್ಸಿಜನ್ ಪೂರೈಕೆಯಾಗುವುದು ಕೂಡ ರಷ್ಯಾ ಸಿಬ್ಬಂದಿಯ ಸುಪರ್ದಿಯಲ್ಲಿಯೇ.

ಇವೆಲ್ಲವನ್ನೂ ಹೇಗೋ ನಿಭಾಯಿಸಬಹುದು. ಆದರೆ ಬೂಸ್ಟರ್ ಬಳಸಿ ಮತ್ತೆ ನಿಲ್ದಾಣವನ್ನು ಸರಿಯಾದ ಕಕ್ಷೆಗೆ ಸೇರಿಸುವುದು ಎಲ್ಲಕ್ಕಿಂತಲೂ ಮಹತ್ತರ ಜವಾಬ್ದಾರಿ. ಇಡೀ ಯೋಜನೆಯ ಅಳಿವು ಉಳಿವು ಇದನ್ನು ಅವಲಂಬಿಸಿದೆ. ಕಳೆದ ವರ್ಷವೇ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ‘ಈ ಅಂತರಿಕ್ಷ ನಿಲ್ದಾಣದ ನಿರ್ವಹಣೆಯ ಬಗ್ಗೆ ನಮಗೆ ಆಸಕ್ತಿ ಇಲ್ಲ’ ಎಂದು ಸಾರಿದ್ದರು. ಅಬ್ಬಬ್ಬಾ ಎಂದರೆ ಇನ್ನು ಮೂರು ವರ್ಷ ಮಾತ್ರ ಎಂದು ಗಡುವನ್ನು ನೀಡಿದ್ದರು. ರಷ್ಯಾದ ಗಗನಯಾನಿಗಳು ಈ ನಿಲ್ದಾಣದ ಸ್ಥಿತಿಗತಿ ಕುರಿತು ಜಾಗತಿಕ ಸುದ್ದಿಯನ್ನೂ ಬಿತ್ತರಿಸಿದ್ದರು. ಅದೆಂದರೆ, ರಷ್ಯಾದ ಕ್ಯಾಬಿನ್ ಲೀಕಾಗುತ್ತಿದೆ, ಮುದಿಯಾಗಿದೆ, ದುರಸ್ತಿಗೆ ಮೀರಿದ್ದು, ಒಂದು ವೇಳೆ ಇದೇ ಸ್ಥಿತಿ ಮುಂದುವರಿದರೆ ಅಂತರಿಕ್ಷ ನಿಲ್ದಾಣ ಅಪಾಯಕ್ಕೀಡಾಗುತ್ತದೆ. ಈಗ ಪುಟಿನ್ ಅವರಿಗೆ ಇದಿಷ್ಟೇ ಸಾಕಾಗಿದೆ- ಅಲ್ಲಿನ ವಿಜ್ಞಾನಿಗಳ ಮೂಲಕ ಎಚ್ಚರಿಕೆಯನ್ನೂ ಕೊಡಿಸುತ್ತಿದ್ದಾರೆ. ಅಂತರಿಕ್ಷ ನಿಲ್ದಾಣ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದರೆ ಅದಕ್ಕೆ ರಷ್ಯಾವನ್ನು ದೂಷಿಸುವಂತಿಲ್ಲ ಎಂದು.

ರಷ್ಯಾದ ಈ ಎಚ್ಚರಿಕೆ ಇಂದಿನ ಕಾವೇರಿದ ವಾತಾವರಣದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಏಕೆಂದರೆ ಇನ್ನು ಮುಂದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಂಡರೆ ಯೋಜನೆಗಳು ಮುಂದುವರಿಯುವುವೇ? ಯಾವ ದೇಶ ಯಾವ ಗಳಿಗೆಯಲ್ಲಿ ಕೈಕೊಡುತ್ತದೋ? ಯಾವುದೇ ದೇಶವನ್ನು ನೆಚ್ಚಬಹುದೇ? ಇಂಥ ಪ್ರಶ್ನೆಗಳೇಳುವುದು ಅಸಂಭವವಲ್ಲ.

ಈ ಮಧ್ಯೆ ಇನ್ನೊಂದು ಅನಿರೀಕ್ಷಿತ ಬೆಳವಣಿಗೆಗೂ ಅಂತರಿಕ್ಷ ನಿಲ್ದಾಣ ಸಾಕ್ಷಿಯಾಗಿದೆ. 400 ಕಿಲೊಮೀಟರ್ ಎತ್ತರ ಎಂದರೆ, ಅದು ಭೂಸಮೀಪದ ಕಕ್ಷೆ. ದಿನಕ್ಕೆ 15 ಬಾರಿ ಭೂಪರಿಭ್ರಮಣೆ ಮಾಡುವ ಈ ಅಂತರಿಕ್ಷ ನಿಲ್ದಾಣ ತೆಗೆಯುವ ಚಿತ್ರಗಳು ಅತ್ಯಂತ ಸ್ಫುಟವಾಗಿರುತ್ತವೆ. ಈಗ ಅಮೆರಿಕ ಆ ಚಿತ್ರಗಳನ್ನು ಉಕ್ರೇನಿಗೆ ರವಾನಿಸಿ, ರಷ್ಯಾದ ಮಿಲಿಟರಿ ಪಡೆಗಳು ಎಲ್ಲಿವೆ, ಎತ್ತ ಸಾಗುತ್ತಿವೆ ಎಂಬ ನಿಖರ ಮಾಹಿತಿಯನ್ನು ಕೊಡುತ್ತಿದೆ. ಉಕ್ರೇನ್, ರಷ್ಯಾಕ್ಕೆ ತಿರುಗೇಟು ಕೊಡುತ್ತಿರುವ ಹಿನ್ನೆಲೆಯೂ ಇದೇ ಎಂದು ಯುದ್ಧ ಪರಿಣತರು ಹೇಳುತ್ತಿದ್ದಾರೆ.

ಅಮೆರಿಕದ ದೈತ್ಯ ಉದ್ಯಮಿ, ಆಕಾಶವನ್ನೇ ಆಳಲು ಹೊರಟಿರುವ ಎಲಾನ್ ಮಸ್ಕ್ ಇನ್ನೊಂದೆಡೆ ಅಂತರಿಕ್ಷ ನಿಲ್ದಾಣದ ಭವಿಷ್ಯ ಕುರಿತು ಭರವಸೆಯ ಮಾತುಗಳನ್ನಾಡುತ್ತಿದ್ದಾರೆ. ‘ಸ್ಪೇಸ್ ಎಕ್ಸ್ ಡ್ರಾಗನ್’ ಎಂಬ ನೌಕೆ ಸಹಾಯಕ್ಕೆ ಬರುತ್ತದೆ. ಅಂತರಿಕ್ಷ ನಿಲ್ದಾಣ ಕಕ್ಷೆಯಿಂದ ಜಾರುವುದಾದರೆ, ಅದನ್ನು ಎತ್ತಿ ಮತ್ತೆ ಕಕ್ಷೆಗೆ ತಳ್ಳುವ ಜವಾಬ್ದಾರಿಯನ್ನು ಅಮೆರಿಕ ಹೊರಬಹುದು. ಅದೊಂದೇ ಕಾರಣಕ್ಕೆ ರಷ್ಯಾಕ್ಕೆ ದುಂಬಾಲು ಬೀಳುವುದು ಬೇಡ ಎಂಬ ಅಭಯ ನೀಡುತ್ತಿದ್ದಾರೆ.

ಸದ್ಯದಲ್ಲಂತೂ ರಷ್ಯಾದ ಮೂವರು ಗಗನಯಾನಿಗಳು ಅಂತರಿಕ್ಷ ನಿಲ್ದಾಣದಲ್ಲಿ ಕಾರ್ಯನಿರತರಾಗಿದ್ದಾರೆ. ರಷ್ಯಾ ಅವರ ಸುರಕ್ಷತೆಯನ್ನು ಪರಿಗಣಿಸಲೇಬೇಕಾಗುತ್ತದೆ. ತಲೆಯ ಮೇಲೆ ತೂಗುತ್ತಿರುವ ಕತ್ತಿ ಸ್ವಲ್ಪ ಆಚೆ ಸರಿದಂತಾಗಿದೆ. ಆದರೆ ಇದು ಬಿಟ್ಟಿರುವ ಕರಾಳ ಛಾಯೆ ಸುಲಭವಾಗಿ ಮರೆಯಾಗದು.



ಚುರುಮುರಿ

ಮುಗಿದ ಅಧ್ಯಾಯ

• ಸುಮಂಗಲಾ

‘ನಾ ಇಲ್ಲಿರೂ ಬದಲಿಗೆ, ವಿಜಯಪುರದ ಆ ಜಿಲ್ಲಾ ನಿರ್ಮಿತಿ ಕೇಂದ್ರದ ಮ್ಯಾನೇಜರ್ ಮನ್ಯಾಗರ ಹುಟ್ಟಬೇಕಿತ್ತು’ ಬೆಕ್ಕಣ್ಣ ನಿಟ್ಟುಸಿರುಬಿಟ್ಟಿತು.

ಯಾಕೆಂದು ತಿಳಿಯದೇ ನಾನು ಕಕಮಕ ಮುಖಮಾಡಿದೆ.

‘ನೋಡು... ಎಂಥಾ ಚಂದದ ಎಷ್ಟ್ ದೊಡ್ಡ ಮನಿ... ವಿದೇಶದಿಂದ ಸ್ಟೀಮ್ ಬಾತ್‌ಟಬ್ ತರಿಸಿ ಹಾಕ್ಯಾರಂತ... ಅಲ್ಲಿದ್ದಿದ್ದರೆ ನಾನೂ ಅಷ್ಟು ಚಂದದ ಟಬ್ಬಿನಾಗ ಸ್ಟೀಮ್ ಬಾತ್ ಮಾಡತಿದ್ದೆ. ಇಷ್ಟೆಲ್ಲ ದೊಡ್ ಮನಿ ಕಟ್ಟಬೇಕಂದ್ರ ಹಗಲೂ ರಾತ್ರಿ ಎಷ್ಟರ ಕಷ್ಟಪಟ್ಟು ದುಡಿದಿರಬಕು, ಹೌದಿಲ್ಲೋ’ ಎಂದಿತು.

‘ಹ್ಞೂಂ... ರಗಡ್ ಕಷ್ಟಪಟ್ಟಿರತಾರ. ಎಲ್ಲೆಲ್ಲಿಂದ ಹೆಂಗ ರೊಕ್ಕ ಗುಳುಂ ಮಾಡಬಕು, ಆಮೇಲದನ್ನು ಹೆಂಗ ದಕ್ಕಿಸಿಕೊಳ್ಳಬಕು ಅಂತೆಲ್ಲ ತಲಿ ಓಡಿಸಿ, ಭಾನಗಡಿ ಮಾಡೂದು ಸರಳ ಅಂತ ಮಾಡಿಯೇನ್’ ನಾನೂ ಮರುಕದಿಂದ ಹೇಳಿದೆ.

ಎಸಿಬಿ ಇನ್ನೂ ಎಲ್ಲೆಲ್ಲಿ ದಾಳಿ ನಡೆಸಿ, ಯಾವ್ಯಾವ ಅಧಿಕಾರಿಗಳ ಅಕ್ರಮ ಆಸ್ತಿ ಜಪ್ತಿ ಮಾಡಿತು ಎಂಬುದನ್ನೆಲ್ಲ ಓದಿದ ಬೆಕ್ಕಣ್ಣ, ‘ಈ ಗುಳುಂಕೋರ ಅಧಿಕಾರಿಗಳನ್ನ, ಅವರ ಅಕ್ರಮ ಆಸ್ತಿಯನ್ನ ಏನು ಮಾಡತಾರ?’ ಎಂದು ಅಮಾಯಕನಂತೆ ಕೇಳಿತು.

‘ಮಾಡೂದೇನಲೇ... ಬ್ಯಾರೆ ಕಡಿಗೆ ವರ್ಗ ಮಾಡತಾರ. ಅವರೂ ರೊಕ್ಕ ಗುಳುಂ ಮಾಡಾಕೆ ಹೊಸ ದಾರಿ ಕಂಡುಹಿಡಿತಾರ. ಅಲ್ಲಿಗೆ ಚಾಪ್ಟರ್ ಕ್ಲೋಸ್’.

‘ಸರಿ ಬಿಡು... ಈ ಸುದ್ದಿ ಮುಗಿದ ಅಧ್ಯಾಯ’ ಎನ್ನುತ್ತ ಪೇಪರು ಬಿಸಾಕಿ ಗೇಟಿನ ಬಳಿ ಓಡಿತು. ಪಕ್ಕದ ಮನೆಯ ಚಿಂಟೂ ಸಿಂಗ್ ತನ್ನ ಪಗಡಿ ಸರಿಮಾಡಿಕೊಳ್ಳುತ್ತ ಸ್ಕೂಲಿನ ವ್ಯಾನಿಗೆ ಕಾಯುತ್ತಿದ್ದನ್ನು ನೋಡಿತು.

‘ಏ... ತಲಿಮ್ಯಾಗೆ ಏನೂ ಹಾಕಬಾರದಂತ ಆರ್ಡರು ಆಗ್ಯದಂತೆ’ ಎಂದು ಉಪದೇಶ ಶುರುಮಾಡಿತು.

‘ಹೋಗಲೇ... ಅದ್ ಹೆಣ್‌ಮಕ್ಕಳು ಹಾಕೂ ಹಿಜಾಬಿಗೆ... ನಮಗಲ್ಲ...’ ಎಂದು ಚಿಂಟೂ ಜೋರಾಗಿ ಬೆದರಿಸಿದ್ದೇ ಬೆಕ್ಕಣ್ಣ ಬಾಲ ಮುದುರಿಕೊಂಡು ‘ಈ ಸುದ್ದಿನೂ ಮುಗಿದ ಅಧ್ಯಾಯ’ ಎಂದು ಗೊಣಗುತ್ತ ಒಳಗೋಡಿ ಬಂದಿತು.

ಸಂಗತ

ದಲಿತ ರಾಜಕಾರಣ: ಆಳದಲ್ಲಿ ಪಲ್ಲಟ

ಉತ್ತರಪ್ರದೇಶದಲ್ಲಿ ಮಾಯಾವತಿ ಒಮ್ಮೆ ಬ್ರಾಹ್ಮಣರ ಮನ ಗೆದ್ದು ಅಧಿಕಾರ ಹಿಡಿದರೆ, ಬಿಜೆಪಿಯು ದಲಿತರ ಮನ ಗೆದ್ದು ನಾಲ್ಕು ಸಲ ಮೇಲುಗೈ ಸಾಧಿಸಿದೆ

• ವಾದಿರಾಜ್

ಶೇಕಡ 21.1ರಷ್ಟು ಪರಿಶಿಷ್ಟ ಜಾತಿಗಳ ಮತಸಾಂದ್ರತೆ ಇರುವ ಉತ್ತರಪ್ರದೇಶವು ದಲಿತ ರಾಜಕಾರಣದ ತವರುನೆಲ. ಅಲ್ಲಿನ ಎಸ್.ಸಿ. ಪಟ್ಟಿಯಲ್ಲಿ 66 ಜಾತಿಗಳು ಬರುತ್ತವೆ. ಪರಿಶಿಷ್ಟರೊಳಗೆ ಮಾಯಾವತಿ ಅವರು ಪ್ರತಿನಿಧಿಸುವ ಜಾಟವರದ್ದೇ (ಶೇ 53.3) ಜನಸಂಖ್ಯೆಯಲ್ಲಿ ಸಿಂಹಪಾಲು. ವಾಲ್ಮೀಕಿ, ಕಟಿಕ್, ಕೋರಿ, ಮುಷಹರ್, ಪಾಸಿ, ದೋಭಿ ಇತ್ಯಾದಿ ಜಾತಿಗಳು ರಾಜಕೀಯವಾಗಿ ಅಷ್ಟು‌ಇಷ್ಟು ನೆಲೆ ಕಂಡಿವೆ.

2007ರಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ ಶೇ 30ರಷ್ಟು ಮತ ಗಳಿಸಿ 206 ಶಾಸಕರ ಬೆಂಬಲದೊಂದಿಗೆ ಅಧಿಕಾರದ ಗದ್ದುಗೆ ಹಿಡಿದಿತ್ತು. 15 ವರ್ಷಗಳ ತರುವಾಯ ಅದೇ ಬಿಎಸ್‌ಪಿಯ ಮತ ಗಳಿಕೆ ಪ್ರಮಾಣ ಶೇ 12ಕ್ಕೆ ಇಳಿದು, ಬರೀ ಒಬ್ಬ ಶಾಸಕ ಗೆಲುವು ಕಂಡಿರುವುದು ದೇಶದಾದ್ಯಂತ ಹರಡಿರುವ ಬಿಎಸ್‌ಪಿ ಬೆಂಬಲಿಗರಿಗೆ ಆಘಾತ ತಂದಿದೆ. 86 ಮೀಸಲು ಕ್ಷೇತ್ರಗಳಿರುವ ರಾಜ್ಯದಲ್ಲಿ ಬಿಎಸ್‌ಪಿ ಎಲ್ಲಿಯೂ ಗೆಲ್ಲಲಿಲ್ಲ ಮಾತ್ರವಲ್ಲ, ನಾಲ್ಕು ಕಡೆಗಳಲ್ಲಷ್ಟೇ ಎರಡನೇ ಸ್ಥಾನದಲ್ಲಿರುವುದು ಸೋಲಿನ ತೀವ್ರತೆಯನ್ನು ಬಿಂಬಿಸುತ್ತದೆ.

‘ಎಲ್ಲೆಡೆ ಮುಸ್ಲಿಂ ಮತಗಳು ಸಾರಾಸಗಟು ಸಮಾಜವಾದಿ ಪಕ್ಷದತ್ತ ಹೊರಳಿದ್ದು ದಲಿತ ಮತದಾರರನ್ನು ವಿಚಲಿತರನ್ನಾಗಿಸಿತು. ಸಮಾಜವಾದಿ ಪಕ್ಷದ ಆಳ್ವಿಕೆಯೊಂದಿಗೆ ಬರಬಹುದಾದ ಜಂಗಲ್ ರಾಜ್‌ಗೆ ಹೆದರಿದ ದಲಿತರು, ಒಬಿಸಿಯವರು ಬಿಜೆಪಿಯನ್ನು ಬೆಂಬಲಿಸುವ ನಿರ್ಧಾರಕ್ಕೆ ಬಂದರು’ ಎಂದು ಫಲಿತಾಂಶವನ್ನು ಮಾಯಾವತಿ ವಿಶ್ಲೇಷಿಸಿದ್ದಾರೆ.

2012ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಅಧಿಕಾರ ಕಳೆದುಕೊಂಡರೂ ದಲಿತ ಮತಗಳ ಮೇಲಿನ ಹಿಡಿತ ಬಿಗಿಯಾಗಿಯೇ ಇತ್ತು. ಸಡಿಲಗೊಳ್ಳಲು ಆರಂಭವಾದದ್ದು 2014ರ ಲೋಕಸಭಾ ಚುನಾವಣೆಯಲ್ಲಿ. ಜಾಟವೇತರ ದಲಿತ ಜಾತಿಗಳ ಮೇಲೆ ಹಿಡಿತ ಸಾಧಿಸಿದ ಬಿಜೆಪಿ, 80 ಲೋಕಸಭಾ ಕ್ಷೇತ್ರಗಳಲ್ಲಿ 73ರಲ್ಲಿ ಜಯ ಸಾಧಿಸಿತು. 2017ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಹಿಡಿತ ಮತ್ತಷ್ಟು ಬಿಗಿಯಾಯಿತು. 86 ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ 76 ಸ್ಥಾನ ಗಳಿಸಿದರೆ, ಬಿಎಸ್‌ಪಿ ಬಲ 2ಕ್ಕೆ ಇಳಿಯಿತು. 2019ರ ಲೋಕಸಭಾ ಚುನಾವಣೆಯಲ್ಲಿ ಪರಸ್ಪರ ತೀವ್ರವಾಗಿ ವಿರೋಧಿಸುವ ಎಸ್‌ಪಿ- ಬಿಎಸ್‌ಪಿ ಒಂದಾಗಿ ಆರ್‌ಎಲ್‌ಡಿಯನ್ನು ಸೇರಿಸಿಕೊಂಡು ಬಿಜೆಪಿಯನ್ನು ಎದುರಿಸಲು ನಿರ್ಧರಿಸಿದವು. ಬಿಜೆಪಿಯ ವೇಗ ಕೊಂಚ ತಗ್ಗಿತು. ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿಯ ಪ್ರಾಬಲ್ಯ 61ಕ್ಕೆ ಇಳಿದರೆ, ಬಿಎಸ್‌ಪಿ 26, ಎಸ್‌ಪಿ 7 ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸ್ಥಾಪಿಸಿದವು. ಈ ಸಲದ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಪಿ, ಬಿಎಸ್‌ಪಿ ಪ್ರತ್ಯೇಕವಾಗಿಯೇ ಸ್ಪರ್ಧಿಸಿದ್ದವು. ಬಿಜೆಪಿ ಮತ್ತೆ 65 ಮೀಸಲು ಕ್ಷೇತ್ರಗಳಲ್ಲಿ ಹಿಡಿತ ಸಾಧಿಸಿದರೆ, ಎಸ್‌ಪಿ ಮಿತ್ರಪಕ್ಷಗಳು 20, ಒಂದು ಸ್ಥಾನ ಪಕ್ಷೇತರರ ಪಾಲಾಗಿವೆ.

2014ರಿಂದ ಸತತ ನಾಲ್ಕು ಚುನಾವಣೆಗಳಲ್ಲಿ ಉತ್ತರಪ್ರದೇಶದ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿಯ ಹಿಡಿತ ಬಿಗಿಯಾಗಿಯೇ ಉಳಿದಿರುವುದು ಹೇಗೆ? 2007ರಲ್ಲಿ ಬಿಎಸ್‌ಪಿ ಗೆದ್ದಿದ್ದ ಅತ್ಯಧಿಕ 62 ಮೀಸಲು ಕ್ಷೇತ್ರಗಳ ದಾಖಲೆಯನ್ನು ಸತತ ನಾಲ್ಕು ಸಲವೂ ಬಿಜೆಪಿ ಸರಿಗಟ್ಟಿದೆ, ಹಿಂದಿಕ್ಕಿದೆ. ಈ ಸರಣಿ ಗೆಲುವು ಬಿಜೆಪಿಯಲ್ಲಿ ಹಲವು ಜಾತಿಗಳಿಂದ ಬಂದ ನೂರಾರು ಚುನಾಯಿತ ದಲಿತ ನಾಯಕರನ್ನು ರೂಪಿಸಿದೆ. ನೆಲಮಟ್ಟದ ಈ ನೇತೃತ್ವ ಗಟ್ಟಿಯಾಗುತ್ತಿರುವುದನ್ನು ಈ ಗೆಲುವು ಹೇಳುತ್ತದೆ. ಉದಾಹರಣೆಗೆ, ಆಗ್ರಾ ಗ್ರಾಮೀಣ ಮೀಸಲು ಕ್ಷೇತ್ರದಿಂದ ಗೆದ್ದುಬಂದಿರುವ ಬೇಬಿ ರಾಣಿ ಮೌರ್ಯ ಜಾಟವ ಸಮುದಾಯದಿಂದ ಬಂದ ನಾಯಕಿ. ಆಗ್ರಾ ಮಹಾನಗರ ಪಾಲಿಕೆಯ ಮೇಯರ್, ಆನಂತರ ಉತ್ತರಾಖಂಡದ ರಾಜ್ಯಪಾಲೆ ಆಗಿದ್ದವರು. ಈಗವರು ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷೆ. ಚುನಾವಣೆಯಲ್ಲಿ ನೂರಾರು ಸಭೆಗಳನ್ನು ನಡೆಸಿ ‘ಹೊಸ ಮಾಯಾವತಿ’ ಎಂದು ಕರೆಸಿಕೊಂಡವರು. ಈ ಸಲ ಆಗ್ರಾ ಜಿಲ್ಲೆಯ ಅಷ್ಟೂ ಕ್ಷೇತ್ರಗಳು ಬಿಜೆಪಿಯ ಪಾಲಾಗಿವೆ. ಜಾಟವ ಸಮುದಾಯದ ಗಣನೀಯ ಪ್ರಮಾಣದ ಮತಗಳು ಬಿಜೆಪಿಗೆ ಒಲಿದಿರುವುದು ಈ ಕಾರಣದಿಂದ.

ತಳ ಸಮುದಾಯಗಳ ಒಂದಿಷ್ಟಾದರೂ ನಿರೀಕ್ಷೆಗಳನ್ನು ಆಡಳಿತ ಪಕ್ಷ ಈಡೇರಿಸದೇ ಹೋದರೆ ಸತತ ನಾಲ್ಕು ಸಲ ಗೆಲ್ಲಲು ಸಾಧ್ಯವೇ? ಅಂಚಿನ ಮನೆಗಳವರೆಗೆ ಉಜ್ವಲಾ ಯೋಜನೆಯಲ್ಲಿ ಗ್ಯಾಸ್ ಸಂಪರ್ಕ ದಕ್ಕಿರುವುದು, ವ್ಯವಸ್ಥಿತ ರೇಷನ್ ಹಂಚಿಕೆ ಸಹಜ ಪರಿಣಾಮ ಬೀರಿವೆ. ಮಾಯಾವತಿಯವರೇ ಗುರುತಿಸಿರುವಂತೆ, ಹಿಂದಿದ್ದ ಜಂಗಲ್ ರಾಜ್‌ಗೆ ಈ ಸರ್ಕಾರ ಗತಿ ಕಾಣಿಸಿರುವುದು ತಳವರ್ಗಗಳಿಗೆ ಸುರಕ್ಷತೆಯ ಭಾವ ಮೂಡಿಸಿದೆ. ಉತ್ತರಪ್ರದೇಶದ ಸರ್ಕಾರ ಬಡ್ತಿ ಮೀಸಲಾತಿ ವಿಷಯದಲ್ಲಿ ಸ್ವ ಆಸಕ್ತಿಯಿಂದ ಕಾರ್ಯನಿರ್ವಹಿಸಿದ್ದನ್ನು ದಲಿತರು ಸಣ್ಣ ಉಪಕ್ರಮ ಎಂದು ಭಾವಿಸುವುದಿಲ್ಲ.

ಮಾಯಾವತಿ ಅವರು ದಲಿತರೊಂದಿಗೆ ಬ್ರಾಹ್ಮಣರ ಮನ ಗೆದ್ದು ಅಧಿಕಾರ ಹಿಡಿದಂತೆಯೇ ಬಿಜೆಪಿಯು ದಲಿತರೂ ಸೇರಿದಂತೆ ತಳವರ್ಗಗಳ ಮನ ಗೆದ್ದು ಅಧಿಕಾರದ ಗದ್ದುಗೆ ಏರಿದೆ. ವ್ಯತ್ಯಾಸ ಇಷ್ಟೆ. ಮಾಯಾವತಿ ಅವರಿಗದು ಒಮ್ಮೆಯಷ್ಟೇ ಸಾಧ್ಯವಾಯಿತು. ಬಿಜೆಪಿ ಸತತ ನಾಲ್ಕು ಸಲ ಗೆದ್ದು ತೋರಿಸಿದೆಯಾದರೆ, ದಲಿತ ರಾಜಕಾರಣದೊಳಗಿನ ಪಲ್ಲಟ ಆಳದಲ್ಲಿ ಆಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಲೇಖಕ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ

ವಾಚಕರ ವಾಣಿ

ತಪ್ಪುಗಳ ಸರಮಾಲೆ ತಂದ ಗೊಂದಲ

ಯಾವುದೇ ಮುಖ್ಯ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಒಂದೆರಡು ತಪ್ಪುಗಳು ನುಸುಳಬಹುದು. ಆದರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಯ ಕನ್ನಡ ವಿಷಯಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಪರೀಕ್ಷಾ ಪ್ರಶ್ನೆಪತ್ರಿಕೆಯಲ್ಲಿ ಹಲವಾರು ದೋಷಗಳು ಕಂಡುಬಂದಿವೆ. ಇಂತಹ ತಪ್ಪುಗಳ ಸರಮಾಲೆಯನ್ನು ಯಾರು ಮಾಡಿದರೋ ಅದನ್ನು ಪ್ರಾಧಿಕಾರ ಹೇಗೆ ಒಪ್ಪಿತೋ ಎಲ್ಲವೂ ಗೊಂದಲಮಯ. ಪ್ರಶ್ನೆಪತ್ರಿಕೆ ಸಿದ್ಧಪಡಿಸಿದವರ ಕನ್ನಡ ಜ್ಞಾನದ ಮನಃಸ್ಥಿತಿ ಹೇಗಿತ್ತೋ ಕಾಣಲಾಗದು. ಇಂತಹ ಎಡವಟ್ಟುಗಳಿಂದ, ಇತ್ತೀಚಿನ ದಿನಗಳಲ್ಲಿ ಕೆಇಎ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿದೆ.

ದೇವರಹಳ್ಳಿ ಲೋಕೇಶ್, ಪಾಂಡವಪುರ

ಮಾರ್ಗ ಇರುವೆಡೆ ರೋಪ್‌ವೇ ಏಕೆ?

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸಿದರೆ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ ಎಂಬುದು ರೋಪ್‌ವೇ ಪರ ಇರುವವರ ವಾದ. ರೋಪ್‌ವೇ ಎಂಬುದು ರಸ್ತೆ ಸಂಪರ್ಕ ಸಾಧ್ಯವಾಗದ ಬೆಟ್ಟ ಗುಡ್ಡಗಳಿಗೆ ಸಂಪರ್ಕ ಸಾಧಿಸಲು ಅನ್ವೇಷಣೆಗೊಂಡ ಮಾರ್ಗ. ಆದರೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಈಗಾಗಲೇ ಕಾಲುದಾರಿ ಮತ್ತು ವಾಹನದ ಮೂಲಕ ತಲುಪಲು ರಸ್ತೆಗಳು ಇರುವ ಕಾರಣ ಈ ರೋಪ್‌ವೇ ಸಂಪೂರ್ಣ ಮೂರ್ಖತನದ ಯೋಜನೆ ಎನಿಸುತ್ತದೆ.

ಕೆಲವೇ ಜನರ ಲಾಭಕ್ಕಾಗಿ ಪ್ರಕೃತಿಯನ್ನು ನಾಶ ಮಾಡಿದರೆ, ಕೇರಳ, ಕೊಡಗಿನಲ್ಲಿ ಆದಂತೆ ಗುಡ್ಡಕುಸಿತ ಸಂಭವಿಸಿದರೆ ಅದನ್ನು ಸರಿಪಡಿಸಲು ಸಾಧ್ಯವೇ? ಈಗಾಗಲೇ ಬೆಟ್ಟದಲ್ಲಿ ಕುಸಿತ ಉಂಟಾಗಿದೆ. ರೋಪ್‌ವೇ ಹೆಸರಿನಲ್ಲಿ ನಡೆಸುವ ಯಾವುದೇ ಕಾಮಗಾರಿಯು ಬೆಟ್ಟದ ಪ್ರಕೃತಿಗೆ ಉರುಳಾಗಿ ಪರಿಣಮಿಸುತ್ತದೆ. ಹಾಗಾಗಿ ಈ ಯೋಜನೆಯನ್ನು ನಿಲ್ಲಿಸಬೇಕು.

ಎಸ್.ರವಿ, ಮೈಸೂರು

ಭ್ರಷ್ಟಾಚಾರ ತಡೆ ಸಹಾಯವಾಣಿ ಇಲ್ಲೂ ಬರಲಿ

ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಸ್ಮರಣಾರ್ಥವಾಗಿ ಪಂಜಾಬಿನಲ್ಲಿ ಭ್ರಷ್ಟಾಚಾರ ತಡೆ ಸಹಾಯವಾಣಿ ಪ್ರಾರಂಭಿಸುವುದಾಗಿ ನೂತನ ಮುಖ್ಯಮಂತ್ರಿ ಭಗವಂತ ಮಾನ್ ಘೋಷಿಸಿದ್ದಾರೆ (ಪ್ರ.ವಾ., ಮಾರ್ಚ್ 18). ಇದೇ ಮಾದರಿಯ ವ್ಯವಸ್ಥೆಯು ತಮ್ಮ ರಾಜ್ಯಗಳಲ್ಲೂ ಬರಬೇಕು ಎಂಬುದು ಪ್ರತಿಯೊಂದು ರಾಜ್ಯದ ಜನರ ಆಶಯವಾಗಿದೆ. ಭ್ರಷ್ಟಾಚಾರ ತಾಂಡವವಾಡುತ್ತಿರುವ ಕರ್ನಾಟಕದಲ್ಲಿಯೂ ಇಂತಹ ವ್ಯವಸ್ಥೆ ಜಾರಿಯಾದರೆ ಲಂಚಗುಳಿತನಕ್ಕೆ ಕೊಂಚ ಮಟ್ಟಿಗಾದರೂ ತಡೆ ಬೀಳಬಹುದು. ಭ್ರಷ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಹೊರದಬ್ಬಿ ಭ್ರಷ್ಟಾಚಾರ ಮುಕ್ತ ರಾಜ್ಯವನ್ನು ನಿರ್ಮಿಸುವುದು ಸದ್ಯದ ತುರ್ತಾಗಿದೆ.

ಮಂಜು ಪಾಟೀಲ, ಬೆಳಗಾವಿ

ಓದೋಣ ಕವನ...

ಅಂತರರಾಷ್ಟ್ರೀಯ ಕವಿತೆ ದಿನ ಇಂದು (ಮಾರ್ಚ್ 21)
ರಷ್ಯಾ- ಉಕ್ರೇನ್ ಯುದ್ಧದ ಈ ಅಮಾನವೀಯ
ಸಂದರ್ಭದಲ್ಲಿ ವಿಶ್ವಶಾಂತಿ ಚಿಂತನೆ ಪ್ರೇರೇಪಿಸುವ
ಕವನಗಳ ಅಗತ್ಯ ಅರಿಯೋಣ,
ವಿಶ್ವವೈಶಾಲ್ಯ ಸಾರುವ ಕುವೆಂಪು, ಬೇಂದ್ರೆ,
ವೀಸಿ, ಕಣವಿ, ಪುತಿನ ಕವನಗಳ ಸ್ಮರಿಸೋಣ
ಕೊಡವಿ ಎಲ್ಲ ಸಂಕೋಲೆಗಳ ಆವರಣ
ಮರೆಯದೆಲೆ ಅನವರತ ವಿಶ್ವಕಲ್ಯಾಣ

ಡಾ. ಎಂ.ರವೀಂದ್ರ, ಬೆಂಗಳೂರು

ನಾಯಕರೇ ಹೀಗಾದರೆ ಸಾಮಾನ್ಯರ ಪಾಡೇನು?

ಸಚಿವರಾದ ಡಾ. ಸಿ.ಎನ್.ಅಶ್ವತ್ಥನಾರಾಯಣ ಮತ್ತು ಆರ್.ಅಶೋಕ ಅವರು ತಹಶೀಲ್ದಾರ್ ಒಬ್ಬರ ವರ್ಗಾವಣೆ ವಿಷಯವಾಗಿ ವಿಧಾನಸಭೆಯ ಮೊಗಸಾಲೆಯಲ್ಲಿಯೇ ಕಿತ್ತಾಡಿಕೊಂಡು ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು ದುರದೃಷ್ಟಕರ. ಸರ್ಕಾರದ ಭಾಗವಾಗಿರುವ ಸಚಿವರೇ ಈ ರೀತಿ ನಡೆದುಕೊಂಡರೆ ಹೇಗೆ?

ಅದರಿಂದ ಕಾರ್ಯಕರ್ತರು ಪ್ರೇರಣೆ ಪಡೆಯುವುದಿಲ್ಲವೇ? ಅದೂ ವಿಧಾನಸಭೆಯ ಮೊಗಸಾಲೆಯಲ್ಲಿ ಈ ರೀತಿ ವರ್ತಿಸಿರುವುದು ಅವರ ಸ್ಥಾನಕ್ಕೆ ಶೋಭಿಸುವುದಿಲ್ಲ.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಬಸ್ ದುರಂತ: ಸರ್ಕಾರ ಹೊಣೆ ಹೊರಲಿ

ಪಾವಗಡದ ಬಳಿ ಸಂಭವಿಸಿದ ಖಾಸಗಿ ಬಸ್ ದುರಂತ ವಿಷಾದಕರ. ಇಂತಹ ದುರ್ಘಟನೆಗಳು ಅಲ್ಲಲ್ಲಿ ಸಂಭವಿಸುತ್ತಲೇ ಇರುತ್ತವೆ. ಆದರೂ ಸರ್ಕಾರ ಮಾತ್ರ ತನಗೂ ಇದಕ್ಕೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತಿದೆ. ಕೆಲ ವರ್ಷಗಳ ಹಿಂದೆ ನಡೆದ ಮಂಡ್ಯದ ಕನಗನಮರಡಿ ಬಸ್ ದುರಂತವನ್ನು ಜನ ಇನ್ನೂ ಮರೆತಿಲ್ಲ. ಸರ್ಕಾರ ಹಾಗೂ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಅಮಾಯಕರು ಬಲಿಯಾಗುತ್ತಿದ್ದಾರೆ. ಹಣದ ಆಸೆಗೆ ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಯಾಣಿಕರನ್ನು ತುಂಬಿಸಿಕೊಳ್ಳುವುದು, ಗುಜರಿ ಸೇರಬೇಕಾದ ಬಸ್‌ಗಳನ್ನು ರಸ್ತೆಗಿಳಿಸುವುದರ ಜೊತೆಗೆ ಗ್ರಾಮೀಣ ಪ್ರದೇಶದ ಕೆಲವೆಡೆ ಸರ್ಕಾರಿ ಬಸ್ ವ್ಯವಸ್ಥೆ ಇಲ್ಲದಿರುವಂತಹ ಕಾರಣಗಳು ಅಪಘಾತಗಳಿಗೆ ಎಡೆ ಮಾಡುತ್ತಿವೆ.

ಕೆಲವು ಖಾಸಗಿ ಬಸ್‌ಗಳು ಅತಿ ವೇಗವಾಗಿ ಸಂಚರಿಸುತ್ತಿವೆ. ಇವೆಲ್ಲವೂ ಅಧಿಕಾರಿಗಳಿಗೆ ಗೊತ್ತಿದ್ದರೂ ಕಣ್ಣುಮುಚ್ಚಿ ಕೂತಿದ್ದಾರೆ. ಸರ್ಕಾರಿ ಬಸ್ ವ್ಯವಸ್ಥೆ ಇಲ್ಲದಿರುವೆಡೆ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವುದು ಅನಿವಾರ್ಯವಾಗಿದೆ. ಸಂಬಂಧಿಸಿದ ಅಧಿಕಾರಿಗಳು ಸರಿಯಾಗಿ ನಿಗಾ ವಹಿಸಿದರೆ ಇಂತಹ ಎಷ್ಟೋ ಅಪಘಾತಗಳನ್ನು ತಪ್ಪಿಸಬಹುದು. ಅವಶ್ಯಕತೆ ಇರುವೆಡೆ ಸರ್ಕಾರಿ ಬಸ್ಸುಗಳನ್ನು ಓಡಿಸಬೇಕಿದೆ ಹಾಗೂ ಪಾವಗಡ ಅಪಘಾತದ ಸಂಪೂರ್ಣ ಹೊಣೆಯನ್ನು ಸರ್ಕಾರವೇ ಹೊರಬೇಕಿದೆ.

ಶಿವಶಂಕರ ಎಸ್., ಮುತ್ತುರಾಯನಹಳ್ಳಿ, ಮಧುಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಪ್ಪುಗಳನ್ನು ಸರಿಪಡಿಸಲು ಇದು ಸಕಾಲ

ಶಕ್ತಿವಂತರು, ಬಲಾಢ್ಯರು, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಮುಂದುವರಿದವರು ಮೀಸಲಾತಿಯನ್ನು ಬಳಸಿಕೊಂಡು ರಾಜಕೀಯ ಪ್ರಾತಿನಿಧ್ಯ ಪಡೆದುಕೊಳ್ಳುತ್ತಿದ್ದಾರೆ. ಈಗ ಇರುವ ಸ್ಥಿತಿಯಲ್ಲಿ ಮೀಸಲಾತಿಯು 'ಆಕಾಶದಲ್ಲಿ ಕಾಣುವ ಒಂದು ಚುಕ್ಕಿ' ಎಂದಷ್ಟೆ ವ್ಯಾಖ್ಯಾನಿಸಬಹುದು

• ಜಿ. ಶ್ರೀನಿವಾಸನ್

ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಮತ್ತು ರಾಜಕೀಯ ನ್ಯಾಯ ಎಂಬ ಅಂಶಗಳು ನಮ್ಮ ಸಂವಿಧಾನದ ಪೀಠಿಕೆಯಲ್ಲೇ ಇವೆ. ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಆಧರಿಸಿ ಸಂವಿಧಾನದ 15(4), 15(5) ಮತ್ತು 16(4) ವಿಧಿಗಳ ಅಡಿಯಲ್ಲಿ ಮೀಸಲಾತಿ ಒದಗಿಸಲಾಗಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇದೆ. ಅದೂ ಸಂಪೂರ್ಣ ಪ್ರಮಾಣದಲ್ಲಿ ಇಲ್ಲ. ರಾಜಕೀಯ ಮೀಸಲಾತಿಗೆ ಬಂದಾಗ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮಾತ್ರ ಮೀಸಲಾತಿ ಇದೆ. ಸಂಸತ್ತು ಮತ್ತು ವಿಧಾನಮಂಡಲಗಳಲ್ಲಿ ಸಣ್ಣಪುಟ್ಟ ಜಾತಿಗಳು ಚಿತ್ರದಲ್ಲೇ ಇಲ್ಲ. 1951ರಿಂದಲೂ ರಾಜಕೀಯ ಮೀಸಲಾತಿ ಕುರಿತು ಮಾತನಾಡುತ್ತಲೇ ಬಂದಿದ್ದೇವೆ.

ಕೆಳ ಹಂತದ ಆಡಳಿತ ವ್ಯವಸ್ಥೆಯಲ್ಲೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇರಲಿಲ್ಲ. ಹಿಂದುಳಿದ ವರ್ಗಗಳ ಜನರಿಗೂ ಸ್ಥಳೀಯ ಆಡಳಿತದಲ್ಲಿ ಪ್ರಾತಿನಿಧ್ಯ ಕಲ್ಪಿಸುವ ಸದುದ್ದೇಶದಿಂದ ಸಂವಿಧಾನದ 243ನೇ ವಿಧಿಗೆ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿ ಜಾರಿಗೆ ಬಂದಿತು. ಈ ತಿದ್ದುಪಡಿಯನ್ನು ಜಾರಿಗೆ ತರುವ ನಿಷ್ಠೆಯನ್ನು ಯಾರೂ ಪ್ರದರ್ಶಿಸಲಿಲ್ಲ. ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡುವ ವಿಚಾರದಲ್ಲಿ ಕರ್ನಾಟಕ ಒಂದು ಹೆಜ್ಜೆ ಮುಂದೆಯೇ ಇತ್ತು. ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆ, ಅಬ್ದುಲ್ ನಜೀರ್ ಸಾಬ್ ಅವರು ಈ ನಿಷ್ಠೆಯನ್ನು ಪ್ರದರ್ಶಿಸಿದರು. ಅದಕ್ಕೆ ಪೂರಕವಾಗಿ ಕಾಯ್ದೆಗಳನ್ನು ತಂದು, ಮೂರು ಹಂತದ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸಿದರು. ಅಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಿದರು.

ಆಗ ಚುನಾವಣೆಗಾಗಿ ತುರ್ತಾಗಿ ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ನಾನು ಆಗ ಸರ್ಕಾರಿ ನೌಕರನಾಗಿದ್ದೆ. ಆ ಬೆಳವಣಿಗೆಗಳು ಇನ್ನೂ ನನ್ನ ನೆನಪಿನಲ್ಲಿವೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಮೀಸಲಾತಿಗೆ ಅರ್ಹವಾದ ಜಾತಿಗಳ ಪಟ್ಟಿಯನ್ನು ತರಾತುರಿಯಲ್ಲಿ ಕಳಿಸಬೇಕಾದ ಅನಿವಾರ್ಯ ಇತ್ತು. ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲಾತಿಗೆ ಬಳಕೆಯಾಗುತ್ತಿದ್ದ ಜಾತಿಗಳ ಪಟ್ಟಿಯನ್ನೇ ಉಪ ಕಾರ್ಯದರ್ಶಿಯೊಬ್ಬರು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಕಳುಹಿಸಿದರು. ಅದೇ ಪಟ್ಟಿ ರಾಜಕೀಯ ಮೀಸಲಾತಿಗೂ ಅನ್ವಯವಾಗುವಂತೆ ಅನುಮೋದನೆ ನೀಡಲಾಯಿತು. ರಾಜಕೀಯ ಮೀಸಲಾತಿಯ ಘನತೆ, ಮಹತ್ವ, ಪ್ರಾಮುಖ್ಯ ಈ ಯಾವುದರ ಅರಿವೂ ಇಲ್ಲದೆ ಪಟ್ಟಿ ಅಂತಿಮಗೊಳಿಸಲಾಯಿತು.

ಈಗ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಲು ಬಳಕೆಯಾಗುತ್ತಿರುವ ಜಾತಿಗಳ ಪಟ್ಟಿಯು ರಾಜಕೀಯ ಮೀಸಲಾತಿಗಾಗಿ ನಿಖರವಾಗಿ ಸಮುದಾಯಗಳನ್ನು ಗುರುತಿಸಿ, ಸಿದ್ಧಪಡಿಸಿದ ಪಟ್ಟಿ ಅಲ್ಲ. ಈ ಕಾರಣಕ್ಕಾಗಿಯೇ ನ್ಯಾಯಾಲಯಗಳಿಂದ ಆಕ್ಷೇಪ ವ್ಯಕ್ತವಾಗುತ್ತಿದೆ. ಈಗ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀಡುತ್ತಿರುವ ರಾಜಕೀಯ ಮೀಸಲಾತಿ ಸರಿಯಾದುದಲ್ಲ. ಈಗ ಇರುವ ಸ್ವರೂಪದಲ್ಲೇ ರಾಜಕೀಯ ಮೀಸಲಾತಿ ಮುಂದುವರಿಸಿದರೆ ಸಾಮಾಜಿಕ ನ್ಯಾಯ ಒದಗಿಸಲು ಮತ್ತು ಸಮಾಜದಲ್ಲಿನ ಶ್ರೇಣೀಕೃತ ವ್ಯವಸ್ಥೆಯನ್ನು ಅಳಿಸಿಹಾಕಲು ಸಾಧ್ಯವಿಲ್ಲ. ರಾಜಕೀಯ ಮೀಸಲಾತಿಗೆ ಬೇರೆಯದೇ ಆದ ಪಟ್ಟಿಯನ್ನು ಸಿದ್ಧಪಡಿಸಬೇಕಿದೆ ಎಂದು ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ. ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡುವ ವಿಚಾರದಲ್ಲಿ ನಿಖರವಾದ ದತ್ತಾಂಶಗಳೊಂದಿಗೆ ಅರ್ಹ ಸಮುದಾಯಗಳ ಪಟ್ಟಿಯನ್ನು ಸಿದ್ಧಪಡಿಸಲು ಸರ್ಕಾರಗಳು ಹಿಂದೇಟು ಹಾಕುತ್ತಿರುವುದಕ್ಕೆ ನ್ಯಾಯಾಲಯಕ್ಕೆ ಅಸಮಾಧಾನವಿದೆ. ಅದಕ್ಕಾಗಿಯೇ, ನಿಖರವಾಗಿ ಮೀಸಲಾತಿ ಪಟ್ಟಿ ಸಿದ್ಧಪಡಿಸಲು ಸಾಧ್ಯವಾಗದೇ ಇದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಸ್ಥಾನಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸ್ಥಾನಗಳೂ ಸಾಮಾನ್ಯ ಎಂದು ಘೋಷಿಸುವಂತೆ ತಾಕೀತು ಮಾಡಿದೆ.

ಸಂವಿಧಾನದ 243ನೇ ವಿಧಿಗೆ ಮಾಡಿದ ತಿದ್ದುಪಡಿಯು ಅದ್ಭುತವಾದುದು. ಅದರ ಆಶಯಗಳು ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ. ಅದು ಈಗ ಕಾರ್ಯರೂಪಕ್ಕೆ ಬರಬೇಕಿದೆ. ಈಗ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ನಿಖರ ದತ್ತಾಂಶಗಳ ಆಧಾರದಲ್ಲಿ ಗುರುತಿಸದೇ ಬೇರೆ ಮಾರ್ಗವಿಲ್ಲ. ಆಯೋಗವೊಂದನ್ನು ನೇಮಿಸಿ, ಈ ಪ್ರಕ್ರಿಯೆ ಪೂರ್ಣಗೊಳಿಸುವುದಕ್ಕೆ ಹೆಚ್ಚು ಸಮಯ ಬೇಕಾಗಬಹುದು. ಆದರೆ, ಅನ್ಯ ಮಾರ್ಗಗಳಂತೂ ಇಲ್ಲ. ಆಗ ತುರ್ತು ಎಂಬ ಕಾರಣಕ್ಕೆ ತಪ್ಪು ಮಾಡಲಾಗಿತ್ತು. ಈಗ ವಿಳಂಬ ಆಗುತ್ತದೆ ಎನ್ನುವ ಕಾರಣಕ್ಕೆ ಅದೇ ತಪ್ಪನ್ನು ಮುಂದುವರಿಸುವುದು ಅಕ್ಷಮ್ಯ.

ಸರ್ಕಾರ ತಕ್ಷಣವೇ ಒಂದು ಆಯೋಗ ಮತ್ತು ಕಾನೂನುಬದ್ಧವಾದ ಸಮಿತಿಯನ್ನು ಈ ಕೆಲಸಕ್ಕಾಗಿ ನೇಮಿಸಬೇಕು. ಈ ಪ್ರಕ್ರಿಯೆಗಾಗಿಯೇ ಪ್ರತ್ಯೇಕವಾಗಿ ಮಾಹಿತಿ, ಅಂಕಿಅಂಶಗಳನ್ನು ಕಲೆಹಾಕಬೇಕಾದ ಅಗತ್ಯವೇನೂ ಕಾಣಿಸುವುದಿಲ್ಲ. ರಾಜ್ಯ ಚುನಾವಣಾ ಆಯೋಗದ ಬಳಿ ಅಗತ್ಯ ಅಂಕಿಅಂಶಗಳಿವೆ. ಹಿಂದುಳಿದ ವರ್ಗಗಳ ಆಯೋಗದಲ್ಲೂ ಮಾಹಿತಿ ಇದೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲೂ ಸಾಕಷ್ಟು ಮಾಹಿತಿಯ ಸಂಗ್ರಹವಿದೆ. ಅವುಗಳನ್ನು ಬಳಸಿಕೊಂಡು ತ್ವರಿತವಾಗಿ ಪ್ರಕ್ರಿಯೆ ನಡೆಸಿದರೆ ನಿಜವಾಗಿಯೂ ಯಾರು ರಾಜಕೀಯವಾಗಿ ಹಿಂದುಳಿದಿದ್ದಾರೋ ಅವರಿಗೆ ರಾಜಕೀಯ ಮೀಸಲಾತಿ ಕಲ್ಪಿಸುವ ಕೆಲಸ ಸುಲಭವಾಗಿ ಆಗುತ್ತದೆ. ಈಗ ಪುನಃ ಸಮೀಕ್ಷೆಯೊಂದನ್ನು ನಡೆಸುವುದು ಆರ್ಥಿಕ ಹೊರೆ ಮತ್ತು ವಿಳಂಬಕ್ಕೆ ಕಾರಣವಾಗುತ್ತದೆ. ಆರ್ಥಿಕ ಹೊರೆ ಇಲ್ಲದೆ, ಸರ್ಕಾರದ ಬಳಿ ಇರುವ ನಿಖರ ಅಂಕಿಅಂಶಗಳ ಆಧಾರದಲ್ಲೇ ರಾಜಕೀಯವಾಗಿ ಯಾವ ಸಮುದಾಯಗಳಿಗೆ ಪ್ರಾತಿನಿಧ್ಯ ದೊರಕಿದೆ ಮತ್ತು ಯಾವ ಸಮುದಾಯಗಳಿಗೆ ಸಿಕ್ಕಿಲ್ಲ ಎಂಬುದನ್ನು ವರ್ಗೀಕರಿಸುವ ಕೆಲಸ ಆಗಬೇಕು. ಮೀಸಲಾತಿ ಪಟ್ಟಿಯ ಪುನರ್‌ವಿಂಗಡಣೆ ಈಗ ಆಗಬೇಕಿರುವ ಪ್ರಕ್ರಿಯೆ.

ಶಕ್ತಿವಂತರು, ಬಲಾಢ್ಯರು, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಮುಂದುವರಿದವರು ಮೀಸಲಾತಿಯನ್ನು ಬಳಸಿಕೊಂಡು ರಾಜಕೀಯ ಪ್ರಾತಿನಿಧ್ಯ ಪಡೆದುಕೊಳ್ಳುತ್ತಿದ್ದಾರೆ. ಈಗ ಇರುವ ಸ್ಥಿತಿಯಲ್ಲಿ ಮೀಸಲಾತಿಯು 'ಆಕಾಶದಲ್ಲಿ ಕಾಣುವ ಒಂದು ಚುಕ್ಕಿ' ಎಂದಷ್ಟೇ ವ್ಯಾಖ್ಯಾನಿಸಬಹುದು. ಸಣ್ಣಪುಟ್ಟ ಸಮುದಾಯಗಳು ಈವರೆಗೆ ಕನಿಷ್ಠ ಪ್ರಾತಿನಿಧ್ಯವನ್ನೂ ಪಡೆಯಲು ಸಾಧ್ಯವಾಗಿಲ್ಲ. ಈಗ ಇರುವ ಮೀಸಲಾತಿ ಪಟ್ಟಿ ಪರಿಪೂರ್ಣವಾದುದಲ್ಲ. 1994ರಲ್ಲಿ ಚಿನ್ನಪ್ಪರೆಡ್ಡಿ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯಲ್ಲಿ, 'ಜನಸಂಖ್ಯೆ ತಿಳಿಯದ ಸಮುದಾಯಗಳ ಸಂಖ್ಯೆ 100ಕ್ಕೂ ಹೆಚ್ಚಿದೆ' ಎಂಬ ಉಲ್ಲೇಖವಿದೆ. ಅಲೆಮಾರಿಗಳು, ಅರೆ ಅಲೆಮಾರಿಗಳು, ಜಾತಿ ಪಟ್ಟಿಯನ್ನೇ ಸೇರದ ಸಮುದಾಯಗಳೂ ಇವೆ. ಹಿಂದುಳಿದ ವರ್ಗಗಳ ಪಟ್ಟಿಯನ್ನೇ ಸೇರದ, ಚುನಾವಣೆಯ ಬಗ್ಗೆ ಅರಿವೇ ಇರದ, ಪಂಚಾಯತ್ ಕಚೇರಿಯನ್ನೂ ತಿಳಿಯದ ಸಮುದಾಯಗಳೂ ಇವೆ. 'ಹುಟ್ಟಿದ್ದೇವೆ, ಬದುಕಿದ್ದೇವೆ' ಎಂಬ ಸ್ಥಿತಿಯಲ್ಲಿರುವ ನೂರಾರು ಸಣ್ಣ ಸಮುದಾಯಗಳು ನಮ್ಮ ನಡುವೆಯೇ ಇವೆ.

ಹಿಂದುಳಿದ ವರ್ಗಗಳಿಗೆ ಇರುವ ಶೇಕಡ 27ರಷ್ಟು ಮೀಸಲಾತಿಯನ್ನು ಕೆಲವೇ ಸಮುದಾಯಗಳು ಬಳಸಿಕೊಂಡಿವೆ ಎಂಬುದು ಸತ್ಯ. 15ರಿಂದ 20 ಜಾತಿಗಳು ಹೆಚ್ಚು ಪಾಲು ಪಡೆದಿವೆ. ಒಟ್ಟಾರೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಪಡೆದಿರುವ ಜಾತಿಗಳ ಸಂಖ್ಯೆ 50 ದಾಟುವುದಿಲ್ಲ. ಎಲ್ಲ ಸಮುದಾಯಗಳಿಗೂ ಪ್ರಾತಿನಿಧ್ಯ ಒದಗಿಸುವುದು ಕಷ್ಟ ಎಂಬುದು ಸತ್ಯ. ಪಟ್ಟಿಯಲ್ಲೇ ಇಲ್ಲದ ಸಮುದಾಯಗಳನ್ನು ಏನು ಮಾಡುವುದು ಎಂಬ ಪ್ರಶ್ನೆಯೂ ಈ ಸಂದರ್ಭದಲ್ಲಿ ಎದುರಾಗುತ್ತದೆ. ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸಂಶೋಧಕರನ್ನು ಬಳಸಿಕೊಂಡು ಜಿಲ್ಲೆಗೊಂದು ಘಟಕ ರಚಿಸಬೇಕು. ಪಟ್ಟಿಯಲ್ಲೇ ಇಲ್ಲದ ಜಾತಿಗಳನ್ನು ಗುರುತಿಸಬೇಕು. ಆ ಮಾಹಿತಿ, ಅಂಕಿಅಂಶಗಳನ್ನು ಸಂಗ್ರಹಿಸಬೇಕು. ಅದರ, ಸಣ್ಣ ಅತಿಸಣ್ಣ ಸಮುದಾಯಗಳನ್ನು ಸೇರಿಸಿ ಪ್ರತ್ಯೇಕ ವರ್ಗವನ್ನಾಗಿ ವಿಂಗಡಿಸಬೇಕು. ಹಿಂದುಳಿದ ವರ್ಗಗಳಿಗೆ ಲಭ್ಯವಿರುವ ಮೀಸಲಾತಿಯಲ್ಲಿ ಒಂದು ಪಾಲನ್ನು ಈ ವರ್ಗಕ್ಕೆ ಮೀಸಲಿಡುವ ಕೆಲಸ ಆಗಬೇಕು.

ಮೀಸಲಾತಿ ಪಟ್ಟಿ ವೈಜ್ಞಾನಿಕವಾಗಿ ಪುನರ್ ಪರಿಶೀಲನೆ ಆಗಲೇಬೇಕು. ಒಮ್ಮೆ ಮಾಡಿದ ಪಟ್ಟಿ ಪರಿಪಕ್ವ ಎಂದು ಹೇಳಲಾಗದು. ಕಾಲಕಾಲಕ್ಕೆ ಈ ಪ್ರಕ್ರಿಯೆ ನಡೆಯುತ್ತಲೇ ಇರಬೇಕು. ಆಗದೇ ಇದ್ದರೆ ದೊಡ್ಡ ಅನ್ಯಾಯ ಮುಂದುವರಿಯುತ್ತದೆ. ದಾಖಲೆಯಲ್ಲಿರುವವರಿಗಾದರೂ ನ್ಯಾಯ ಒದಗಿಸುವ ಕೆಲಸವನ್ನು ಮಾಡಬೇಕು.

(ಲೇಖಕ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ)

ನಿರೂಪಣೆ: ವಿ.ಎಸ್. ಸುಬ್ರಹ್ಮಣ್ಯ

'ಸಾಮಾನ್ಯ ಕ್ಷೇತ್ರಗಳಲ್ಲಿ ಗೆಲುವು ಅಸಾಧ್ಯ'



ಹಿಂದುಳಿದ ವರ್ಗದವರು ಸಾಮಾನ್ಯ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಜಯಗಳಿಸಲು ಸಾಧ್ಯವೇ ಇಲ್ಲ. ಅಪರೂಪಕ್ಕೆ ಒಂದೆರಡು ಸ್ಥಾನಗಳಲ್ಲಿ ಗೆಲ್ಲಬಹುದು. ಹೀಗಾಗಿ, ಮೀಸಲಾತಿಗಾಗಿ ನಾವು ರಾಜ್ಯಾದ್ಯಂತ ಹೋರಾಟ ರೂಪಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ಈಗಾಗಲೇ ಹತ್ತಾರು ಸಭೆಗಳನ್ನು ಹಿಂದುಳಿದ ವರ್ಗಗಳ ಮುಖಂಡರ ಜತೆ ನಡೆಸಲಾಗಿದೆ. ಸಂಘಟನೆ ಮೂಲಕ ಹೋರಾಟ ಮಾಡಿ ನಮ್ಮ ಹಕ್ಕು ಪಡೆದುಕೊಳ್ಳಲು ಪ್ರಯತ್ನಿಸುತ್ತೇವೆ. ರಾಜ್ಯ ಸರ್ಕಾರವು ಸಹ ತನ್ನ ಪ್ರಯತ್ನಗಳನ್ನು ಮುಂದುವರಿಸಬೇಕು. ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಿ. ಅವಸರದಿಂದ ಚುನಾವಣೆ ನಡೆಸುವುದು ಬೇಡ. '2ಎ'ನಲ್ಲಿ 102 ಜಾತಿಗಳಿವೆ. ಪ್ರವರ್ಗ–1ರಲ್ಲಿ 95 ಜಾತಿಗಳಿವೆ. ಈ 197 ಜಾತಿಗಳ ಮೇಲೆ ಮೀಸಲಾತಿ ಪರಿಣಾಮ ಬೀರಲಿದ್ದು, ತೀರಾ ಅನ್ಯಾಯವಾಗುತ್ತದೆ. ಎಚ್. ಕಾಂತರಾಜು ನೇತೃತ್ವದಲ್ಲಿ ಸಿದ್ಧಪಡಿಸಿರುವ ವರದಿಯನ್ನು ಸರ್ಕಾರ ಸ್ವೀಕರಿಸಿ, ಅದರಂತೆ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಿ.

ಎಂ.ಡಿ. ಲಕ್ಷ್ಮಿನಾರಾಯಣ
ನೇಕಾರರ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷ

'ಹಿಂದುಳಿದ ವರ್ಗಗಳ ಹಿತಾಸಕ್ತಿ ಕಾಪಾಡಬೇಕು'

ಮೀಸಲಾತಿ ನೀಡಿದರೆ ಮಾತ್ರ ಹಿಂದುಳಿದ ವರ್ಗಗಳು ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನ ಪಡೆಯಲು ಈಗಿನ ವ್ಯವಸ್ಥೆಯಲ್ಲಿ ಸಾಧ್ಯ. ಪ್ರತಿಯೊಂದು ಗ್ರಾಮದಲ್ಲೂ ಪ್ರಬಲ ಜಾತಿಗಳೇ ಪ್ರಾಬಲ್ಯ ಹೊಂದಿರುತ್ತವೆ. ಹೀಗಾಗಿ, ಚುನಾವಣೆಗಳಲ್ಲಿ ಬಲಾಢ್ಯರು ಮತ್ತು ಬಹುಸಂಖ್ಯಾತ ಸಮುದಾಯದ ಪ್ರತಿನಿಧಿಗಳು ಆಯ್ಕೆಯಾಗುವುದು ಸುಲಭ. ಹಿಂದುಳಿದ ವರ್ಗಕ್ಕೆ ಮೀಸಲಾತಿ ಕಲ್ಪಿಸಲು ಕಾನೂನಿನ ತೊಡಕುಗಳನ್ನು ಸರ್ಕಾರ ನಿವಾರಿಸಬೇಕು. ಈಗ ಹಿಂದುಳಿದ ವರ್ಗಕ್ಕೆ ಶೇಕಡ 27ರಷ್ಟು ಮೀಸಲಾತಿ ಇದೆ. ಇದರ ಒಳಗೂ ಕೊಡಬೇಕು ಎನ್ನುವ ಬೇಡಿಕೆ ಇದೆ. ಹಿಂದುಳಿದ ವರ್ಗಗಳಿಗೆ ನೀಡಿರುವ ಮೀಸಲಾತಿಯಲ್ಲಿ ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದ ಲಿಂಗಾಯತ ಮತ್ತು ಒಕ್ಕಲಿಗರು ಸಹ ಬರುತ್ತಾರೆ. ಇದರಿಂದ, ಶೇಕಡ 15ರಷ್ಟು ಹಿಂದುಳಿದ ವರ್ಗಗಳಿಗೆ ಮಾತ್ರ ಸೌಲಭ್ಯಗಳು, ಸ್ಥಾನಮಾನಗಳು ದೊರೆಯುತ್ತಿವೆ. ಆದ್ದರಿಂದ, ಸರ್ಕಾರ ಸರಿಯಾದ ರೀತಿಯಲ್ಲಿ ನ್ಯಾಯಾಲಯಕ್ಕೆ ಮನವರಿಕೆ ಮಾಡಬೇಕು. ಹಿಂದುಳಿದ ವರ್ಗಗಳ ಹಿತಾಸಕ್ತಿ ಕಾಪಾಡಬೇಕು. ಹಿಂದುಳಿದ ವರ್ಗಗಳನ್ನು ನಿರ್ಲಕ್ಷ್ಯ ಮಾಡಲು ಸಾಧ್ಯವಿಲ್ಲ. ದೇಶದಲ್ಲಿ ಹಿಂದುಳಿದ ವರ್ಗದ ಜನಸಂಖ್ಯೆಯೇ ಹೆಚ್ಚು. ಇದೊಂದು ಪ್ರಮುಖ ವರ್ಗ. ಆದ್ದರಿಂದ, ಹಿಂದುಳಿದ ವರ್ಗಗಳನ್ನು ಕಡೆಗಣಿಸದೆ, ಕಾನೂನಾತ್ಮಕವಾಗಿಯೇ ಕ್ರಮಗಳನ್ನು ಕೈಗೊಳ್ಳಬೇಕು.

ಎನ್. ಶಂಕರಪ್ಪ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ

'ಅಸ್ತಿತ್ವಕ್ಕಾಗಿ ಮೀಸಲಾತಿ ಅಗತ್ಯ'

ಮೀಸಲಾತಿಯಿಂದಾಗಿ ಉಸಿರಾಡುತ್ತಿದ್ದೇವೆ. ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿಯಾಗಲು ಮೀಸಲಾತಿ ಅಗತ್ಯ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಬಲಾಢ್ಯರು ಮಾತ್ರ ಆಯ್ಕೆಯಾಗುತ್ತಿದ್ದಾರೆ. ಮೀಸಲಾತಿ ಇದ್ದಾಗಲೇ ರಾಜ್ಯದಲ್ಲಿ ದೇವಾಂಗ ಸಮಾಜದವರು ಒಬ್ಬರು ಸಹ ಜಿಲ್ಲಾ ಪಂಚಾಯಿತಿ ಸದಸ್ಯರು ಇರಲಿಲ್ಲ. ಇನ್ನು ಮೀಸಲಾತಿಯೇ ಇಲ್ಲದಿದ್ದರೆ ಯಾವ ರೀತಿ ಪರಿಸ್ಥಿತಿ ಸೃಷ್ಟಿಯಾಗಲಿದೆ ಊಹಿಸಿಕೊಳ್ಳಿ. ಸದ್ಯ ನಮ್ಮ ಸಮಾಜದವರು ಯಾರೂ ವಿಧಾನ ಪರಿಷತ್ ಅಥವಾ ವಿಧಾನಸಭೆ ಸದಸ್ಯರು ಇಲ್ಲ. ರಾಜಕೀಯವಾಗಿ ಪ್ರಾತಿನಿಧ್ಯ ದೊರೆತಿರುವುದು ಅತಿ ವಿರಳ. ಸಮಾಜಕ್ಕೆ ರಾಜಕೀಯ ಶಕ್ತಿ ನೀಡಿದರೆ ಮಾತ್ರ ಬದುಕು ಉತ್ತಮವಾಗಲು ಸಾಧ್ಯ. ಇದು ಅಸ್ತಿತ್ವದ ಪ್ರಶ್ನೆಯೂ ಹೌದು. ಸಾಮಾನ್ಯ ವರ್ಗದಲ್ಲಿ ಬಲಾಢ್ಯ ಜಾತಿಗಳನ್ನು ಎದುರಿಸುವುದು ಅಸಾಧ್ಯ. ಹಿಂದುಳಿದ ವರ್ಗಗಳ ಜನರು ಒಟ್ಟಾಗಿ ಸೇರಿಕೊಂಡು ಹೋರಾಟ ಮಾಡುತ್ತಿದ್ದೇವೆ. ನ್ಯಾಯಾಲಯಕ್ಕೂ ಮೊರೆ ಹೋಗಲು ಚಿಂತನೆ ನಡೆಸುತ್ತಿದ್ದೇವೆ.

ರವೀಂದ್ರ ಕಲಬುರ್ಗಿ, ಕರ್ನಾಟಕ ರಾಜ್ಯ ದೇವಾಂಗ ಸಂಘದ ಪ್ರಧಾನ ಕಾರ್ಯದರ್ಶಿ

'ಸಣ್ಣ ಜಾತಿಗೆ ಪ್ರಾತಿನಿಧ್ಯವೇ ಸಿಗಲ್ಲ'

ಸವಿತಾ ಸಮಾಜ ಸಣ್ಣ ಜಾತಿ. ಹೊಟ್ಟೆಗುಂಟು ಬಟ್ಟೆಗಿಲ್ಲ ಎನ್ನುವ ಪರಿಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ಸರ್ಕಾರವೇ ನಮ್ಮನ್ನು ಗುರುತಿಸಿ ರಾಜಕೀಯ ಸ್ಥಾನಮಾನಗಳನ್ನು ಕಲ್ಪಿಸಬೇಕು. ನಮ್ಮ ಸಮಾಜದವರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಆಯ್ಕೆಯಾಗಿರುವುದು ಅತಿ ಕಡಿಮೆ. ಸಣ್ಣ ಜಾತಿಗೆ ಸೇರಿದವರು ಬಹುಸಂಖ್ಯಾತ ಸಮುದಾಯದ ವ್ಯಕ್ತಿಗಳನ್ನು ಚುನಾವಣೆಯಲ್ಲಿ ಎದುರಿಸಲು ಸಾಧ್ಯವೇ? ಹೀಗಾಗಿ, ಮೀಸಲಾತಿ ಕಲ್ಪಿಸದಿದ್ದರೆ ರಾಜಕೀಯ ಪ್ರಾತಿನಿಧ್ಯವೇ ದೊರೆಯುವುದಿಲ್ಲ. ಆದರೆ, ನಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಸರ್ಕಾರ ಕೇವಲ ಭರವಸೆ ನೀಡುತ್ತಿದೆ. ಆದರೆ, ಅನುಷ್ಠಾನಗೊಳಿಸುತ್ತಿಲ್ಲ. ಕರ್ನಾಟಕದಲ್ಲಿ 40ರಿಂದ 45 ಲಕ್ಷ ಜನಸಂಖ್ಯೆಯನ್ನು ಸವಿತಾ ಸಮಾಜ ಹೊಂದಿದೆ.

ಸಂಪತ್ ಕುಮಾರ್, ಸವಿತಾ ಸಮಾಜ ರಾಜ್ಯ ಘಟಕದ ಅಧ್ಯಕ್ಷ

'ಹೋರಾಟ ಅನಿವಾರ್ಯ'

ರಾಜ್ಯ ಸರ್ಕಾರ ಚುನಾವಣೆ ಮುಂದೂಡಲು ಎಲ್ಲ ರೀತಿಯ ಕಸರತ್ತುಗಳನ್ನೂ ಮಾಡುತ್ತಿದೆ. ಉಪ್ಪಾರ ಸಮಾಜದಂತಹ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಅನಿವಾರ್ಯ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಮೀಸಲಾತಿ ಅನಿವಾರ್ಯ ಮತ್ತು ಅಗತ್ಯ. ಮೀಸಲಾತಿ ದೊರೆಯದಿದ್ದರೆ ಹೋರಾಟ ಅನಿವಾರ್ಯ. ಆದರೆ, ಎಲ್ಲವನ್ನೂ ಹೋರಾಟ ಮಾಡಿಯೇ ಪಡೆಯಬೇಕಾದ ಪರಿಸ್ಥಿತಿ ಎದುರಾಗಿರುವುದು ದುರ್ದೈವ. ಬಿಜೆಪಿ ಸರ್ಕಾರ ಹಿಂದುಳಿದ ವರ್ಗಗಳನ್ನು ಕಡೆಗಣಿಸುತ್ತಿದೆ. ಹಿಂದುಳಿದ ವರ್ಗಗಳ ಒಕ್ಕೂಟದ ಮೂಲಕ ಮೀಸಲಾತಿ ಪಡೆಯಲು ಕಾನೂನಿನ ಹೋರಾಟ ಮಾಡಲಾಗುವುದು. ಹಿಂದುಳಿದ ವರ್ಗಗಳನ್ನು ತುಳಿಯುವ ವ್ಯವಸ್ಥಿತ ಕುತಂತ್ರ ನಡೆಯುತ್ತಿದೆ. ವಾಸ್ತವ ಅಂಶಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಪ್ರಜ್ಞಾವಂತರೆಲ್ಲರೂ ಬೆಂಬಲಿಸಬೇಕು.

ಸಿ. ಪುಟ್ಟರಂಗಶೆಟ್ಟಿ, ಉಪ್ಪಾರ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಮತ್ತು ಶಾಸಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 73

ಮದೋನ್ಮತ್ತನಾದ ನಾರದ

ಮನ್ಮಥನ ಮಾತು ಕೇಳಿ ಇಂದ್ರ ಅಚ್ಚರಿಗೊಂಡಿದ್ದ. ಶಿವನ ಮಾಯೆಯಿಂದ ನಾರದ ಮನ್ಮಥನ ಲೀಲೆಗೆ ಸಂಮೋಹಿತನಾಗಲಿಲ್ಲ ಎಂಬ ವಿಷಯ ತಿಳಿಯದೆ, ನಾರದನ ತಪಃಶಕ್ತಿಯಿಂದ ಮನ್ಮಥ ಹೂಡಿದ ಕಾಮಲೀಲೆಗಳನ್ನು ನಿಗ್ರಹಿಸಿದನೆಂದು ತಿಳಿದು ನಾರದನನ್ನು ಹಾಡಿ ಹೊಗಳಿದ. ಇಂದ್ರನಿಗೂ ಶಿವನ ಮಹಿಮೆ ಗೊತ್ತಾಗದಿರಲು ಮೂಲಕಾರಣ ಪರಶಿವನ ಮಾಯೆ. ಯಾರೂ ಶಿವನ ಮಾಯೆಯನ್ನು ಅಷ್ಟು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲ. ಶಿವನಿಗೆ ಆತ್ಮಾರ್ಪಣ ಮಾಡಿದ ಭಕ್ತರಿಗಲ್ಲದೆ ಬೇರಾರಿಗೂ ಶಿವನ ಮಾಯಾರಹಸ್ಯ ಅರ್ಥವಾಗುವುದಿಲ್ಲ. ಏಕೆಂದರೆ, ಪ್ರಪಂಚವೆಲ್ಲವೂ ಅವನ ಮಾಯೆಯಿಂದ ಆವೃತವಾಗಿದೆ.

ಮನ್ಮಥನ ವಿಫಲ ಯತ್ನದ ನಂತರ ನಾರದ ಈಶ್ವರಾನುಗ್ರಹದಿಂದ ಅಲ್ಲಿಯೇ ಬಹಳ ಕಾಲ ಇದ್ದು ತಪಸ್ಸು ಮಾಡಿದ. ಆಮೇಲೆ ತನ್ನ ತಪಸ್ಸು ಸಂಪೂರ್ಣವಾಯಿತೆಂದು ತಿಳಿದು, ಅಲ್ಲಿಂದ ಹೊರಟುಹೋದ. ಶಿವಮಾಯೆಯಿಂದ ಸಂಮೋಹಿತನಾಗಿದ್ದ ಆ ನಾರದ ಸಹ ಇಂದ್ರನಂತೆ ವಿವೇಕಶೂನ್ಯನಾಗಿದ್ದ. ಮನ್ಮಥನು ಸೋತುಹೋದುದು ತನ್ನ ಮಹಿಮೆಯಿಂದಲೇ ಎಂದು ಇಂದ್ರನಂತೆ ಭಾವಿಸಿ ದುರಹಂಕಾರಪಟ್ಟ. ಮದನನನ್ನು ಸೋಲಿಸಿದೆ ಅಂತ ಮದೋನ್ಮತ್ತನಾಗಿ ಬೀಗಿದ.

ಶಿವನಮಾಯೆಯೇ ಅಂಥದ್ದು. ವಿಷ್ಣುಬ್ರಹ್ಮರಂಥವರೂ ಶಿವಮಾಯೆಯನ್ನು ತಿಳಿಯಲಾರರು. ಶಿವನಲ್ಲಿ ಪೂರ್ಣ ಭಕ್ತಿಯಿಡದೆ, ಸ್ವಾರ್ಥಕ್ಕಾಗಿ ತಪಸ್ಸು ಮಾಡುವವರು ಶಿವಮಾಯೆಯಿಂದ ದಿಙ್ಮೂಢರಾಗುತ್ತಾರೆ. ಶಿವನನ್ನು ಒಲಿಸಿಕೊಳ್ಳುವಾಗ ಮಾಡಿದ ಒಂದು ಸಣ್ಣ ತಪ್ಪು ಸಹ ಎಲ್ಲಾ ತಪೋಕಾರ್ಯವನ್ನೂ ಆಪೋಷಣ ತೆಗೆದುಕೊಳ್ಳುತ್ತದೆ. ಮುನಿಶ್ರೇಷ್ಠನಾದ ನಾರದ ಶಿವನ ಮಾಯೆಯಿಂದ ವಿಕಾರ ಬುದ್ಧಿ ಬೆಳೆಸಿಕೊಂಡಿದ್ದ. ಮದಾಂಧತೆಯಿಂದ ತನ್ನ ತಪೋಶಕ್ತಿಯ ವೃತ್ತಾಂತವನ್ನು ಶಿವನಿಗೆ ಹೇಳಬೇಕೆಂದು ತಕ್ಷಣವೆ ಕೈಲಾಸಕ್ಕೆ ಹೊರಟ.

ನಾರದ ಶಿವನ ಮುಂದೆ ಜಂಭದಿಂದ ಮಾತಾಡತೊಡಗಿದ. ತಾನು ಮಹಾತ್ಮನಾಗಿದ್ದರಿಂದ ತನ್ನ ಪ್ರಭಾವದಿಂದಲೇ ಮನ್ಮಥ ಸೋತು ಓಡಿದನೆಂದ. ಗರ್ವಿಷ್ಠನಾದ ನಾರದನ ಮಾತು ಕೇಳಿದ ಶಿವ ಮನಸ್ಸಿನಲ್ಲೆ ನಕ್ಕ. ಭಕ್ತವತ್ಸಲನಾದ ಶಂಕರ, ಬುದ್ಧಿವೈಕಲ್ಯದಿಂದ ಹರಟುತ್ತಿದ್ದ ನಾರದನಿಗೆ 'ನೀನು ಧನ್ಯನೇ ಸರಿ. ನನ್ನ ಮಾತನ್ನು ಕೇಳು. ಎಲ್ಲಿಯೂ ಈ ರೀತಿ ಹೇಳಬೇಡ. ಅದರಲ್ಲೂ ವಿಷ್ಣುವಿನ ಮುಂದೆ ಈ ಮಾತೆತ್ತಬೇಡ. ವಿಷ್ಣು ಕೇಳಿದರೂ, ನನ್ನ ಮುಂದೆ ಹೇಳಿದ ರೀತಿ ಮಾತಾಡಬೇಡ. ನೀನು ವಿಷ್ಣುಭಕ್ತನಾದರೂ, ನೀನು ನನಗೆ ಬಹಳ ಬೇಕಾದವನು. ವಿಷ್ಣುಭಕ್ತರೆಲ್ಲ ನನಗೆ ವಿಶೇಷ ಪ್ರೀತಿಪಾತ್ರರು. ಈ ರೀತಿ ಎಂದೂ ತನ್ನಿಂದಲೇ ಆಯಿತೆಂದು ಜಂಭ ಕೊಚ್ಚಬೇಡ' ಎಂದು ಬುದ್ಧಿ ಹೇಳಿ ಎಚ್ಚರಿಸಿದ.

ನಾರದ ಗರ್ವದಿಂದ ಶಿವನ ಮಾತನ್ನು ಕಡೆಗಣಿಸಿದ. ತನ್ನ ಶಕ್ತಿಯಿಂದಲೇ ಮನ್ಮಥನನ್ನು ಸೋಲಿಸಿದೆ ಎಂದು ಮತ್ತೆ ಜಂಭದಿಂದ ಬೀಗಿದ. ಕರ್ಮಗತಿಯು ಪ್ರಬಲವಾದುದೆಂಬುದನ್ನು ತಿಳಿಯದ ನಾರದ ತಪ್ಪು ಮಾಡಿದ. ಶಿವನ ಇಚ್ಛೆಯನ್ನು ಯಾರೂ ಮೀರಲಾರರು ಎಂಬ ಸತ್ಯವನ್ನು ಮರೆತುಬಿಟ್ಟ. ಎಲ್ಲಾ ತನ್ನಿಂದಲೇ ಆಯಿತೆಂಬ ಅಹಂಕಾರದ ಅಮಲಿನಲ್ಲೆ ನಾರದ ಕೈಲಾಸದಿಂದ ನೇರ ಸತ್ಯಲೋಕಕ್ಕೆ ಬಂದ. ಅಲ್ಲಿ ಬ್ರಹ್ಮನಿಗೆ ನಮಸ್ಕರಿಸಿ, ತನ್ನ ತಪಶ್ಶಕ್ತಿಯಿಂದ ಮನ್ಮಥನನ್ನು ಜಯಿಸಿದ ವೃತ್ತಾಂತವನ್ನು ತಿಳಿಸಿದ.

ನಾರದನ ಮಾತನ್ನೆಲ್ಲ ಕೇಳಿದ ಬ್ರಹ್ಮನಿಗೆ ಅಚ್ಚರಿಯಾಯಿತು. ಆಗ ತನ್ನ ದಿವ್ಯದೃಷ್ಟಿಯಿಂದ ನಾರದನ ಮಾತಿನ ಮರ್ಮ ಗೊತ್ತಾಯಿತು. ಹಾಗೇ ನಾರದನ ತಪೋಶ್ಶಕ್ತಿಗೆ ಕಾರಣವನ್ನೂ ತಿಳಿದುಕೊಂಡ. ನಂತರ ಮಗನಾದ ನಾರದನಿಗೆ, ಸತ್ಯ ಅರಿಯದೆ ಅಹಂಕಾರದಿಂದ ಬೀಗಬೇಡವೆಂದು ತಿಳಿವಳಿಕೆ ನೀಡಿದ. ನಾರದ ಜಂಭಪಡುವುದನ್ನು ನಿಲ್ಲಿಸಲಿಲ್ಲ. ಭ್ರಮೆಯಿಂದ ಹೊರಬಾರದ ನಾರದ ಅಹಂ ನೆತ್ತಿಗೇರಿಸಿಕೊಂಡು ತಂದೆ ಬ್ರಹ್ಮನ ಮಾತನ್ನೂ ಕಡೆಗಣಿಸಿದ.

ಶಿವನ ಇಚ್ಛೆಯು ಯಾವ ರೀತಿ ಇರುವುದೋ ಪ್ರಪಂಚದಲ್ಲಿ ಅದೇ ರೀತಿಯಾಗುವುದು. ಈ ಜಗತ್ತೆಲ್ಲವೂ ಶಿವನ ಮಾಯೆಯ ಮೇಲೆ ನಿಂತಿದೆ ಎಂಬುದನ್ನು ತಿಳಿಯದ ನಾರದ ಬ್ರಹ್ಮನ ಮುಂದೆ ಜಂಭದ ಮಾತಾಡಿದ್ದು ಸಾಲದೆಂಬಂತೆ, ವಿಷ್ಣುವಿಗೂ ತನ್ನ ಸಾಧನೆ ಹೇಳಿಕೊಳ್ಳಲು ವೈಕುಂಠಕ್ಕೆ ಹೊರಟ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಯತ್ನದ ಫಲ

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು |
ಪಟ್ಟುವರಸೆಗಳೆಲ್ಲ ವಿಫಲವೆನ್ನುವೆಯೇಂ ? ||
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣ ಗಟ್ಟಿ |
ಗಟ್ಟಿತನ ಗರಡಿ ಫಲ - ಮಂಕುತಿಮ್ಮ || 588 ||

ಪದ-ಅರ್ಥ: ಗೆಲ್ಲದೊಡೆ = ಗೆಲ್ಲದಿದ್ದರೆ, ಗರಡಿಯ = ಗರಡಿ ಮನೆಯ, ವಿಫಲವೆನ್ನುವೆಯೇಂ = ವಿಫಲ + ಎನ್ನುವೆಯೇಂ (ಎನ್ನುತ್ತೀಯಾ)

ವಾಚ್ಯಾರ್ಥ: ಪೈಲವಾನ್‌ನೊಬ್ಬ ಕುಸ್ತಿಯಲ್ಲಿ ಗೆಲ್ಲದಿದ್ದರೆ ಅವನು ಇದುವರೆಗೂ ಮಾಡಿದ ಸಾಮು, ಪಟ್ಟು, ವರಸೆಗಳೆಲ್ಲ ವಿಫಲವಾದವು ಎನ್ನಬಹುದೆ? ಅವನ ಮೈಯನ್ನು ಮುಟ್ಟಿ ನೋಡು, ಕಬ್ಬಿಣದಂತೆ ಗಟ್ಟಿಯಾಗಿದೆ. ಅವನ ಗಟ್ಟಿತನ ಬಂದದ್ದು ಗರಡಿಯ ಶ್ರಮದ ಫಲ.

ವಿವರಣೆ: ಅವನೊಬ್ಬ ತರುಣ. ಯಾವಾಗಲೂ ಒಂದಿಲ್ಲೊಂದು ರೋಗ. ಯಾವುದೋ ತೊಂದರೆಯಿಂದ ಅವನಿಗೆ ಎಲ್ಲರಂತೆ ಇರಲು ಆಗಲೇ ಇಲ್ಲ. ವೈದ್ಯರೆಲ್ಲ ಮುಗಿದರು, ಎಲ್ಲ ದೇವಸ್ಥಾನಗಳಲ್ಲಿ ಹರಕೆ, ಪೂಜೆಗಳು ಮುಗಿದವು. ಒಂದು ಬಾರಿ ಯಾರೋ ಹಿರಿಯರು ಹತ್ತಿರದ ಶಿವ ದೇವಾಲಯದ ಬಗ್ಗೆ ಹೇಳಿ, ಅಲ್ಲಿ ಹತ್ತು ದಿನ ಸೇವೆ ಮಾಡಿದರೆ ಶಿವನೇ ಬಂದು ಪರಿಹಾರ ಕೊಡುತ್ತಾನೆ ಎಂದು ಹೇಳಿದರು. ಆತ ಉತ್ಸಾಹದಿಂದ ಹೋದ. ಸೇವೆಯ ಹತ್ತನೇ ದಿನ ಕನಸಿನಲ್ಲಿ ಶಿವ ಬಂದ. ಹೇಳಿದ, 'ನಿನ್ನ ಮನೆಯ ಹಿಂದೆ ಒಂದು ಬೆಟ್ಟವಿದೆಯಲ್ಲ, ಅಲ್ಲಿ ದಾರಿಯ ಪಕ್ಕ ಒಂದು ದೊಡ್ಡ ಬಂಡೆ ಇದೆ. ಅದನ್ನು ದಿನಾಲು ಎರಡು ಬಾರಿ ಹೋಗಿ ಜೋರಾಗಿ ತಳ್ಳುತ್ತ ಬೆಟ್ಟದ ತುದಿಗೆ ತೆಗೆದುಕೊಂಡು ಹೋಗು. ಅದು ಸುಮಾರು ಎರಡು ತಿಂಗಳು ತೆಗೆದುಕೊಳ್ಳುತ್ತದೆ. ಆಗ ನಿನ್ನ ಆರೋಗ್ಯ ಚೆನ್ನಾಗಾಗುತ್ತದೆ'. ತರುಣ ಉತ್ಸಾಹದಿಂದ ಮರಳಿ ಬಂದು ಬೆಟ್ಟಕ್ಕೆ ಹೋಗುವಾಗ ಆ ಬಂಡೆಯನ್ನು ನೋಡಿದಾಗ ಉತ್ಸಾಹ ಜರ್ರನೇ ಇಳಿದು ಹೋಯಿತು. ಇಷ್ಟು ದೊಡ್ಡ ಬಂಡೆಯನ್ನು ಮೇಲೆ ತಳ್ಳಲಾದೀತೇ? ಶಿವ ಹೇಳಿದ ಮೇಲೆ ಪ್ರಯತ್ನ ಮಾಡುತ್ತೇನೆಂದು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಎರಡು ಗಂಟೆಗಳ ಕಾಲ ಅದನ್ನು ಮೇಲಕ್ಕೆ ತಳ್ಳುತ್ತ ಬಂದ. ಎರಡು ತಿಂಗಳಾದರೂ ಅದು ಅಲುಗಾಡಲೂ ಇಲ್ಲ. ಮತ್ತೆ ಶಿವನ ಬಳಿ ತನ್ನ ವೈಫಲ್ಯವನ್ನು ಹೇಳಿಕೊಂಡ. ಶಿವ ಕನಸಿನಲ್ಲಿ ಬಂದು ಹೇಳಿದ, 'ಮೂರ್ಖ, ಬಂಡೆಯನ್ನು ಬೆಟ್ಟದ ಮೇಲೆ ತಳ್ಳುವುದು ಅಸಾಧ್ಯವೆಂದು ನನಗೆ ಗೊತ್ತಿತ್ತು. ಆದರೆ ಈಗ ನಿನ್ನ ಆರೋಗ್ಯ ಹೇಗಿದೆಯೆಂದು ನೋಡು. ಬಂಡೆಯನ್ನು ಶಕ್ತಿ ಹಾಕಿ ತಳ್ಳಿದ್ದರಿಂದ ನಿನ್ನ ಸ್ನಾಯುಗಳು ಗಟ್ಟಿಯಾಗಿವೆ, ಮಾಂಸ ಬಲಿಷ್ಠವಾಗಿದೆ. ಶ್ರಮದಿಂದ ಹಸಿವೆಯಾಗಿ, ಚೆನ್ನಾಗಿ ಊಟ ಮಾಡುತ್ತಿದ್ದೀಯಾ, ನಿದ್ರೆ ಬರುತ್ತಿದೆ. ನಿನಗೆ ಯಾವ ರೋಗದ ಲಕ್ಷಣವೂ ಇಲ್ಲದೆ ಸಂಪೂರ್ಣ ನಿರೋಗಿಯಾಗಿರುವೆ'. ತರುಣ ಗಮನಿಸಿದ. ಹೌದು. ಅವನಿಗೆ ಈಗ ಯಾವ ರೋಗವೂ ಇಲ್ಲ. ಆತ ತಾರುಣ್ಯದ ಶಕ್ತಿಯಿಂದ ಹೊಳೆಯುತ್ತಿದ್ದಾನೆ.

ಕಗ್ಗದ ಮಾತು ಇದನ್ನು ತಿಳಿಸುತ್ತದೆ. ಕುಸ್ತಿಯ ಪೈಲವಾನನೊಬ್ಬ ಕುಸ್ತಿಯ ಸ್ಪರ್ಧೆಯಲ್ಲಿ ಸೋತ ಎಂದಿಟ್ಟುಕೊಳ್ಳಿ. ಅವನನ್ನು ವಿಫಲನೆನ್ನಲಾಗುತ್ತದೆಯೇ? ಅವನು ಆ ಪ್ರಯತ್ನದಲ್ಲಿ ವಿಫಲವಾಗಿರಬಹುದು ಆದರೆ ಅವನು ವಿಫಲನಲ್ಲ. ಹತ್ತಿರ ಹೋಗಿ ಅವನ ತೋಳುಗಳನ್ನು ಮುಟ್ಟಿ ನೋಡು. ಅವು ಕಬ್ಬಿಣದ ತೊಲೆಗಳಂತೆ ಗಟ್ಟಿಯಾಗಿವೆ. ಅವನು ಒಂದು ಕುಸ್ತಿ ಪ್ರಯತ್ನದಲ್ಲಿ ಸೋತರೂ, ಇಷ್ಟು ವರ್ಷಗಳ ಕಾಲ ಅವನು ಮಾಡಿದ ಪರಿಶ್ರಮದ ಫಲವಾಗಿ ಅವನ ದೇಹ ಬಲಿತು ನಿಂತಿದೆ. ಅದು ಸಾಧನೆಯಲ್ಲವೆ?

ಇದು ದೇಹಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಬದುಕಿನ ಪ್ರತಿಯೊಂದು ಪ್ರಯತ್ನವೂ ಯಶಸ್ಸನ್ನು ಕೊಡುತ್ತದೆಂದಲ್ಲ. ಆದರೆ ಪ್ರತಿ ಪ್ರಯತ್ನ ಮನುಷ್ಯನನ್ನು ಹೆಚ್ಚು ಪ್ರಬುದ್ಧನನ್ನಾಗಿ ಮಾಡುತ್ತದೆ, ಮುಂದಿನ ಸಮಸ್ಯೆಗಳನ್ನು ಎದುರಿಸಲು ಸಮರ್ಥನನ್ನಾಗಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಮಾರ್ಚ್ 21, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮೀನ ಮಾಸದ 07 ನೇ ದಿನ ತಿಥಿ: (ಫಾಲ್ಗುಣ ಕೃಷ್ಣ) ತೃತೀಯ ಗಂ. 08-21 ನಕ್ಷತ್ರ: ಸ್ವಾತಿ ಗಂ. 21-31 ಯೋಗ: ವ್ಯಾಘಾತ ಗಂ. 15-54, ಕರಣ: ವಿಷ್ಟಿ ಗಂ. 08-21. ರಾಹುಕಾಲ : ಬೆಳಿಗ್ಗೆ 07:30 - 09:00 ಸೂರ್ಯೋದಯ : 06-38 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 17 ಶಬನ್ ದಿನ ವಿಶೇಷ: ಸಂಕಷ್ಟಹರ ಚತುರ್ಥಿ (ಚಂದ್ರೋದಯ ಗಂ. 09-37) ಜಮ್‌ಶೇಡಿ ನರೋಜ (ಪಾರ್ಸಿ) ಅದೃಷ್ಟ ಸಂಖ್ಯೆ: 10, 13

ಮೇಷ: ಸಂಕಷ್ಟಕ್ಕೆ ಸಿಲುಕಿರುವ ನಿಮಗೆ ಅಪರಿಚಿತರಿಂದ ಸಹಾಯಹಸ್ತ ಪ್ರಾಪ್ತಿಯಾಗಲಿದೆ. ದಾಂಪತ್ಯದಲ್ಲಿನ ಬಿರುಕು ಹೊಂದಾಣಿಕೆಯಿಂದ ಸರಿಯಾಗುವುದು. ಜೀರ್ಣಕ್ರಿಯೆಗೆ ಸಂಬಂಧಿಸಿ ಅನಾರೋಗ್ಯ ಕಾಣಿಸಬಹುದು.

ವೃಷಭ: ಈ ದಿನ ನಿಮ್ಮ ಯೋಜನೆಗಳನ್ನು ಇತರರು ಸ್ವೀಕರಿಸುವಂತೆ ಮಾಡುವ ನಿಮ್ಮ ಸಾಮರ್ಥ್ಯ ಅದ್ಭುತವಾದದ್ದು. ಹೊರಗುತ್ತಿಗೆ ಕೆಲಸ ಲಾಭ ತರಲಿದೆ. ರೈತರಿಗೆ ಕಾಡು ಪ್ರಾಣಿಗಳ ಕಾಟದಿಂದಾಗಿ ನಷ್ಟ ಸಂಭವಿಸಬಹುದು.

ಮಿಥುನ: ರಾಜಕಾರಣಿಗಳು ಅಥವಾ ರಾಜಕೀಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ತಮ್ಮ ಕುತಂತ್ರದ ಕೆಲಸಗಳಲ್ಲಿ ಯಶಸ್ವಿಯಾಗುತ್ತಾರೆ. ಉಡುಪು ಮಾರಾಟಗಾರರಿಗೆ ವಿಶೇಷ ದಿನ. ಆರೋಗ್ಯದ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಕರ್ಕಾಟಕ: ನಿಮ್ಮ ವ್ಯಾಪಾರ ವಿಷಯಗಳ ಸಂಬಂಧದಲ್ಲಿ ಕ್ಲಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ನಿಮ್ಮ ಅಂತರಂಗದ ಭಾವನೆಗಳಿಗೆ ಆದ್ಯತೆ ನೀಡಿ. ಮಿತ್ರರ ಭೇಟಿಯಿಂದ ಸಂತಸ. ಸ್ವಂತ ಕೆಲಸವನ್ನು ಜರೂರಾಗಿ ಮಾಡಬೇಕಾಗುತ್ತದೆ.

ಸಿಂಹ: ಸಹೋದರರಲ್ಲಿದ್ದ ಪರಸ್ಪರ ವಿವಾದಗಳು ದೇವತಾನುಗ್ರಹದಿಂದ ಅಂತ್ಯಗೊಳ್ಳಲಿವೆ. ವಿರೋಧಿಗಳ ಜೊತೆಯಲ್ಲಿಯೇ ದಿನದ ಹಲವು ಸಮಯ ಕಳೆಯಬೇಕಾಗುತ್ತದೆ. ಅನ್ಯರ ಸಹಾಯ, ಸಹಕಾರ ಈ ದಿನ ಇಲ್ಲವಾಗುವುದು.

ಕನ್ಯಾ: ಸಿನೆಮಾ ಕಲಾವಿದರಿಗೆ ಸದಾವಕಾಶ. ಸರಳ ಸ್ವಭಾವದಿಂದ ಹೆಚ್ಚಿನ ಮೆಚ್ಚುಗೆಯನ್ನು ಪಡೆಯಬಹುದು. ಮೊದಲು ಪ್ರಯತ್ನ ಸಫಲವಾಗಿದ್ದರಿಂದ ನಿಮ್ಮ ಉತ್ಸಾಹ ಗರಿಗೆದರಿದೆ. ಸಾರಿಗೆ ಉದ್ಯೋಗದವರಿಗೆ ಉತ್ತಮ ದಿನ.

ತುಲಾ: ನಿಮ್ಮ ದೃಢ ನಿರ್ಧಾರದಿಂದ ಹಿಂದಿನ ಕೆಲಸ–ಕಾರ್ಯಗಳೆಲ್ಲವು ಪೂರ್ಣಗೊಳ್ಳಲಿವೆ. ಈ ದಿನದ ಯಾವುದೇ ಕೆಲಸಗಳನ್ನು ಮುಂದಕ್ಕೆ ಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ವೃಶ್ಚಿಕ: ನಿಮಗೆ ಅನುಭವಕ್ಕೆ ಬರುತ್ತಿರುವ ಹಿನ್ನಡೆಗೆ ಪರಿಹಾರವಾಗಿ ಚುರುಕುತನವನ್ನು ಬೆಳೆಸಿಕೊಳ್ಳಿರಿ. ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಂಡಲ್ಲಿ ಮುನ್ನಡೆ ಸಾಧಿಸುವಿರಿ. ಕುಟುಂಬದೊಂದಿಗೆ ಸಂತಸದಿಂದ ಕಾಲ ಕಳೆಯುವಿರಿ.

ಧನು: ನಿಮ್ಮ ಆಸೆಗಳು ಈಡೇರಲಿವೆ. ದಾರಿಹೋಕರ ಟೀಕೆಗಳಿಗೆ ಹೆದರದೆ ಸಕಾರಾತ್ಮಕವಾಗಿ ಮುಂದುವರೆಯಿರಿ. ಗೃಹ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು. ಹೆತ್ತವರೊಂದಿಗೆ ವಾಗ್ವಾದಕ್ಕಿಳಿಯುವುದು ಒಳ್ಳೆಯದಲ್ಲ.

ಮಕರ: ನಿರೀಕ್ಷಿತ ಧನಾಗಮನವಿದ್ದರೂ ಮನೆಯ ಆರ್ಥಿಕ ವಿಷಯಗಳಲ್ಲಿ ಎಚ್ಚರ ವಹಿಸುವುದು ಅಗತ್ಯ. ಅಧ್ಯಯನ ನಿರತರಿಗೆ ಸಹಾಯ ಲಭ್ಯ ಆಗುವುದು. ಆಲಸ್ಯತನ ದೂರ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಶುಭ.

ಕುಂಭ: ದೇಹಕ್ಕೆ ಅತಿಯಾದ ಶ್ರಮವಾದರೂ ಸಾಧಿಸಿದ ಸಂತೋಷ ಇರುವುದು. ಹಣಕಾಸಿನ ವಿಚಾರದಲ್ಲಿ ದಾಕ್ಷಿಣ್ಯದಿಂದ ನಷ್ಟ. ಯಾರಲ್ಲಿಯೂ ಅದರಲ್ಲೂ ಮುಖ್ಯವಾಗಿ ಬಂಧುಗಳಲ್ಲಿ ಆರ್ಥಿಕ ಸಹಾಯ ಕೇಳಬೇಡಿ.

ಮೀನ: ಕೆಲಸಗಳಲ್ಲಿ ಆಸಕ್ತಿ ವೃದ್ಧಿಯಾಗುವುದು. ನಿಮ್ಮಿಂದ ದೂರವಾದರೂ ಪುನಃ ನಿಮ್ಮ ಗುಣಗಳನ್ನು ಅಪೇಕ್ಷಿಸಿ ಹತ್ತಿರವಾಗುತ್ತಾರೆ. ಮಕ್ಕಳ ಯೋಗಕ್ಷೇಮ ನೋಡುವುದನ್ನು ಮರೆಯಬೇಡಿ. ಮದುವೆ ವಿಷಯದಲ್ಲಿ ಒತ್ತಡ ಬರಲಿದೆ.

ಪದಬಂಧ 4904

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಮಂಗಳಕರವಾದ ಸೂಚನೆ (4)
3.ಪುಸ್ತಕದ ಸರ್ಗವು ಪದದಲ್ಲಿದೆ (4)
4.ಮಧುರ ಫಲ ನೀಡುವ ವೃಕ್ಷ (2)
5.ಬಹಳಷ್ಟು ದುಡ್ಡುಳ್ಳವನು (4)
7.ದೆವ್ವವಿಲ್ಲಿ ತಿರುಗಿ ನಿಂತಿದೆಯಲ್ಲ! (2)
8.ಲೋಲುಪನ ಕುಂದು ಕಾಣುತ್ತಿದೆಯೇ? (2)
9.ಹಿಡಿತದಿಂದ ಖರ್ಚು ಮಾಡುವಿಕೆ (4)
11.ನಾರಿಕೇಳ ಹಿಡಿದಿರುವ ಹೆಂಗಸು (2)
13.ಕೊನೆಗೆ ಜಯವಿದ್ದರೂ ಇದು ಸೋಲು (4)
14.ಹೂವಿನಲ್ಲಿನ ಸಿಹಿ ರಸ (4)

ಮೇಲಿಂದ ಕೆಳಕ್ಕೆ

1.ಪ್ರವೇಶಿಸಲು ಅಶಕ್ಯವಾದುದು (2)
2.ಗುಡಿಸಲು ಇಲ್ಲಿದೆ (3)
3.ಈ ಪರಿ ಕಾಣುತ್ತಿರುವ ಅಳತೆ (4)
4.ಏನೂ ಬೆಳೆಯದ ಬಂಜರುನೆಲ (4)
5.ನೆರೆಯವನ ಯೌವ್ವನ! (3)
6.ಈಕೆ ತೆಳ್ಳಗಿನ ಸೊಂಟದವಳು (4)
10.ಸಾವಯವ ಬೇಸಾಯ (4)
11.ನಾವಿಕನ ಮೂಗು! (3)
12.ಮುನಿದವ ವ್ಯಕ್ತ ಪಡಿಸಿರುವ ಸಂತೋಷ! (2)



4903ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಜಾರಿ 2.ವಾಗಾಡಂಬರ 4.ಸಾಕ್ಷಾತ್ಕಾರ 6.ಹಸುಳೆ 7.ತಮ 9.ದಿಕ್ಸೂಚಿ 11.ತುಸು 13.ಜವಳಿ 14.ಕಲಿಯುಗ 15.ಜಗಳಗಂಟ 16.ನಿಸರ್ಗ

ಮೇಲಿಂದ ಕೆಳಕ್ಕೆ: 1.ಅಹಿಂಸಾವ್ರತ 3.ಬಳಸುಮಾತು 5.ರಶೀದಿ 8.ಮದುವಣಗಿ 10.ಚಿಲಕ 12.ಸುರಂಗಮಾರ್ಗ

ಸುಡೊಕು 5290

		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1	3				
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5289 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

400 ಮಂದಿ ಆಶ್ರಯ ಪಡೆದಿದ್ದ ಕಲಾ ಶಾಲೆ, ಇಂಧನ ಸಂಗ್ರಹಾಗಾರ, ವಿಶೇಷ ಪಡೆಗಳ ಸೇನಾ ನೆಲೆ ಧ್ವಂಸ

ಕಿಂಜಾಲ್ ಹೈಪರ್‌ಸಾನಿಕ್, ಕಲಿಬ್ ಕ್ಷಿಪಣಿ ದಾಳಿ

ಮಾಸ್ಕೊ, ಲುವಿವ್ (ಎಪಿ): ಉಕ್ರೇನ್ ಮೇಲೆ ವಿಶೇಷ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ರಷ್ಯಾ ಶನಿವಾರವಷ್ಟೇ ಉಕ್ರೇನ್‌ನ ಶಸ್ತ್ರಾಸ್ತ್ರಗಳ ಸಂಗ್ರಹದ ನೆಲ ಮಾಳಿಗೆ ಗೋದಾಮನ್ನು ಹೈಪರ್ ಸಾನಿಕ್ 'ಕಿಂಜಾಲ್' ಕ್ಷಿಪಣಿಯಿಂದ ಧ್ವಂಸ ಮಾಡಿತ್ತು. ಭಾನುವಾರ ಮತ್ತೆ 'ಕಿಂಜಾಲ್' ಮತ್ತು ಕ್ರೂಸ್ ಕ್ಷಿಪಣಿಗಳ ಸರಣಿ ದಾಳಿ ಮುಂದುವರಿಸಿರುವ ರಷ್ಯಾ, ಸುಮಾರು 400 ಜನರು ಆಶ್ರಯ ಪಡೆದಿದ್ದ ಉಕ್ರೇನಿನ ಮರಿಯುಪೊಲ್ ನಗರದ ಕಲಾ ಶಾಲೆಯ ಕಟ್ಟಡ, ಪ್ರಮುಖ ಇಂಧನ ಸಂಗ್ರಹಾಗಾರ ಹಾಗೂ ಸೇನಾ ನೆಲೆಯೊಂದನ್ನು ನಾಶಪಡಿಸಿದೆ.

ಉಕ್ರೇನಿನ ಸೇನಾ ಸೌಲಭ್ಯಗಳ ಮೇಲೆ ದೂರಗಾಮಿಯ ಹೈಪರ್‌ಸಾನಿಕ್ ಮತ್ತು ಕ್ರೂಸ್ ಕ್ಷಿಪಣಿಗಳಿಂದ ಹೊಸ ಸರಣಿ ದಾಳಿ ನಡೆಸಲಾಗಿದೆ ಎಂದು ರಷ್ಯಾ ಸೇನೆ ಹೇಳಿದೆ.

ಶಾಲಾ ಕಟ್ಟಡ ಸಂಪೂರ್ಣ ಧ್ವಂಸಗೊಂಡಿದೆ. ಅವಶೇಷಗಳಡಿ ಸಿಲುಕಿರುವವರ ರಕ್ಷಣೆಗೆ ತುರ್ತು ಸೇವೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸದ್ಯಕ್ಕೆ ಗಾಯಾಳು ಮತ್ತು ಮೃತಪಟ್ಟವರ ಅಂದಾಜು ಸಿಕ್ಕಿಲ್ಲ ಎಂದು ಉಕ್ರೇನ್ ಸ್ಥಳೀಯ ಅಧಿಕಾರಿಗಳು ಹೇಳಿದ್ದಾರೆ.

ರಷ್ಯಾದಿಂದ ಕಿಂಜಾಲ್ ಕ್ಷಿಪಣಿ ದಾಳಿ ಸತತ ಎರಡು ದಿನಗಳಿಂದ ನಡೆಯುತ್ತಿದೆ. ಈ ಕ್ಷಿಪಣಿ ಸುಮಾರು 2 ಸಾವಿರ ಕಿ.ಮೀ (1,250 ಮೈಲು) ದೂರದ ಗುರಿಗಳನ್ನು ಶಬ್ದದ 10 ಪಟ್ಟು ವೇಗದಲ್ಲಿ ತಲುಪುವ ಸಾಮರ್ಥ್ಯ ಹೊಂದಿದೆ. ಜತೆಗೆ ಅಣ್ವಸ್ತ್ರಗಳನ್ನು ಕೊಂಡೊಯ್ಯುವ ಸಾಮರ್ಥ್ಯವೂ ಇದಕ್ಕಿದೆ. ಈ ಕ್ಷಿಪಣಿಯನ್ನು ಮಿಗ್–31 ಯುದ್ಧ ವಿಮಾನದಿಂದ ಉಡಾಯಿಸಲಾಗಿದೆ ಎನ್ನಲಾಗಿದೆ.

ಕೀವ್ ನಗರದಲ್ಲಿ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ ಅಪಾರ್ಟ್‌ಮೆಂಟ್ ಛಿದ್ರಗೊಂಡಿದೆ. ಅಳಿದುಳಿದ ವಸ್ತುಗಳಿಗೆ ನಿವಾಸಿಗಳು ಹುಡುಕಾಟ ನಡೆಸಿದರು.– ಎಎಫ್‌ಪಿ ಚಿತ್ರ

ಮೈಕೊಲೈವ್‌ನ ಕಪ್ಪು ಸಮುದ್ರದ ಬಂದರು ಸಮೀಪದ ಕೋಸ್ಟಿಯಾಂಟಿನಿವ್‌ಕಾದಲ್ಲಿರುವ ಉಕ್ರೇನ್‌ನ ಬೃಹತ್ ಇಂಧನ ಸಂಗ್ರಹಾಗಾರವನ್ನು ಯುದ್ಧ ನೌಕೆಯಿಂದ ಉಡಾಯಿಸಿದ 'ಕಲಿಬ್' ಕ್ರೂಸ್ ಕ್ಷಿಪಣಿಗಳು ಧ್ವಂಸ ಮಾಡಿವೆ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೊರ್ ಕೊನಶೆಂಕವ್ ಹೇಳಿದ್ದಾರೆ.

ಇನ್ನು ಕಪ್ಪು ಸಮುದ್ರದಿಂದ ಉಡಾವಣೆ ಮಾಡಿದ ಕಲಿಬ್ ಕ್ಷಿಪಣಿಗಳು ಉತ್ತರ ಉಕ್ರೇನ್‌ನ ಚೆರ್ನಿವ್ ಪ್ರದೇಶದ ನಿದಿನ್‌ನಲ್ಲಿರುವ ಶಸ್ತ್ರಾಸ್ತ್ರಗಳ ದುರಸ್ತಿ ಘಟಕವನ್ನು ನಾಶ ಮಾಡಿವೆ. ವಾಯು ಉಡಾವಣೆ ಕ್ಷಿಪಣಿಗಳ ಮತ್ತೊಂದು ದಾಳಿಯಲ್ಲಿ ವಿದೇಶಿ ಸೈನಿಕರು ಮತ್ತು ಉಕ್ರೇನಿನ ವಿಶೇಷ ಪಡೆಗಳು ನೆಲೆಗೊಂಡಿರುವ ಉತ್ತರ ಜೈಟೊಮಿರ್ ಪ್ರದೇಶದ ಔರುಕ್‌ನ ಸೇನಾ ನೆಲೆಯನ್ನು ಧ್ವಂಸಗೊಳಿಸಲಾಗಿದೆ ಎಂದಿದ್ದಾರೆ.

ಪಶ್ಚಿಮ ಉಕ್ರೇನ್‌ನ ಕಾರ್ಪಾಥಿಯನ್ ಪರ್ವತಗಳ ತಪ್ಪಲಿನ ಡಿಲ್ಯಾಟಿನ್ ಗ್ರಾಮದಲ್ಲಿದ್ದ ಉಕ್ರೇನ್ ಸೇನೆಯ ಶಸ್ತ್ರಾಸ್ತ್ರ ಮತ್ತು ಕ್ಷಿಪಣಿಗಳ ಸಂಗ್ರಹದ ನೆಲಮಾಳಿಗೆಯ ಗೋದಾಮು ನಾಶಪಡಿಸಲು ಕಿಂಜಾಲ್ ಕ್ಷಿಪಣಿಯನ್ನು ರಷ್ಯಾ ಪಡೆಗಳು ಮೊದಲ ಬಾರಿಗೆ ಬಳಸಿದ್ದವು.

ಝೆಲೆನ್‌ಸ್ಕಿ ಕಿಡಿ: 'ಕಲಾ ಶಾಲೆಯ ಮೇಲೆ ರಷ್ಯಾದ ಸೇನೆ ಬಾಂಬ್ ದಾಳಿ ನಡೆಸಿದೆ. ರಷ್ಯಾದ ಪಡೆಗಳು ನಿರಂತರ ಆಕ್ರಮಣದಲ್ಲಿ ಯುದ್ಧಾಪರಾಧಗಳನ್ನು ಎಸಗುತ್ತಿದ್ದು, ರಷ್ಯಾವು ಇತಿಹಾಸದ ಪುಟದಲ್ಲಿ ಅಧೋಗತಿಗೆ ಇಳಿಯಲಿದೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆಕ್ರೋಶ ಹೊರಹಾಕಿದ್ದಾರೆ.

ಅಮೆರಿಕದಿಂದಲೂ ಹೈಪರ್‌ಸಾನಿಕ್ ಕ್ಷಿಪಣಿ ಅಭಿವೃದ್ಧಿ

ಪೋರ್ಟ್‌ಲ್ಯಾಂಡ್ (ಎಪಿ): ಹೈಪರ್‌ಸಾನಿಕ್ ಶಸ್ತ್ರಾಸ್ತ್ರಗಳ ಅಭಿವೃದ್ಧಿಯಲ್ಲಿ ಈವರೆಗೆ ರಷ್ಯಾಕ್ಕಿಂತ ಹಿಂದೆ ಉಳಿದಿದ್ದ ಅಮೆರಿಕ ಇದೀಗ ತನ್ನ ಮೊದಲ ಹೈಪರ್‌ಸಾನಿಕ್ ಕ್ಷಿಪಣಿ ಅಭಿವೃದ್ಧಿಗೆ ಸಿದ್ಧತೆ ನಡೆಸಿದ್ದು, ಮುಂದಿನ ವರ್ಷದ ಒಳಗಾಗಿ ಯುದ್ಧ ನೌಕೆಗೆ ಈ ಕ್ಷಿಪಣಿ ಅಳವಡಿಸುವ ಯೋಜನೆ ಹೊಂದಿದೆ ಎಂದು ಹೇಳಿದೆ. ಖಂಡಾಂತರ ಕ್ಷಿಪಣಿಗಳ ರೀತಿಯೇ ವೇಗವಾಗಿ ಚಲಿಸುವ ಹೈಪರ್ ಸಾನಿಕ್ ಕ್ಷಿಪಣಿಗಳ ಅಭಿವೃದ್ಧಿಯಲ್ಲಿ ಚೀನಾ ಮತ್ತು ರಷ್ಯಾ ದೇಶಗಳ ಜತೆ ಅಮೆರಿಕ ಪೈಪೋಟಿಗೆ ಇಳಿದಿದೆ.

ರಷ್ಯಾ ದಾಳಿ: 6,623 ನಾಗರಿಕರ ಸ್ಥಳಾಂತರ

ಮರಿಯುಪೊಲ್ (ಎಪಿ): ಯುದ್ಧಪೀಡಿತ ಉಕ್ರೇನ್‌ನ ನಗರಗಳಲ್ಲಿರುವ ಜನರನ್ನು ಎಂಟು ಮಾನವ ಕಾರಿಡಾರ್‌ಗಳ ಮೂಲಕ ಒಟ್ಟು 6,623 ಮಂದಿಯನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಮರಿಯುಪೊಲ್‌ನಿಂದಲೇ 4,128 ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಉಕ್ರೇನ್ ಉಪ ಪ್ರಧಾನಿ ಇರೀನಾ ವರೆಶ್‌ಚುಕ್ ಹೇಳಿದ್ದಾರೆ.

ಬಂದರು ಸಿಟಿ ಮರಿಯುಪೊಲ್ ಸೇರಿದಂತೆ ಮತ್ತಿತ್ತರ ನಗರಗಳಲ್ಲಿ ರಷ್ಯಾ ಪಡೆಗಳು ಬಿರುಸಿನ ದಾಳಿಯನ್ನು ಮುಂದುವರಿಸಿದೆ. ಹೀಗಾಗಿ ಅಲ್ಲಿನ ಉಕ್ಕಿನ ಘಟಕವನ್ನು ಮುಚ್ಚಲಾಗಿದೆ.

ಮಕ್ಕಳು ಮತ್ತು ಹಿರಿಯ ನಾಗರಿಕರು ಅಸುನೀಗುತ್ತಿದ್ದಾರೆ. ನಗರವನ್ನು ಪೂರ್ತಿಯಾಗಿ ನಾಶ ಮಾಡಲಾಗಿದೆ. ಭೂಮಿಯಿಂದ ಈ ನಗರವನ್ನೇ ಅಳಿಸಿ ಹಾಕಲಾಗಿದೆಯೆಂದು ಮರಿಯುಪೊಲ್ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಅಲ್ಲದೆ ಮರಿಯುಪೊಲ್ ನಗರದ ಜನರನ್ನು ರಷ್ಯಾದಲ್ಲಿ ನೆಲೆಸುವಂತೆ ರಷ್ಯಾದ ಯೋಧರು ಬಲವಂತಪಡಿಸುತ್ತಿದ್ದಾರೆ ಎಂದು ಮರಿಯುಪೊಲ್ ನಗರದ ಕೌನ್ಸಿಲ್ ದೂರಿದೆ.

ಉಕ್ರೇನ್‌ನಲ್ಲಿ ರಷ್ಯಾ ಜತೆಗಿನ ಸಂಬಂಧದ 11 ಪಕ್ಷಗಳ ಅಮಾನತು

ಕೀವ್(ಎಪಿ): ರಷ್ಯಾ ಜತೆ ಸಂಪರ್ಕ ಹೊಂದಿರುವ ದೇಶದ 11 ರಾಜಕೀಯ ಪಕ್ಷಗಳ ಎಲ್ಲ ಕಾರ್ಯ ಚಟುವಟಿಕೆಗಳನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅಮಾನತುಗೊಳಿಸಿ, ಆದೇಶ ಹೊರಡಸಿದ್ದಾರೆ.

ದೇಶದ ಜನರನ್ನುದ್ದೇಶಿಸಿ ಬಿಡುಗಡೆ ಮಾಡಿರುವ ವಿಡಿಯೊ ಸಂದೇಶದಲ್ಲಿ ಅವರು, ರಷ್ಯಾ ಜತೆ ಸಂಪರ್ಕ ಹೊಂದಿರುವ ರಾಜಕೀಯ ಪಕ್ಷಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಘೋಷಿಸಿದ್ದಾರೆ.

ದೇಶದ ಸಂಸತ್ತಿನ ಒಟ್ಟು 450 ಸದಸ್ಯರ ಪೈಕಿ 44 ಸದಸ್ಯರನ್ನು ಹೊಂದಿರುವ ವಿರೋಧ ಪಕ್ಷ ಸೇರಿದಂತೆ ಇತರ ಪಕ್ಷಗಳನ್ನು ಅಮಾನತು ಮಾಡಲಾಗಿದೆ.

25ನೇ ದಿನದ ಬೆಳವಣಿಗೆಗಳು

- ಮರಿಯುಪೊಲ್ ನಗರದ ಮೇಲೆ ರಷ್ಯಾ ಪಡೆಗಳು, ಭೂಸೇನೆ, ವಾಯುಪಡೆ ಹಾಗೂ ನೌಕಾಪಡೆಗಳಿಂದ ಏಕ ಕಾಲಕ್ಕೆ ರಾಕೆಟ್ ಮತ್ತು ಬಾಂಬ್‌ಗಳ ಸುರಿಮಳೆ ಗರೆಯುತ್ತಿವೆ
- ಮೈಕೊಲೈವ್ ನಗರದ ಸೇನಾ ಶಿಬಿರಗಳ ಮೇಲೆ ರಷ್ಯಾ ನಡೆಸಿದ ವೈಮಾನಿಕ ದಾಳಿಗೆ ಕನಿಷ್ಠ 40 ಮಂದಿ ನೌಕಾಪಡೆ ಸಿಬ್ಬಂದಿ ಹತರಾಗಿದ್ದಾರೆ
- ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಮತ್ತೊಮ್ಮೆ ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ಯುದ್ಧ ನಿಲ್ಲಿಸಿ, ನೇರ ಮಾತುಕತೆಗೆ ಬರಲು ಒತ್ತಾಯಿಸಿದ್ದಾರೆ
- ಲುಹಾನ್ಸ್ಕ್ ಪ್ರದೇಶದ ಕ್ರೆಮಿನ್ನಾ ನಗರದಲ್ಲಿ ಹಿರಿಯ ನಾಗರಿಕರಿದ್ದ ಮನೆಗಳ ಮೇಲೆ ರಷ್ಯಾ ಪಡೆಗಳು ನಡೆಸಿದ ದಾಳಿಗೆ ಮಾರ್ಚ್ 11ರಿಂದ ಈವರೆಗೆ 56 ನಾಗರಿಕರು ಹತರಾಗಿದ್ದಾರೆ
- ಯುದ್ಧಪೀಡಿತ ನಗರಗಳಲ್ಲಿ 10 ಮಾನವೀಯ ಕಾರಿಡಾರ್‌ಗಳ ಪೈಕಿ ಎಂಟರಲ್ಲಿ ಶನಿವಾರ 6,623 ಜನರನ್ನು ಸ್ಥಳಾಂತರಿಸಲಾಯಿತು.
- ಉಕ್ರೇನ್‌ನಲ್ಲಿ ಈವರೆಗೆ 902 ನಾಗರಿಕರು ಮೃತಪಟ್ಟದ್ದಾರೆ– ವಿಶ್ವಸಂಸ್ಥೆ
- ಉಕ್ರೇನ್‌ನಲ್ಲಿ ಈವರೆಗೆ ಒಂದು ಕೋಟಿ ಜನರು ನಿರಾಶ್ರಿತರಾಗಿದ್ದಾರೆ– ವಿಶ್ವಸಂಸ್ಥೆ ನಿರಾಶ್ರಿತರ ಏಜೆನ್ಸಿ ಮುಖ್ಯಸ್ಥ ಫಿಲಿಪ್ಪೊ ಗ್ರಾಂಡಿ
- ನ್ಯಾಟೊದ ವಿಸ್ತರಣಾವಾದದಂತೆಯೇ ಅಮೆರಿಕದ ಇಂಡೋ-ಪೆಸಿಫಿಕ್ ತಂತ್ರಗಾರಿಕೆಯು 'ಅಪಾಯಕಾರಿ' –ಚೀನಾ ಆತಂಕ
- ರಷ್ಯಾದ ವಿರುದ್ಧ ಟೀಕಾ ಪ್ರಹಾರ ಮುಂದುವರಿಸಿರುವ ಪೋಪ್ ಫ್ರಾನ್ಸಿಸ್, ಉಕ್ರೇನ್‌ನಲ್ಲಿನ ಸಂಘರ್ಷ ಅಸಮಂಜಸ. ಹೀನ ಹತ್ಯಾಕಾಂಡ ಮತ್ತು ಅಸಹ್ಯಕರ ಯುದ್ಧ ತಕ್ಷಣ ನಿಲ್ಲಿಸಬೇಕೆಂದು ಪುಟಿನ್‌ಗೆ ಒತ್ತಾಯಿಸಿದ್ದಾರೆ
- ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಚೀನಾ ರಷ್ಯಾ ಪರವಿರುವ ಸೂಚನೆ ಕಾಣಿಸುತ್ತಿದೆ. ಆದರೆ, ಉಕ್ರೇನ್ ಪರ ನಿಲ್ಲಬೇಕು ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಚೀನಾಕ್ಕೆ ಕಠಿಣ ಸಂದೇಶ ರವಾನಿಸಿದ್ದಾರೆ
- ಉಕ್ರೇನ್ ಬಿಕ್ಕಟ್ಟಿನಲ್ಲಿ ಭಾರತದ ನಿಲುವನ್ನು ಕ್ವಾಡ್ ರಾಷ್ಟ್ರಗಳು ಒಪ್ಪಿವೆ. ಸಂಘರ್ಷ ಕೊನೆಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸಂಪರ್ಕಗಳನ್ನು ಬಳಸುತ್ತಿರುವುದು ಸ್ಪಷ್ಟವಾಗಿದೆ– ಆಸ್ಟ್ರೇಲಿಯಾ ಹೇಳಿಕೆ
- ಉಕ್ರೇನ್ ನೆಲದಲ್ಲಿ ಯೋಧರ ಕೊರತೆಯಿಂದಾಗಿ ರಷ್ಯಾ ಈಗ ವೈಮಾನಿಕ ಮತ್ತು ಕ್ಷಿಪಣಿ ದಾಳಿಗೆ ಒತ್ತು ನೀಡುತ್ತಿದೆ –ಬ್ರಿಟನ್ ಸಚಿವಾಲಯ
- ರಷ್ಯಾ ಪರವಾಗಿ ಉಕ್ರೇನ್ ನೆಲದಲ್ಲಿ ಯುದ್ಧಮಾಡಲು ಸಿರಿಯಾ ಪಡೆಗಳು ಸಿದ್ಧ. ಪುಟಿನ್ ಅನುಮತಿಗೆ ಕಾಯುತ್ತಿದ್ದೇವೆ– ಸಿರಿಯಾ ಸಂಸದೀಯ ರಕ್ಷಾ ಪಡೆಗಳ ಕಮಾಂಡರ್ (ಎನ್‌ಡಿಎಫ್) ನಬಿಲ್ ಅಬ್ದುಲ್ಲಾ ಹೇಳಿಕೆ
- ಅಣ್ವಸ್ತ್ರ ಪಡೆಯ ತಾಲೀಮನ್ನು ಬೇರೆ ದೇಶಕ್ಕೆ ಸ್ಥಳಾಂತರಿಸುವ ಪುಟಿನ್ ಯೋಜನೆಯ ರಹಸ್ಯವನ್ನು ತಮ್ಮ ಸೇನೆಯ ಉನ್ನತ ಜನರಲ್ ಒಬ್ಬರು ಬಹಿರಂಗಪಡಿಸಿದ್ದರಿಂದ ಪುಟಿನ್ ಹತಾಶರಾಗಿದ್ದು, ತಮ್ಮ ಕುಟುಂಬವನ್ನು ಸರ್ಬಿಯಾದ ಸುರಕ್ಷಿತ ಭೂಗತ ತಾಣಕ್ಕೆ ಕಳುಹಿಸಿದ್ದಾರೆ ಎಂದು 'ದಿ ಡೈಲಿ ಮೇಲ್' ವರದಿ ಮಾಡಿದೆ.
- ರಷ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸುತ್ತಿಲ್ಲ ಎಂದು ಅಮೆರಿಕದಲ್ಲಿರುವ ಚೀನಾದ ರಾಯಭಾರಿ ಭಾನುವಾರ ಹೇಳಿದ್ದಾರೆ.
- ರಷ್ಯಾದ ನೌಕಾಪಡೆಯ ಹಿರಿಯ ಕಮಾಂಡರ್ ಉಕ್ರೇನ್‌ನಲ್ಲಿ ಕೊಲ್ಲಲ್ಪಟ್ಟಿದ್ದಾರೆ ಎಂದು ಲಂಡನ್‌ನ ಸೆವಾಸ್ತೊಪೋಲ್ ಗವರ್ನರ್ ಭಾನುವಾರ ಹೇಳಿದ್ದಾರೆ.

ಪಂಜಾಬ್: ಎಎಪಿ ನೂತನ ಶಾಸಕರ ಜತೆ ಕೇಜ್ರಿವಾಲ್ ಸಂವಾದ

ಕೆಲಸ ಮಾಡದಿದ್ದರೆ ತಲೆದಂಡ: ಎಚ್ಚರಿಕೆ

ಚಂಡೀಗಡ (ಪಿಟಿಐ): 'ಉತ್ತಮವಾಗಿ ಕೆಲಸ ಮಾಡಿ, ಇಲ್ಲದಿದ್ದರೆ ತಲೆದಂಡಕ್ಕೆ ಸಿದ್ಧರಾಗಿ' – ಪಂಜಾಬ್ ಸರ್ಕಾರದ ನೂತನ ಸಚಿವರಿಗೆ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಹೇಳಿದ ಮಾತಿದು.

ಪಂಜಾಬ್ ವಿಧಾನಸಭೆಗೆ ಪಕ್ಷದಿಂದ ಆಯ್ಕೆಯಾಗಿರುವ ನೂತನ ಶಾಸಕರ ಜತೆ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಭಾನುವಾರ ಮಾತನಾಡಿದರು. ರಾಜ್ಯದ ಜನರ ಶ್ರೇಯೋಭಿವೃದ್ಧಿಗಾಗಿ ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡುವಂತೆ ಶಾಸಕರಿಗೆ ಕರೆ ಕೊಟ್ಟರು.

'ಮುಖ್ಯಮಂತ್ರಿ ಭಗವಂತ ಮಾನ್ ಅವರು ಎಲ್ಲ ಸಚಿವರಿಗೂ ಅವರು ಮಾಡಬೇಕಾದ ಕೆಲಸಗಳ ಬಗ್ಗೆ ಗುರಿ ನಿಗದಿಪಡಿಸಲಿದ್ದಾರೆ. ದಿನದ ಇಪ್ಪತ್ನಾಲ್ಕು ಗಂಟೆಯೂ ಸಚಿವರು ಕೆಲಸ ಮಾಡಬೇಕು. ನಿಗದಿಪಡಿಸಿರುವ ಗುರಿಯನ್ನು ಮುಟ್ಟಲು ಸಚಿವರು ವಿಫಲವಾದರೆ, ಸಚಿವರನ್ನು ಬದಲಿಸಿ ಎಂದು ಜನರು ಹೇಳಲು ಶುರು ಮಾಡುತ್ತಾರೆ. ಹೀಗಾಗಿ ಮಾನ್ ಅವರು ಕೊಟ್ಟಿರುವ ಕೆಲಸವನ್ನು ಮಾಡಿ ಮುಗಿಸಲೇಬೇಕು' ಎಂದು ಕೇಜ್ರಿವಾಲ್ ಹೇಳಿದರು.

ಯಾರ ಬಗ್ಗೆಯೂ ಆಕ್ಷೇಪಾರ್ಹ ಭಾಷೆ ಬಳಸದಂತೆ, ಒರಟಾಗಿ ನಡೆದುಕೊಳ್ಳದಂತೆ ಅವರು ಶಾಸಕರಿಗೆ ಸಲಹೆ ನೀಡಿದ್ದಾರೆ. ತಮ್ಮ ಕೆಲಸಗಳ ಮೂಲಕ ಜನರ ಹೃದಯವನ್ನು ಗೆಲ್ಲುವಂತೆ ಕರೆ ನೀಡಿದ ಅವರು, ಶಾಸಕರು ತಪ್ಪು ಮಾಡಿದ್ದಾರೆ ಎಂಬುದು ಕಂಡುಬಂದರೆ 'ಕಠಿಣ ಕ್ರಮ' ತೆಗೆದುಕೊಳ್ಳುವ ಎಚ್ಚರಿಕೆ ನೀಡಿದರು.

'ನಾನು ಏನನ್ನಾದರೂ ಸಹಿಸಿಕೊಳ್ಳಬಲ್ಲೆ. ಆದರೆ ಅವಿಧೇಯತೆ ಹಾಗೂ ಸಾರ್ವಜನಿಕರ ಹಣಕ್ಕೆ ಕನ್ನ ಹಾಕುವುದನ್ನು ಸಹಿಸಿಕೊಳ್ಳುವುದಿಲ್ಲ. ಯಾರಾದರೂ ತಪ್ಪು ಮಾಡಿರುವುದು ನನ್ನ ಅಥವಾ ಮಾನ್ ಅವರ ಗಮನಕ್ಕೆ ಬಂದರೆ, ಒಂದು ಅವಕಾಶವನ್ನೂ ನೀಡುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದರು.

'ಚುನಾವಣೆಯಲ್ಲಿ ಇತರ ಪಕ್ಷಗಳ ದೊಡ್ಡ ವ್ಯಕ್ತಿಗಳು ಸೋತಿದ್ದಾರೆ. ಅವರನ್ನು ಸೋಲಿಸಿದ್ದು ನೀವಲ್ಲ. ಜನ ಅವರನ್ನು ಸೋಲಿಸಿದ್ದಾರೆ. ಅಣ್ಣನ ಸ್ಥಾನದಲ್ಲಿ ನಿಂತು ನಿಮಗೆ ಮಾರ್ಗದರ್ಶನ ನೀಡುತ್ತೇನೆ. ಅಧಿಕಾರಿಗಳ ವರ್ಗಾವಣೆ ಮಾಡಿಸಲು ಸಚಿವರ ಅಥವಾ ಮುಖ್ಯಮಂತ್ರಿಯ ಕಚೇರಿಗೆ ಹೋಗಬೇಡಿ' ಎಂದು ಕೇಜ್ರಿವಾಲ್ ಹೇಳಿದರು.

25 ಸಾವಿರ ಸರ್ಕಾರಿ ನೌಕರರ ನೇಮಕ ಹಾಗೂ ಮಾಜಿ ಜನಪ್ರತಿನಿಧಿಗಳಿಗೆ ನೀಡಲಾಗಿದ್ದ ಭದ್ರತೆಯನ್ನು ವಾಪಸ್ ಪಡೆಯುವ ಮಾನ್ ಅವರ ನಿರ್ಧಾರಗಳನ್ನು ಕೇಜ್ರಿವಾಲ್ ಪ್ರಶಂಸಿಸಿದರು. ಕಳೆದ ಮೂರು ದಿನಗಳಲ್ಲಿ ಮಾನ್ ಅವರು ದೃಢ ನಿರ್ಧಾರಗಳನ್ನು ತೆಗೆದುಕೊಂಡು ಗಮನ ಸೆಳೆದಿದ್ದಾರೆ. ಅವರ ಬಗ್ಗೆ ಹೆಮ್ಮೆ ಎನಿಸುತ್ತಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಎಎಪಿ ಸರ್ಕಾರ ರಚನೆಯಾದ ಬಳಿಕ ಶಾಸಕರ ಜೊತೆ ಮೊದಲ ಬಾರಿಗೆ ಮಾತುಕತೆ ನಡೆಸಿದ ಅವರು, ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡುವಂತೆ ಕರೆ ನೀಡಿದರು. 'ಜನರು ಪಕ್ಷದ ಮೇಲೆ ನಂಬಿಕೆ ಇರಿಸಿದ್ದು, ಅವರ ಆಶೋತ್ತರಗಳನ್ನು ಈಡೇರಿಸುವುದು ನಮ್ಮ ಜವಾಬ್ದಾರಿ' ಎಂದರು. 'ನಾವು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು' ಎಂದು ಪ್ರಚಾರದ ವೇಳೆ ಕರೆ ನೀಡಿದ್ದನ್ನು ಕೇಜ್ರಿವಾಲ್ ನೆನಪಿಸಿದರು.

'ವೈಯಕ್ತಿಕ ಅಭಿಲಾಷೆಗಳನ್ನು ಬದಿಗಿರಿಸಿ, ಒಂದು ತಂಡವಾಗಿ ನಾವು ಕೆಲಸ ಮಾಡಿದರೆ, ರಾಜ್ಯ ಅಭಿವೃದ್ಧಿಯಾಗಲಿದೆ. ಮಾನ್ ಅವರು ಈ ತಂಡದ ನಾಯಕರಾಗಿದ್ದಾರೆ' ಎಂದು ಅವರು ಹೇಳಿದರು. ಮಾನ್ ಅವರು ಘೋಷಿಸಿರುವ ಭ್ರಷ್ಟಾಚಾರ ತಡೆ ಸಹಾಯವಾಣಿಗೆ ಸಾಮಾಜಿಕ ಜಾಲತಾಣಗಳಲ್ಲಿ ಉತ್ತಮ ಸ್ಪಂದನೆ ಸಿಕ್ಕಿದೆ ಎಂದರು.

ಕೇಜ್ರಿವಾಲ್ ಅವರ ಜೊತೆ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಿದ್ದ ಪಂಜಾಬ್‌ನ ಎಎಪಿ ಶಾಸಕರು–ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ 2022

ನಾನೀಗ ಶಾಸಕನಾಗಿದ್ದೇನೆ. ಮುಂದೆ ಸಚಿವನಾಗುತ್ತೇನೆ, ಮುಖ್ಯಮಂತ್ರಿ ಯಾಗುತ್ತೇನೆ ಎಂದುಕೊಳ್ಳಬೇಡಿ. ಇಂತಹ ಆಲೋಚನೆಗಳು ನಿಮ್ಮ ಮನಸ್ಸಲ್ಲಿ ಬರಬಾರದು

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ

ರಾಜಸ್ಥಾನದ ಮೇಲೆ ಎಎಪಿ ಕಣ್ಣು

ಜೈಪುರ: ಮುಂದಿನ ವರ್ಷ ನಡೆಯಲಿರುವ ರಾಜಸ್ಥಾನ ವಿಧಾನಸಭೆ ಚುನಾವಣೆ ಮೇಲೆ ಗಮನ ಹರಿಸಿರುವ ಆಮ್ ಆದ್ಮಿ ಪಕ್ಷ, ಇದೇ 26, 27ರಂದು ಎರಡು ದಿನಗಳ ಸಮಾವೇಶ ಹಮ್ಮಿಕೊಂಡಿದೆ. ರಾಜಸ್ಥಾನದಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸುವುದು ಇದರ ಉದ್ದೇಶ.

ಪಕ್ಷದ ರಾಜಸ್ಥಾನ ಘಟಕದ ಉಸ್ತುವಾರಿ ಹಾಗೂ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರು ಎರಡು ದಿನಗಳ ಸಮಾವೇಶದಲ್ಲಿ, ಪಕ್ಷದ ಯೋಜನೆಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಮಾರ್ಗಗಳ ಬಗ್ಗೆ ಸಮಾಲೋಚನೆ ನಡೆಸಲಿದ್ದಾರೆ. 'ವಿಜಯ ಉತ್ಸವ' ಹೆಸರಿನಲ್ಲಿ ಕಾರ್ಯಕ್ರಮ ನಡೆಯಲಿದೆ.

ಗೋವಾ: ಬಿಜೆಪಿಯಿಂದ ಹಕ್ಕು ಮಂಡನೆ ಇಂದು

ಪಣಜಿ (ಪಿಟಿಐ): ಗೋವಾ ರಾಜ್ಯಪಾಲ ಶ್ರೀಧರನ್ ಪಿಳ್ಳೈ ಅವರನ್ನು ಸೋಮವಾರ ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸದಾನಂದ ಶೇಟ್ ತಾನಾವಡೆ ಅವರು ಭಾನುವಾರ ಹೇಳಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ಬಹುನಿರೀಕ್ಷಿತ ಸಭೆ ಸೋಮವಾರ ಸಂಜೆ 4 ಗಂಟೆಗೆ ನಿಗದಿಯಾಗಿದೆ. ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಡೆಯಲಿದೆ. ಶಾಸಕಾಂಗ ಪಕ್ಷದ ನಾಯಕ ಮುಂದಿನ ಮುಖ್ಯಮಂತ್ರಿಯಾಗಲಿದ್ದಾರೆ. ರಾಜ್ಯಪಾಲರ ಭೇಟಿಯ ಬಳಿಕ ಹೊಸ ಸರ್ಕಾರದ ಪ್ರಮಾಣವಚನದ ದಿನಾಂಕ ನಿಗದಿ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ. ಬಿಜೆಪಿ ವೀಕ್ಷಕ ನರೇಂದ್ರ ಸಿಂಗ್ ತೋಮರ್, ಸಹ ವೀಕ್ಷಕ ಎಲ್. ಮುರುಗನ್, ಗೋವಾ ಚುನಾವಣಾ ಉಸ್ತುವಾರಿ ದೇವೇಂದ್ರ ಫಡಣವೀಸ್, ರಾಜ್ಯ ಉಸ್ತುವಾರಿ ಸಿ.ಟಿ. ರವಿ ಅವರು ಶಾಸಕಾಂಗ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಗಣಿತಶಾಸ್ತ್ರ ಟಿಪ್ಸ್
ಮಂದಾರ್ ಹುಕ್ಕೇರಿ
ಗಣಿತಶಾಸ್ತ್ರ ಉಪನ್ಯಾಸಕರು, ಕಲಬುರಗಿ
ಸಂಜೆ 4 ರಿಂದ 6 ರವರೆಗೆ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9,
ಸಂಪಾದಕೀಯ: ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಬಿಜೆಪಿ ಜೊತೆ ಮೈತ್ರಿಯಿಲ್ಲ: ರಾಜ್‌ಭರ್ ಸ್ಪಷ್ಟನೆ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಬಿಜೆಪಿ ಜತೆ ಮತ್ತೆ ಮೈತ್ರಿ ಮಾಡಿಕೊಳ್ಳುವ ಕುರಿತ ಸುದ್ದಿಗಳನ್ನು ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಮುಖ್ಯಸ್ಥ ಓಂ ಪ್ರಕಾಶ್ ರಾಜ್‌ಭರ್ ಭಾನುವಾರ ತಳ್ಳಿಹಾಕಿದ್ದಾರೆ.

ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ಜತೆಗಿನ ಭೇಟಿ ಸುದ್ದಿಗಳನ್ನು ಅಲ್ಲಗಳೆದಿರುವ ಅವರು, 'ನಾನು ದೆಹಲಿಗೂ ಹೋಗಿಲ್ಲ, ಯಾರನ್ನೂ ಭೇಟಿ ಮಾಡಿಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ. ರಾಜ್‌ಭರ್ ಅವರು ದೆಹಲಿಯಲ್ಲಿ ಶಾ ಅವರನ್ನು ಭೇಟಿ ಮಾಡಿದ್ದಾರೆ ಎಂಬುದಾಗಿ ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿತ್ತು.

2017ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆ ಎಸ್‌ಬಿಎಸ್‌ಪಿ ಮೈತ್ರಿ ಮಾಡಿಕೊಂಡಿತ್ತು. ಆದರೆ 2019ರ ಸಾರ್ವತ್ರಿಕ ಚುನಾವಣೆಗೂ ಮುನ್ನ ರಾಜ್‌ಭರ್ ಅವರು ಯೋಗಿ ಸಂಪುಟದಿಂದ ಹೊರಬಂದಿದ್ದರು. ಸಮಾಜವಾದಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು 2022ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪಕ್ಷ ಆರು ಕ್ಷೇತ್ರಗಳಲ್ಲಿ ಗೆದ್ದಿದೆ.

ಬಿಜೆಪಿ ಜತೆ ಮತ್ತೆ ಸೇರುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರ ಹಳೆಯದು. 2024ರ ಚುನಾವಣೆಯನ್ನು ಅಖಿಲೇಶ್ ಜೊತೆಗೂಡಿ ಎದುರಿಸುತ್ತೇವೆ

ಅರುಣ್ ರಾಜ್‌ಭರ್, ಎಸ್‌ಬಿಎಸ್‌ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಉತ್ತರ ಪ್ರದೇಶ: 24ರಂದು ಬಿಜೆಪಿ ಶಾಸಕಾಂಗ ಪಕ್ಷ ಸಭೆ

ಲಖನೌ (ಪಿಟಿಐ): ಉತ್ತರ ಪ್ರದೇಶ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯು ಇದೇ 24ರಂದು ನಡೆಯುವ ಸಾಧ್ಯತೆಗಳಿವೆ. ಮುಖ್ಯಮಂತ್ರಿಯಾಗಿ ನಿಯೋಜಿತರಾಗಿರುವ ಯೋಗಿ ಆದಿತ್ಯನಾಥ ಅವರನ್ನು ಅಧಿಕೃತವಾಗಿ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವ ಸಲುವಾಗಿ ಸಭೆ ಆಯೋಜಿಸಲಾಗುತ್ತಿದೆ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

ಸಭೆಯ ದಿನಾಂಕವನ್ನು ಇನ್ನಷ್ಟೇ ನಿರ್ಧರಿಸಬೇಕಿದೆ. ಮಾರ್ಚ್ 21ರಂದು ಬಿಜೆಪಿ ಶಾಸಕರ ಸಭೆ ನಿಗದಿ ಆಗಿತ್ತು. ಆದರೆ ಅದನ್ನು ಮುಂದೂಡಲಾಯಿತು ಎಂದು ಅವರು ಹೇಳಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಆಯ್ಕೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ವೀಕ್ಷಕರನ್ನಾಗಿ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ರಘುಬರ್ ದಾಸ್ ಅವರನ್ನು ಉಪ ವೀಕ್ಷಕರನ್ನಾಗಿ ನಿಯೋಜಿಸಲಾಗಿದೆ.

ಮಣಿಪುರ: ಎರಡನೇ ಅವಧಿಗೆ ಬಿರೆನ್ ಸಿ.ಎಂ

ಇಂಫಾಲ್ (ಪಿಟಿಐ): ಮಣಿಪುರ ಮುಖ್ಯಮಂತ್ರಿಯಾಗಿ ಬಿರೆನ್ ಸಿಂಗ್ ಅವರು ಎರಡನೇ ಅವಧಿಗೆ ಮುಂದುವರಿಯಲಿದ್ದಾರೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾನುವಾರ ಪ್ರಕಟಿಸಿದ್ದಾರೆ. ನಾಯಕನ ಆಯ್ಕೆ ಪ್ರಕ್ರಿಯೆಗಾಗಿ ನಿರ್ಮಲಾ ಅವರನ್ನು ವೀಕ್ಷಕಿಯಾಗಿ ಬಿಜೆಪಿ ಕಳುಹಿಸಿತ್ತು. ಬಿಜೆಪಿ ಶಾಸಕಾಂಗ ಪಕ್ಷದ ಸಭೆಯು ಬಿರೆನ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿದೆ ಎಂದು ನಿರ್ಮಲಾ ಹೇಳಿದ್ದಾರೆ.

ಸರ್ಕಾರ ರಚಿಸುವಂತೆ ಬಿರೆನ್ ಸಿಂಗ್ ಅವರನ್ನು ಮಣಿಪುರ ರಾಜ್ಯಪಾಲ ಗಣೇಶನ್ ಅವರು ಆಹ್ವಾನಿಸಿದ್ದಾರೆ.

ಮಣಿಪುರ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ನಂತರದ ಹತ್ತು ದಿನ ಮುಖ್ಯಮಂತ್ರಿ ಆಯ್ಕೆಯ ವಿಚಾರದಲ್ಲಿ ಅನಿಶ್ಚಿತ ಸ್ಥಿತಿ ಮನೆ ಮಾಡಿತ್ತು. ಬಿರೆನ್ ಮತ್ತು ಹಿರಿಯ ಮುಖಂಡ ವಿಶ್ವಜಿತ್ ಸಿಂಗ್ ನಡುವೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ಏರ್ಪಟ್ಟಿತ್ತು. ಇಬ್ಬರೂ ಮುಖಂಡರು ಎರಡು ಬಾರಿ ದೆಹಲಿಗೆ ಹೋಗಿ ಪಕ್ಷದ ನಾಯಕರನ್ನು ಭೇಟಿಯಾಗಿದ್ದರು.

ನಿರ್ಮಲಾ ಮತ್ತು ಸಹ ವೀಕ್ಷಕ ಕಿರಣ್ ರಿಜಿಜು ಅವರು ಭಾನುವಾರ ಬೆಳಿಗ್ಗೆಯೇ ಇಂಫಾಲ್‌ಗೆ ಆಗಮಿಸಿದ್ದರು. ಕೇಂದ್ರ ಸಚಿವ ಭೂಪೇಂದ್ರ ಯಾದವ್, ಮಣಿಪುರ ರಾಜ ವಂಶಸ್ಥ ಹಾಗೂ ಬಿಜೆಪಿ ಸಂಸದ ಲೈಶೆಂಬಾ ಸನಜೋಬ, ಪಕ್ಷದ ವಕ್ತಾರ ಸಂಬಿತ್ ಪಾತ್ರಾ ಅವರೂ ಸಭೆಯಲ್ಲಿ ಭಾಗಿಯಾಗಿದ್ದರು.

60 ಸದಸ್ಯ ಬಲದ ಮಣಿಪುರ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 32 ಸ್ಥಾನಗಳನ್ನು ಗೆದ್ದಿದೆ.

ಮಣಿಪುರ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆಯಾದ ಬಿರೆನ್ ಸಿಂಗ್ ಅವರಿಗೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು –ಪಿಟಿಐ ಚಿತ್ರ

ಉತ್ತರಾಖಂಡ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಇಂದು

ನವದೆಹಲಿ (ಪಿಟಿಐ): ಉತ್ತರಾಖಂಡದ ಮುಖ್ಯಮಂತ್ರಿ ಯಾರಾಗಬೇಕು ಎಂದು ನಿರ್ಧರಿಸುವ ಸಲುವಾಗಿ ರಾಜ್ಯದ ಬಿಜೆಪಿ ಶಾಸಕರು ಡೆಹ್ರಾಡೂನ್‌ನಲ್ಲಿ ಸೋಮವಾರ ಸಭೆ ನಡೆಸಲಿದ್ದಾರೆ.

ರಾಜ್ಯದ ಉಸ್ತುವಾರಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಮಾಜಿ ಮುಖ್ಯಮಂತ್ರಿಗಳಾದ ರಮೇಶ್ ಪೋಖ್ರಿಯಾಲ್ ನಿಶಾಂಕ್, ತ್ರಿವೇಂದ್ರ ಸಿಂಗ್ ರಾವತ್ ಮತ್ತಿತರರು ದೆಹಲಿಗೆ ತೆರಳಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಆಗಿದ್ದರು. ಭೇಟಿ ವೇಳೆ ಸಭೆ ನಡೆಸುವ ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಉತ್ತರಾಖಂಡ ಬಿಜೆಪಿ ಮುಖ್ಯಸ್ಥ ಮದನ್ ಕೌಶಿಕ್ ಹೇಳಿದ್ದಾರೆ.

ಉತ್ತರಾಖಂಡದ ವೀಕ್ಷಕರಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ನಿಯೋಜಿಸಲಾಗಿದೆ. ಬಿಜೆಪಿಯನ್ನು ಗೆಲುವಿನ ಕಡೆ ಮುನ್ನಡೆಸಿದ ಮುಖ್ಯಮಂತ್ರಿ ಧಾಮಿ ಅವರು ತಾವು ಸ್ಪರ್ಧಿಸಿದ್ದ ಖತಮಿ ಕ್ಷೇತ್ರದಲ್ಲಿ ಸೋತರು. ಧಾಮಿ ಅವರೇ ಮುಂದಿನ ಮುಖ್ಯಮಂತ್ರಿ ಆಗಲಿ ಎಂದು ಪಕ್ಷದ ಒಂದು ವರ್ಗ ಬಯಸುತ್ತಿದೆ. ಆದರೆ ಮತ್ತೊಂದು ವರ್ಗ ಮುಖ್ಯಮಂತ್ರಿ ಬದಲಾವಣೆಯನ್ನು ಬಯಸಿದೆ.

ಚುನಾವಣೆಯಲ್ಲಿ ಬಿಜೆಪಿ 47 ಸ್ಥಾನಗಳನ್ನು ಗೆದ್ದಿದೆ.

ಶರದ್ ಯಾದವ್ ಪಕ್ಷ ಆರ್‌ಜೆಡಿಯಲ್ಲಿ ವಿಲೀನ

ನವದೆಹಲಿ (ಪಿಟಿಐ): ಸಮಾಜವಾದಿ ನಾಯಕ ಶರದ್ ಯಾದವ್ ನೇತೃತ್ವದ ಲೋಕತಾಂತ್ರಿಕ ಜನತಾದಳವನ್ನು (ಎಲ್‌ಜೆಡಿ) ರಾಷ್ಟ್ರೀಯ ಜನತಾದಳದಲ್ಲಿ (ಆರ್‌ಜೆಡಿ) ಭಾನುವಾರ ವಿಲೀನ ಮಾಡಲಾಗಿದೆ.

ಬಿಜೆಪಿಯನ್ನು ಸೋಲಿಸಲು ವಿರೋಧ ಪಕ್ಷಗಳು ಒಗ್ಗೂಡುವುದು ಬಹಳ ಮುಖ್ಯ ಎಂದು ಶರದ್ ಯಾದವ್ ಅವರು ವಿಲೀನದ ಕುರಿತು ಹೇಳಿದರು. ಒಡೆದುಹೋಗಿರುವ ಜನತಾ ಪರಿವಾರವನ್ನು ಒಗ್ಗೂಡಿಸುವ ಪ್ರಯತ್ನದ ಭಾಗವಾಗಿ ಎಲ್‌ಜೆಡಿಯನ್ನು ಆರ್‌ಜೆಡಿಯಲ್ಲಿ ವಿಲೀನ ಮಾಡಲಾಗಿದೆ. ದೇಶದ ಸದ್ಯದ ರಾಜಕೀಯ ಪರಿಸ್ಥಿತಿಯ ದೃಷ್ಟಿಯಿಂದ ಇದು ಮುಖ್ಯ ಎಂದು ಶರದ್ ಹೇಳಿದರು. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ಬಿಹಾರದ ಭವಿಷ್ಯ ಎಂದು ಅವರು ಕರೆದರು.

ತೇಜಸ್ವಿ ಯಾದವ್ ಅವರು ಶರದ್ ಯಾದವ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿದರು. ಬಿಜೆಪಿ ವಿರುದ್ಧ ಒಗ್ಗೂಡಬೇಕು ಎಂದು ಬಿಜೆಪಿ ವಿರೋಧಿ ಪಕ್ಷಗಳಿಗೆ ಈ ವಿಲೀನದಿಂದ ಸಂದೇಶ ನೀಡಲಾಗಿದೆ ಎಂದು ತೇಜಸ್ವಿ ಹೇಳಿದರು.

'ದ್ವೇಷದ ರಾಜಕಾರಣ ಮುನ್ನೆಲೆಗೆ ಬರುತ್ತಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವವು ಅಪಾಯದಲ್ಲಿದೆ. ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯದ ಜೊತೆ ನಿಲ್ಲುವ ಪಕ್ಷಗಳು ಕೈಜೋಡಿಸಬೇಕು' ಎಂದು ಅವರು ಹೇಳಿದರು. ತಮ್ಮ ಮೇಲೆ ನಂಬಿಕೆ ಇರಿಸಿದ್ದಕ್ಕಾಗಿ ಶರದ್ ಯಾದವ್ ಅವರಿಗೆ ಧನ್ಯವಾದ ಸಲ್ಲಿಸಿದರು.

'ದ ಕಾಶ್ಮೀರ್ ಫೈಲ್ಸ್' ಚಿತ್ರಕ್ಕೆ ಬಿಜೆಪಿ ನಾಯಕರು ಬೆಂಬಲ ನೀಡುತ್ತಿರುವುದರ ಕುರಿತು ವ್ಯಂಗ್ಯವಾಡಿದ ತೇಜಸ್ವಿ, 'ಬೆಲೆ ಏರಿಕೆ ಮತ್ತು ನಿರುದ್ಯೋಗದಿಂದಾಗಿ ಜನರು ಕಂಗಾಲಾಗಿದ್ದಾರೆ.' ಎಂದು ಹೇಳಿದರು.

'ದಿ ಕಾಶ್ಮೀರ್ ಫೈಲ್ಸ್: ಮುಸ್ಲಿಮರ ಕೊಲೆ ಬಗ್ಗೆಯೂ ಚಿತ್ರ ನಿರ್ಮಿಸಿ'

ಭೋಪಾಲ್(ಪಿಟಿಐ): 'ದಿ ಕಾಶ್ಮೀರ್ ಫೈಲ್ಸ್' ನಿರ್ಮಾಣ ಮಾಡಿದ ಚಿತ್ರತಂಡ ದೇಶದ ಹಲವು ರಾಜ್ಯಗಳಲ್ಲಿ ನಡೆದ ಮುಸ್ಲಿಮರ ಕೊಲೆಗಳ ಬಗ್ಗೆಯೂ ಚಿತ್ರ ನಿರ್ಮಿಸಬೇಕು ಎಂದು ಮಧ್ಯಪ್ರದೇಶದ ಲೋಕೋಪಯೋಗಿ ಇಲಾಖೆಯ ಉಪ ಕಾರ್ಯದರ್ಶಿ ನಿಯಾಝ್ ಖಾನ್ ಅವರು ಸಲಹೆ ನೀಡಿದ್ದಾರೆ. ಅಲ್ಲದೆ ಮುಸ್ಲಿಮರು ಸಹ ಭಾರತದ ನಾಗರಿಕರೇ ಹೊರತು ಕ್ರಿಮಿಗಳಲ್ಲ ಎಂದಿದ್ದಾರೆ.

ಈ ಸಂಬಂಧ ಭಾನುವಾರ ಟ್ವೀಟ್ ಮಾಡಿದ ಐಎಎಸ್ ಅಧಿಕಾರಿ ನಿಯಾಝ್ ಖಾನ್ ಅವರು, 'ಚಿತ್ರದಿಂದ ಗಳಿಕೆಯಾದ ಎಲ್ಲಾ ಹಣವನ್ನು ಕಾಶ್ಮೀರದಲ್ಲಿ ಬ್ರಾಹ್ಮಣರ ಮಕ್ಕಳ ಶಿಕ್ಷಣ ಮತ್ತು ಮನೆಗಳ ನಿರ್ಮಾಣಕ್ಕಾಗಿ ವರ್ಗಾವಣೆ ಮಾಡಬೇಕು. ಜತೆಗೆ ಭಾರತದಲ್ಲಿ ಮುಸ್ಲಿಮರ ನರಮೇಧದ ಕುರಿತು ಪುಸ್ತಕ ಬರೆಯುತ್ತೇನೆ. ಅದು ಕಾಶ್ಮೀರ ಫೈಲ್ಸ್ ರೀತಿ ಚಿತ್ರ ನಿರ್ಮಾಣಕ್ಕೆ ಅನುಕೂಲವಾಗಲಿದೆ' ಎಂದು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ 'ದಿ ಕಾಶ್ಮೀರ್ ಫೈಲ್ಸ್' ಚಿತ್ರದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಅವರು , ತಾವು 25ರಂದು ಭೋಪಾಲ್‌ಗೆ ಬರುತ್ತಿದ್ದು, ಭೇಟಿಗೆ ಸಮಯಾವಕಾಶ ನೀಡಬೇಕು. ನಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಬಹುದು ಎಂದು ಅಧಿಕಾರಿಗೆ ಕೋರಿದ್ದಾರೆ.

ಏತನ್ಮಧ್ಯೆ, ಅಧಿಕಾರಿ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿರುವ ಮಧ್ಯಪ್ರದೇಶ ಸಚಿವ ವಿಶ್ವಾಸ್ ಸಾರಂಗ್ ಅವರು, ಇಂಥ ಹೇಳಿಕೆ ನೀಡಿದ ನಿಯಾಝ್ ಅವರನ್ನು ಉಪ ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕಬೇಕು ಎಂದಿದ್ದಾರೆ.

ಎಲ್ಲಾ ಪಕ್ಷಗಳು ಜನರಲ್ಲಿ ಒಡಕು ಮೂಡಿಸುತ್ತಿವೆ: ಗುಲಾಂ ನಬಿ ಆಜಾದ್

ನವದೆಹಲಿ: ಕಾಂಗ್ರೆಸ್ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಜನರ ನಡುವೆ ಒಡಕು ಮೂಡಿಸುತ್ತಿದೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಭಾನುವಾರ ಹೇಳಿದ್ದಾರೆ.

'ಧರ್ಮ, ಜಾತಿ ಆಧಾರದಲ್ಲಿ ರಾಜಕೀಯ ಪಕ್ಷಗಳು ನಿರಂತರವಾಗಿ ಜನರನ್ನು ವಿಭಜಿಸುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಸೇರಿದಂತೆ ಯಾವುದೇ ಪಕ್ಷವನ್ನು ನಾನು ಕ್ಷಮಿಸುವುದಿಲ್ಲ. ನಾಗರಿಕ ಸಮಾಜವು ಒಗ್ಗಟ್ಟಿನಿಂದ ಇರಬೇಕು. ಜಾತಿ, ಧರ್ಮವನ್ನು ಲೆಕ್ಕಿಸದೆ ಎಲ್ಲರಿಗೂ ನ್ಯಾಯ ಒದಗಿಸಬೇಕು' ಎಂದೂ ಜಿ–23 ಗುಂಪಿನ ನಾಯಕ ಆಜಾದ್ ತಿಳಿಸಿದ್ದಾರೆ.

'ದಿ ಕಾಶ್ಮೀರ್ ಫೈಲ್ಸ್' ಚಿತ್ರದ ಕುರಿತು ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿ ಏನು ನಡೆದಿದೆಯೋ ಅದಕ್ಕೆ ಪಾಕಿಸ್ತಾನ ಮತ್ತು ಭಯೋತ್ಪಾದಕರೇ ನೇರ ಹೊಣೆ. ಹಿಂದೂಗಳು, ಕಾಶ್ಮೀರಿ ಪಂಡಿತರು, ಕಾಶ್ಮೀರದ ಮುಸ್ಲಿಮರು ಮತ್ತು ಡೋಗ್ರಾಗಳು ಕೂಡ ಇದರಿಂದ ತೊಂದರೆಗೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ.

ಐ.ಟಿ ದಾಳಿ: ಸ್ಟಾರ್ಟ್‌ಅಪ್‌ನಲ್ಲಿ ₹224 ಕೋಟಿ ಕಪ್ಪುಹಣ ಪತ್ತೆ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮೂಲದ ಸ್ಟಾರ್ಟ್‌ಅಪ್ ಕಂಪನಿಗೆ ಸೇರಿದ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ನಡೆಸಿದ ದಾಳಿ ವೇಳೆ, ₹ 224 ಕೋಟಿ ಕಪ್ಪುಹಣ ಪತ್ತೆ ಹಚ್ಚಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಭಾನುವಾರ ತಿಳಿಸಿದೆ.

ಮಹಾರಾಷ್ಟ್ರದ ಪುಣೆ, ಥಾಣೆ ನಗರ ಹಾಗೂ ಕರ್ನಾಟಕ, ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲಿ 23 ಸ್ಥಳಗಳಲ್ಲಿ ಮಾರ್ಚ್ 9ರಂದು ಶೋಧ ಕಾರ್ಯ ಕೈಗೊಳ್ಳಲಾಗಿತ್ತು ಎಂದು ಮಂಡಳಿ ತಿಳಿಸಿದೆ.

'ಲೆಕ್ಕಪತ್ರ ಇಲ್ಲದ ₹ 1 ಕೋಟಿ ನಗದು ಹಾಗೂ ₹ 22 ಲಕ್ಷ ಮೌಲ್ಯದ ಆಭರಣಗಳನ್ನು ಈ ವರೆಗೆ ಜಪ್ತಿ ಮಾಡಲಾಗಿದೆ' ಎದು ಸಿಬಿಡಿಟಿ ಬಿಡುಗಡೆ ಮಾಡಿರುವ ಪ್ರಕಟಣೆ ತಿಳಿಸಿದೆ. ಈ ಸ್ಟಾರ್ಟ್‌ಅಪ್ ಕಂಪನಿಯು ಕಟ್ಟಡ ನಿರ್ಮಾಣ ಸಾಮಗ್ರಿಗಳ ಚಿಲ್ಲರೆ ಮಾರಾಟದಲ್ಲಿ ನಿರತವಾಗಿದ್ದು, ₹ 6 ಸಾವಿರ ಕೋಟಿಗೂ ಅಧಿಕ ವಾರ್ಷಿಕ ವಹಿವಾಟು ಹೊಂದಿದೆ ಎಂದೂ ತಿಳಿಸಿದೆ. 'ಲೆಕ್ಕಪತ್ರವೇ ಇಲ್ಲದ ವೆಚ್ಚ ಸೇರಿದಂತೆ ₹ 400 ಕೋಟಿಗೂ ಅಧಿಕ ಅವ್ಯವಹಾರ ಕಂಡುಬಂದಿದೆ. ಕಂಪನಿಯು ಮಾರಿಷಸ್ ಮಾರ್ಗವಾಗಿ ಹರಿದುಬಂದ ಭಾರಿ ಮೊತ್ತದ ವಿದೇಶಿ ಹೂಡಿಕೆಯನ್ನು ಸ್ವೀಕರಿಸಿರುವುದು ಸಹ ಶೋಧದ ವೇಳೆ ಪತ್ತೆಯಾಗಿದೆ' ಎಂದಿದ್ದಾರೆ.

ಸರ್ಕಾರ ರಚನೆ: ಪ್ರಧಾನಿ ನಿವಾಸದಲ್ಲಿ ಸಭೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಗೋವಾದಲ್ಲಿ ಹೊಸ ಸರ್ಕಾರ ರಚನೆಯ ಕಸರತ್ತುಗಳು ನಡೆಯುತ್ತಿದ್ದು, ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ, ಹಿರಿಯ ಮುಖಂಡರಾದ ಅಮಿತ್ ಶಾ, ರಾಜನಾಥ ಸಿಂಗ್, ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಪ್ರಧಾನಿ ನಿವಾಸದಲ್ಲಿ ಭಾನುವಾರ ರಾತ್ರಿ ಸಭೆ ನಡೆಯಿತು.

EXAM DH ಪ್ರಜಾವಾಣಿ MASTERMIND
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399 ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

‘ಪರಿಸರ ವಿಜ್ಞಾನ’ದಲ್ಲಿ ವೈವಿಧ್ಯಮಯ ಕೋರ್ಸ್

ಡಾ.ಟಿ.ಎಸ್.ಹರ್ಷ

ಪರಿಸರ ವಿಜ್ಞಾನ – ಎರಡು ದಶಕಗಳಿಂದೀಚೆಗೆ ಹೆಚ್ಚು ಪ್ರವರ್ಧಮಾನಕ್ಕೆ ಬರುತ್ತಿರುವ ಕ್ಷೇತ್ರವಾಗಿದೆ. ಇದು ಶಿಕ್ಷಣ, ಸಂಶೋಧನೆ, ಸಂರಕ್ಷಣೆ, ಉದ್ಯೋಗ ಹೀಗೆ ಹಲವು ರೂಪಗಳಲ್ಲಿ ಹೊಮ್ಮುತ್ತಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಪರಿಸರ ವಿಜ್ಞಾನ ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸ್‌ನಿಂದ ಹಿಡಿದು ಸ್ನಾತಕೋತ್ತರ ಪದವಿ, ಪಿ.ಎಚ್‌ಡಿವರೆಗೆ ವಿವಿಧ ಕೋರ್ಸ್‌ಗಳನ್ನು ಕಲಿಸಲಾರಂಭಿಸಿವೆ. ಈ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರಿಗೆ ಸರ್ಕಾರದ ಪ್ರತಿಷ್ಠಿತ ಸಂಸ್ಥೆಗಳಲ್ಲಿ, ಖಾಸಗಿ ಕ್ಷೇತ್ರದ ಉದ್ಯಮಗಳಲ್ಲಿ ಉನ್ನತ ಮಟ್ಟದ ಹುದ್ದೆಗಳೂ ದೊರೆಯುತ್ತವೆ.

> ‘ಪರಿಸರ ವಿಜ್ಞಾನ’ ವಿಷಯದಲ್ಲಿ ಡಿಪ್ಲೊಮಾದಿಂದ ಹಿಡಿದು ಸ್ನಾತಕೋತ್ತರ ಪದವಿವರೆಗೆ ವಿವಿಧ ರೀತಿಯ ಕೋರ್ಸ್‌ಗಳಿವೆ. ಇವುಗಳಲ್ಲಿ ಅಗ್ರ ಶ್ರೇಣಿಯಲ್ಲಿ ತೇರ್ಗಡೆಯಾದವರಿಗೆ ಉತ್ತಮ ಉದ್ಯೋಗವೂ ಸಿಗುತ್ತದೆ. ಈ ಕೋರ್ಸ್ ಮತ್ತು ಉದ್ಯೋಗಾವಕಾಶಗಳ ಕುರಿತ ಮಾಹಿತಿ ಇಲ್ಲಿದೆ.

ಸರ್ಟಿಫಿಕೇಟ್ ಕೋರ್ಸ್

ಪರಿಸರ ವಿಜ್ಞಾನದಲ್ಲಿ 6 ತಿಂಗಳ ಸರ್ಟಿಫಿಕೇಟ್ ಕೋರ್ಸ್ ಹಾಗೂ 2 ವರ್ಷಗಳ ಡಿಪ್ಲೊಮಾ ಕೋರ್ಸ್‌ಗಳಿವೆ. ಎಸ್ಸೆಸ್ಸೆಲ್ಸಿ/ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರು ಈ ಕೋರ್ಸ್ ಕಲಿಯಬಹುದು. ಇದರಲ್ಲಿ ಪರಿಸರ ಅಧ್ಯಯನ, ಪರಿಸರ ವಿಜ್ಞಾನ, ಘನತ್ಯಾಜ್ಯ ವಸ್ತು ನಿರ್ವಹಣೆ, ಪರಿಸರ ನಿರ್ವಹಣೆ, ಸುಸ್ಥಿರ ಅಭಿವೃದ್ಧಿ, ತ್ಯಾಜ್ಯ ನೀರಿನ ಸಂಸ್ಕರಣೆ, ಭೌಗೋಳಿಕ ಮಾಹಿತಿ ವ್ಯವಸ್ಥೆ ಹಾಗೂ ದೂರ ಸಂವೇದಿ ಇತ್ಯಾದಿ ವಿಷಯಗಳಿವೆ.

ಪದವಿ ಶಿಕ್ಷಣ

ಪಿಯುಸಿ ನಂತರ ಪದವಿಯಲ್ಲಿ(ಬಿ.ಎಸ್‌ಸಿ) ಪರಿಸರ ವಿಜ್ಞಾನ ಕೋರ್ಸ್ ಕಲಿಯಬಹುದು. ಪಿಯುಸಿ (ಜೀವ ವಿಜ್ಞಾನ ವಿಷಯ ಒಳಗೊಂಡಂತೆ) ಅಥವಾ ತತ್ಸಮಾನದ ಡಿಪ್ಲೊಮಾ ಕೋರ್ಸ್ ಪೂರ್ಣಗೊಳಿಸಿರುವವರು ಈ ಪದವಿ ಪ್ರವೇಶಕ್ಕೆ ಅರ್ಹರು. ಈ ಪದವಿಯಲ್ಲಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಮೂರು ವಿಷಯಗಳಲ್ಲಿ, ಒಂದು ಪರಿಸರ ವಿಜ್ಞಾನ ವಿಷಯವಾಗಿದ್ದರೆ, ಉಳಿದ ಎರಡು ಜೀವವಿಜ್ಞಾನ ವಿಷಯಗಳಾಗಿರಬಹುದು. ಮೂರು ವರ್ಷದ ಈ ಪದವಿಯಲ್ಲಿ ಪರಿಸರ ವಿಜ್ಞಾನ ಮತ್ತು ವನ್ಯಜೀವಿ ನಿರ್ವಹಣೆ, ಪರಿಸರ ಮತ್ತು ನೀರಿನ ನಿರ್ವಹಣೆ ಸೇರಿದಂತೆ ವಿವಿಧ ಕೋರ್ಸ್‌ಗಳಿವೆ.

ಸ್ನಾತಕೋತ್ತರ ಪದವಿ

ಎಂ.ಎಸ್‌ಸಿ (ಸ್ನಾತಕೋತ್ತರ) ಪದವಿಯಲ್ಲಿ ಪರಿಸರ ವಿಜ್ಞಾನ, ವನ್ಯಜೀವಿ ನಿರ್ವಹಣೆ, ಸುಸ್ಥಿರ ಅಭಿವೃದ್ಧಿ ಮತ್ತು ನಿರ್ವಹಣೆ, ಭೂ ವಿಜ್ಞಾನ, ಹವಾಮಾನ ಬದಲಾವಣೆ ನಿರ್ವಹಣೆ, ಪರಿಸರ ಜೀವಿಶಾಸ್ತ್ರ, ಮಾಲಿನ್ಯ ನಿಯಂತ್ರಣ.. ಇತ್ಯಾದಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಪರಿಸರ ವಿಜ್ಞಾನ ಅಥವಾ ಇನ್ನಿತರ ಜೀವವಿಜ್ಞಾನ ವಿಷಯದಲ್ಲಿ ಬಿ.ಎಸ್‌ಸಿ ಪದವಿ ಪೂರ್ಣಗೊಳಿಸಿ, ಆಯಾ ಶೈಕ್ಷಣಿಕ ಸಂಸ್ಥೆಗಳು/ ವಿವಿಗಳು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು ಈ ಪದವಿಗೆ ಪ್ರವೇಶ ಪಡೆಯಬಹುದು.

ಉದ್ಯೋಗಾವಕಾಶಗಳು

ಸರ್ಕಾರಿ ಕಾಲೇಜು / ವಿವಿಗಳು / ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳಿವೆ. ಪರಿಸರ ವಿಜ್ಞಾನ ವಿಷಯದಲ್ಲಿ ಪಿ.ಜಿ, ಪಿ.ಎಚ್‌ಡಿ ಪಡೆದವರು, ಕಾಲೇಜು / ವಿಶ್ವವಿದ್ಯಾಲಯ/ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಬಹುದು. ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಪರಿಸರ ಅಧಿಕಾರಿ/ ಸಹಾಯಕ ಪರಿಸರ ಅಧಿಕಾರಿಯಾಗಬಹುದು. ಜವಳಿ, ಉಕ್ಕು, ಡಿಸ್ಟಿಲರಿ, ಸಕ್ಕರೆ, ಬಣ್ಣ, ಔಷಧ ಹಾಗೂ ಟೈರ್ ತಯಾರಿಕಾ ಕಾರ್ಖಾನೆಗಳಲ್ಲಿ ಆರೋಗ್ಯ ತಜ್ಞ, ಕೆಮಿಸ್ಟ್, ನೀರು ಗುಣಮಟ್ಟ ವಿಶ್ಲೇಷಣಾಧಿಕಾರಿ, ವನ್ಯಜೀವಿ ಸಂರಕ್ಷಣ ಅಧಿಕಾರಿ, ಜಲ/ನೆಲ ಸಂಪನ್ಮೂಲ ಅಧಿಕಾರಿ, ಪರಿಸರ ಶಿಕ್ಷಣತಜ್ಞ, ಇತ್ಯಾದಿ ಹುದ್ದೆಗಳನ್ನು ಪಡೆಯಬಹುದು.

ಎಂಜಿನಿಯರಿಂಗ್ ಪದವಿ

ಬಿ.ಇ/ಬಿಟೆಕ್/ಎಂ.ಟೆಕ್‌ನಲ್ಲಿ ಪರಿಸರ ಎಂಜಿನಿಯರಿಂಗ್ ಪದವಿ ಪಡೆಯಲು ಅವಕಾಶವಿದೆ. ಈ ಕೋರ್ಸ್‌ಗೆ ಸೇರುವವರು ಸರ್ಕಾರ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುವ NEET/KET ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಈ ಪರೀಕ್ಷೆ ಫಲಿತಾಂಶದ ಆಧಾರದ ಮೇಲೆ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಪಿ.ಎಚ್‌ಡಿ ಪದವಿ

ಪರಿಸರ ವಿಜ್ಞಾನ ವಿಷಯದಲ್ಲಿ ಶೇ 55ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪೂರೈಸಿದ, ವಿವಿಗಳ ಪ್ರವೇಶ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಲಭ್ಯವಿರುವ ಸ್ಥಾನಗಳ ಆಧಾರದ ಮೇಲೆ ಪಿ.ಎಚ್‌ಡಿ ಪದವಿಗೆ ಅವಕಾಶ ಸಿಗುತ್ತದೆ. ಪ್ರತಿ ವರ್ಷ ಜನವರಿ ಅಥವಾ ಜೂನ್ ತಿಂಗಳಿನಲ್ಲಿ ಪಿ.ಎಚ್‌ಡಿ ಪ್ರವೇಶಕ್ಕಾಗಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗುತ್ತದೆ. ಯುಜಿಸಿ ಮತ್ತಿತರ ಸಂಸ್ಥೆಗಳಿಂದ ಸಂಶೋಧನಾ ಫೆಲೋಷಿಪ್‌ಗಳನ್ನು ನೀಡಲಾಗುತ್ತದೆ.

ಎಲ್ಲೆಲ್ಲಿ ಈ ಕೋರ್ಸ್‌ಗಳಿವೆ?

ಬೆಂಗಳೂರು, ಮೈಸೂರು ಸೇರಿದಂತೆ ದೇಶ ಹಾಗೂ ರಾಜ್ಯದ ವಿವಿಧೆಡೆಗಳಲ್ಲಿರುವ ವಿಶ್ವವಿದ್ಯಾಲಯಗಳು, ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪರಿಸರ ವಿಜ್ಞಾನದ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್‌ಡಿ ಕೋರ್ಸ್‌ಗಳಿವೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ), ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಸೇಂಟ್ ಜೋಸೆಫ್ಸ್ ಕಾಲೇಜು, ಬೆಳಗಾವಿಯ ಕೆ.ಎಲ್.ಇ ಕಾಲೇಜು, ಮೈಸೂರಿನ ಜೆ.ಎಸ್.ಎಸ್. ಉನ್ನತ ಶಿಕ್ಷಣ ಅಕಾಡೆಮಿಗಳೂ ಪರಿಸರ ವಿಜ್ಞಾನದ ವಿವಿಧ ಕೋರ್ಸ್‌ಗಳಿಗೆ ಪೂರ್ಣಾವಧಿ ಶಿಕ್ಷಣ ನೀಡುತ್ತವೆ. ಮುಂಬೈ, ದೆಹಲಿ, ಖರಗ್‌ಪುರ ಐಐಟಿಗಳು, ಸುರತ್ಕಲ್‌ನ ಎನ್‌ಐಟಿಕೆ, ಮಣಿಪಾಲ್‌ನ ಎಂ.ಐ.ಟಿಗಳು ಪರಿಸರ ಶಿಕ್ಷಣದಲ್ಲಿ ನಾಲ್ಕು ವರ್ಷದ ಎಂಜಿನಿಯರಿಂಗ್ ಪದವಿ ನೀಡುತ್ತವೆ.

ಈ ಕೋರ್ಸ್ ಹಾಗೂ ಉದ್ಯೋಗಗಳ ಕುರಿತ ಹೆಚ್ಚಿನ ಮಾಹಿತಿಗಾಗಿ, 9449178802 ಮೊಬೈಲ್ ಸಂಖ್ಯೆಗೆ ಅಥವಾ raoamer@gmail.com ಮೂಲಕ ಸಂಪರ್ಕಿಸಬಹುದು.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಪರಿಸರ ವಿಜ್ಞಾನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು)

ವೃತ್ತಿ ಯೋಜನೆ ರೂಪಿಸಿ

1. ನಾನು ಬಿಕಾಂ ಮುಗಿಸಿದ್ದೇನೆ. ಮುಂದೆ ಉದ್ಯೋಗಕ್ಕೆ ಹೋಗುವುದೋ ಅಥವಾ ಉನ್ನತ ವ್ಯಾಸಂಗ ಮಾಡುವುದೋ ತಿಳಿಯುತ್ತಿಲ್ಲ. ಈ ಹಂತದಲ್ಲಿ ಪೈಥಾನ್, ಡೇಟಾ ಸೈನ್ಸ್, ಮಷಿನ್ ಲರ್ನಿಂಗ್ ಕೋರ್ಸ್‌ಗಳನ್ನು ಮಾಡುವುದು ಸೂಕ್ತವೇ ? ಇದರಿಂದ ಕೆಲಸ ಸಿಗುವುದೇ?

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

2. ನಾನು ಎಂಬಿಎ ಪದವಿ ಮಾಡುತ್ತಿದ್ದೇನೆ ಹಾಗೂ ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ. ಮುಂದೆ ನಾನು ಕೆಲಸಕ್ಕೆ ಹೋಗುವುದೋ ಅಥವಾ ಪರೀಕ್ಷೆಗೆ ತಯಾರಿ ನಡೆಸುವುದೋ ಎಂಬ ಯೋಚನೆಯಲ್ಲಿ ಇದ್ದೇನೆ. ಮಾರ್ಗದರ್ಶನ ನೀಡಿ.

ಅಪೂರ್ವ, ಬೆಂಗಳೂರು.

3. ನಾನು ಕನ್‌ಸ್ಟ್ರಕ್ಷನ್ ಮ್ಯಾನೇಜ್‌ಮೆಂಟ್‌ನಲ್ಲಿ ಎಂಟೆಕ್ ಮಾಡುತ್ತಿದ್ದೇನೆ. ಎಂಟೆಕ್ ಮುಗಿದ ಬಳಿಕ ನಾನು ಉದ್ಯೋಗಕ್ಕೆ ಸೇರುವುದೋ ಅಥವಾ ಸಂಶೋಧನೆಗೋ? ನನಗೆ ಪ್ರಾಧ್ಯಾಪಕ ವೃತ್ತಿ ಮಾಡುವ ಆಸೆಯೂ ಇದೆ. ದಯವಿಟ್ಟು ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಖಚಿತವಾದ ವೃತ್ತಿಯೋಜನೆಯಿಲ್ಲದೆ ಕೋರ್ಸ್‌ಗಳನ್ನು ಮಾಡಿದರೆ ಇಂತಹ ಗೊಂದಲಗಳು ಸಾಮಾನ್ಯ. ಜೀವನದಲ್ಲಿ ನಿರ್ದಿಷ್ಟವಾದ, ಸ್ಪಷ್ಟವಾದ, ಸಾಧಿಸಬಹುದಾದ ಮತ್ತು ಅಳೆಯಬಹುದಾದ ಗುರಿಯಿರಬೇಕು. ಬಾಳಿಗೊಂದು ಗುರಿ ಇದ್ದರೆ, ನಮ್ಮಲ್ಲಿರುವ ಸುಪ್ತ ಶಕ್ತಿಗಳನ್ನು ಆ ಗುರಿಯೆಡೆಗೆ ಕೇಂದ್ರೀಕರಿಸಿ, ವೃತ್ತಿಯಲ್ಲಿ ಯಶಸ್ಸು ಮತ್ತು ಜೀವನದಲ್ಲಿ ಸಂತೃಪ್ತಿಯನ್ನು ಪಡೆಯಬಹುದು. ನೀವು ಪರಿಶೀಲಿಸುತ್ತಿರುವ ಎಲ್ಲಾ ಆಯ್ಕೆಗಳು ವೃತ್ತಿಯ ಯಶಸ್ಸಿಗೆ ಬೇಕಾಗುವ ಜ್ಞಾನ, ಆಸಕ್ತಿ, ಅಭಿರುಚಿ, ಸಾಮರ್ಥ್ಯ ಮತ್ತು ಕೌಶಲಗಳ ದೃಷ್ಟಿಯಿಂದ ವಿಭಿನ್ನ. ಹಾಗಾಗಿ, ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆತ್ಮಸಂತೃಪ್ತಿಯನ್ನು ತಂದುಕೊಡುವ ವೃತ್ತಿಯೋಜನೆಯನ್ನು ಮಾಡಿ ಅದರಂತೆ ವೃತ್ತಿಯ ಆಯ್ಕೆ ಮಾಡುವುದು ನಿಮ್ಮ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ವೀಕ್ಷಿಸಿ: https://www.youtube.com/watch?v=MHnPg_sp6E0

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಲ್ ಅಂಡ್ ಟಿ ಬಿಲ್ಡ್ ಇಂಡಿಯಾ ಸ್ಕಾಲರ್‌ಶಿಪ್ 2022

- ವಿವರ: ‘ಎಲ್ ಅಂಡ್ ಟಿ ಬಿಲ್ಡ್ ಇಂಡಿಯಾ ಸ್ಕಾಲರ್‌ಶಿಪ್ 2022’– ಇದು ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನ.
- ಅರ್ಹತೆ: ಕೋರ್ ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಅಂತಿಮ ವರ್ಷದ ಬಿ.ಇ. ಅಥವಾ ಬಿ.ಟೆಕ್ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು.
- ಆರ್ಥಿಕ ನೆರವು: ತಿಂಗಳಿಗೆ ₹13,400 ಹಾಗೂ ಇತರ ಸೌಲಭ್ಯಗಳು
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 03, 2022
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/LAB7

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

Articles

Articles ‘a, an’, and ‘the’ are demonstrative adjectives which are generally used **before a countable singular common noun to tell about** a particular or non particular person, place, or thing. We use article **‘a’ before a consonant sound irrespective whether the word begins with a vowel or consonant letter.** We have to choose ‘a’ or ‘an’ because of the beginning sound not for letter. So we use **‘a’ before consonant sound** and **‘an’ before a vowel sound. ‘The’ is used before particular person or thing with a definite meaning.** Usage of the **Definite Article ‘the’**

1	**Particular person or thing already referred.**	The man, the boy, the teacher, the radio, the market, the capital, the P.M, the C.M.
2	**Singular noun for a whole class, animals**	The lion, the tiger, the elephant, the cow, the fox, the deer, the donkey, the cat.
3	**News papers, Magazines**	The Indian Express, The Deccan Herald. The India Today, The Reader’s Digest.
4	**Only one or Unique**	The universe, the sun, the moon, the sky, the earth, the air, the water, the atmosphere.
5	**Directions**	The east, the west, the south, the north, the north east, the south east, the north west.
6	**Oceans, seas**	The Indian, the Atlantic, the Pacific, the Arctic. The Arabian, the Red sea, the Caribbean.
7	**Rivers**	The Ganga, the Yamuna, the Sindhu, the Narmada, the Brahmaputra, the Cauvery.
8	**Mountains**	The Himalaya, the Kilimanjaro, the Aconcagua, the Nanda, the Mount Saint Elias, the Fuji.
9	**Holy books**	The Bhagavadgitha, the Ramayana, the Mahabharatha, the Bible, the Quran, the Agamas.
10	**Superlatives**	The biggest, the largest, the highest, the nearest, the tallest, the simplest, the most.
11	**Musical Instruments**	The shahanay, the saxophone, the flute, the sitar, the piano, the guitar, the violin.

1	**A** report about **a** boy in **the** newspaper was **an** unexpected event in his life.	/rɪˈpɔ:t/, /bɔɪ /	/ʌn.ɪkˈspek.tɪd/
2	Chethan is **an** engineering student in Rajiv collage and he is **a** union leader.	/ˌen.dʒɪˈnɪə.rɪŋ/	/ˈju:.ni.ən/
3	Yashas is **an** employee in a bank. He sometimes late by **an** hour to home.	/ɪmˈplɔɪ.i/	/aʊə r /
4	Amar has been elected as **an** M.L.A. though he is **an** F D A in a high school.	/ em.el.ei /	/ ef. di:.eɪ /
5	Thomas Alva Edison was **a** European scientist who invented **an** electric bulb.	/jʊə.rəˈpi:.ən/	/ɪˈlek.trɪk/
6	Priyanka is **an** architect professor. She has been teaching in **a** university.	/ˈɑ:.kɪ.tekt/	/ju:.nɪˈvɜ:sɪ.ti/
7	Martin is **an** honest English teacher, for whom teaching English is **a** passion.	/ˈɒn.ɪst/	/ˈpæʃ. ə n/
8	**A** one crore rupees has been given by **an** M.P to control the pandemic.	/wʌn/	/ em. pi: /
9	He was happy with **an** honour who won **the** first prize in a horse riding event.	/ˈɒn.ə r /	/hɔ:s/
10	**An** empty pocket is **the** symbol of self confidence of **a** gentle man.	/ˈem p.ti/	/ˈdʒen.tl /
11	**The** President comes to Sri Lanka for **an** aerial view for which is **an** island.	/ˈeə.ri.əl/	/ˈaɪ.lənd/
12	We should always purchase only **a** useful house hold things in **a** shopping.	/ˈju:s.f ə l/	/ˈʃɒp.ɪŋ/
13	Portia was **an** heiress to her father came as **a** clerk in Shakespeare’s drama.	/ˈeə.res/	/klɑ:k/
14	Ananth was **the** best TT player, **a** fan as well as **a** composer of his own tune.	/fæn/	kəmˈpəʊ.zər /
15	Dreaming to fly as **an** eagle in **the** sky is only **an** illusion of **a** human being.	/ˈi:.gl /	/ɪˈlu:.ʒ ə n/
16	I bought **a** buffalo and **an** umbrella in **the** market as it was **the** rainy season.	/ˈbʌf.ə.ləʊ/	/ʌmˈbrel.ə/
17	**A** humane should understand ‘Oil floats on **the** water’ is **a** universal truth.	/ˈhju:.mən/	/ˌju:.nɪˈvɜ:.s ə l /
18	Abhinandan is **an** I A P served as **a** great soldier who fought against terrorism.	/ aɪ. ei. pi: /	/greɪt/
19	Ravindra is **an** F B I, serving as **an** officer in **the** central government office.	/ ef.bi:. aɪ /	/ˈɒf.ɪ.sə r /
20	**The** Sun rises in **the** East and sets in **the** West. **The** Earth moves round **the** Sun.	/ðə/./ði:/,/ðə	/ði:/,/ðə/

1	Grandma is ___ unique woman, she climbs ___ trees.	9	It is only __hour of journey from __ railway station.
2	It is ___ honour for me to welcome ___chief quests.	10	_____easiest thing is to find ____ faults in any one.
3	She is working as ___ F D A in ___ Govt. high school.	11	It was __ unbelievable event held in ___ last night.
4	He is serving as __officer in ____employment office.	12	He is __English teacher in __upgraded high school.
5	Shastri was __ eminent leader in __ freedom struggle.	13	____pilgrim takes bath in ____ river Ganga.
6	__ Arabian ocean is one of __ biggest ocean in South.	14	He is __ M.P who works for all _ people in a village.
7	Ambedkar was selected as _first law minister in _govt.	15	__ moon moves round __ earth as __earth moves.
8	He is __ one man army soldier fought for___ country.	16	__man takes up ___idea and tries to reach __goal.

1	2	3	4	5	6	7	8	9	10	11	12	13	14	15	16
a,the	an,the	an,the	an,an	an,the	The,the	the,the	a,the	an, the	The,the	an,the'	an,an	A,the	an,the	The,the,the	A, an, the

Annappa Shetty
MA,M.Ed, SRP in English,Hassan

ಮಾದರಿ ಪ್ರಶ್ನೋತ್ತರ

ದ್ಯುತಿವಿದ್ಯುತ್ ಕೋಶ

ಭೌತಶಾಸ್ತ್ರ

ಪಿಯುಸಿ

40) ದ್ಯುತಿವಿದ್ಯುತ್ ಕೋಶ ಹಾಗೂ ಅದರ ಉಪಯೋಗಗಳ ಬಗ್ಗೆ ಬರೆಯಿರಿ

ಉತ್ತರ:- ದ್ಯುತಿವಿದ್ಯುತ್ ಕೋಶವು ಒಂದು ಅರೆ ಸಿಲಿಂಡರ್ ಆಕಾರದ ದ್ಯುತಿ ಸಂವೇದಿ ತಟ್ಟೆ C (ಉತ್ಸರ್ಜಕ) ಮತ್ತು ಅದಕ್ಕೆ ಬೆಂಬಲವಾಗಿ ವಾಹಕ ಸುರುಳಿ A (ಸಂಗ್ರಾಹಕ) ಇವುಗಳು ನಿರ್ವಾತವಿರುವ ಗಾಜು ಅಥವಾ ಸ್ಫಟಿಕ ಬಲ್ಬ ಅನ್ನು ಒಳಗೊಂಡಿರುತ್ತದೆ. ಅದು ಅಧಿಕ ಸಾಮರ್ಥ್ಯದ ವಿದ್ಯುತ್‌ಕೋಶ B ಮತ್ತು ಮೈಕ್ರೋ ಅಮೀಟರ್(μA) ಒಳಗೊಂಡಿರುವ ಬಾಹ್ಯ ಮಂಡಲಕ್ಕೆ ಸಂಪರ್ಕಿಸಲಾಗಿದೆ ಕೆಲವೊಮ್ಮೆ C ತಟ್ಟೆಯ ಬದಲಿಗೆ ದ್ಯುತಿ ಸಂವೇದಕ ವಸ್ತುವಿನ ತೆಳುವಾದ ಹಾಳೆಯನ್ನು ಬಲ್ಬಿನ ಒಳಭಾಗದಲ್ಲಿ ಅಂಟಿಸಲಾಗುತ್ತದೆ ಬೆಳಕು ಪ್ರವೇಶಿಸಲು ಅವಕಾಶ ಸಿಗುವಂತೆ ಸ್ವಲ್ಪ ಭಾಗವನ್ನು ಸ್ವಚ್ಛವಾಗಿ ಬಿಡಲಾಗುತ್ತದೆ.

ಸೂಕ್ತ ತರಂಗಾಂತರದ ವಿಕಿರಣಗಳು ಉತ್ಸರ್ಜಿತ ತಟ್ಟೆ C ಯ ಮೇಲೆ ಬಿದ್ದು ಪತನಗೊಂಡಾಗ ದ್ಯುತಿ ಎಲೆಕ್ಟ್ರಾನ್‌ಗಳು ಹೊರಸೂಸಲ್ಪಡುತ್ತವೆ. ಈ ದ್ಯುತಿ ಎಲೆಕ್ಟ್ರಾನ್‌ಗಳು ಸಂಗ್ರಾಹಕ ತಟ್ಟೆಯ ಕಡೆಗೆ ಸೆಳೆಯಲ್ಪಡುತ್ತವೆ. ಸಾಧಾರಣವಾಗಿ ದ್ಯುತಿವಿದ್ಯುತ್ ಮೈಕ್ರೋ ಅಂಪಿಯರ್‌ನ ಕ್ರಮದಲ್ಲಿ ದ್ಯುತಿಕೋಶದಲ್ಲಿ ಲಭ್ಯವಾಗುತ್ತದೆ.



ದ್ಯುತಿಕೋಶವು ವಿಕಿರಣ ತೀವ್ರತೆಯನ್ನು ದ್ಯುತಿವಿದ್ಯುತ್ತನ್ನಾಗಿ ಪರಿವರ್ತಿಸುತ್ತದೆ ಈ ವಿದ್ಯುತ್ ನಿಯಂತ್ರಣ ವ್ಯವಸ್ಥೆಗಳನ್ನು ಮತ್ತು ಬೆಳಕಿನ ಅಳತೆಯ ಮಾಪನಗಳಲ್ಲಿ ಕಾರ್ಯನಿರ್ವಹಿಸಲು ಬಳಸುತ್ತಾರೆ ಸೀಸದ ಸಲ್ಫೈಡ್ ದ್ಯುತಿಕೋಶವು ಅವೆಕೆಂಪು ಕಿರಣಗಳಿಗೆ ಸಂವೇದಿಯಾಗಿರುವುದರಿಂದ ಅದನ್ನು ಜ್ವಲನ ಮಂಡಲದಲ್ಲಿ ಬಳಸುತ್ತೇವೆ. ವೈಜ್ಞಾನಿಕ ಕೆಲಸಗಳಲ್ಲಿ ಯಾವುದೇ ವಿಕಿರಣ ತೀವ್ರತೆಯನ್ನು ಅಳತೆಯಲು ದ್ಯುತಿಕೋಶಗಳನ್ನು ಬಳಸುತ್ತೇವೆ

ಛಾಯಾಗ್ರಹಣ ಕ್ಯಾಮೆರಾಗಳಲ್ಲಿ ಬೆಳಕಿನ ಮಾಪಕಗಳು ತೀವ್ರತೆಯನ್ನು ಅಳತೆ ಮಾಡಲು ದ್ಯುತಿಕೋಶಗಳನ್ನು ಬಳಸುತ್ತೇವೆ. ಬಾಗಿಲ ಬೆಳಕಿನ ವಿದ್ಯುತ್ ಮಂಡಲದಲ್ಲಿ ಅಳವಡಿಸಲಾದ ಈ ದ್ಯುತಿಕೋಶಗಳು ಸ್ವಯಂಚಾಲಿತ ಬಾಗಿಲುಗಳಲ್ಲಿ ಅಳವಡಿಕೆಯಾಗುತ್ತವೆ ಬಾಗಿಲಿಗೆ ಸಮೀಪಿಸುತ್ತಿರುವ ವ್ಯಕ್ತಿಯೊಬ್ಬ ದ್ಯುತಿಕೋಶದ ಮೇಲೆ ಪತನವಾಗುವ ಕಿರಣಕ್ಕೆ ಅಡ್ಡಿಪಡಿಸಬಹುದು ದ್ಯುತಿವಿದ್ಯುತ್ತಿನಲ್ಲಾಗುವ ಹಠಾತ್ ಬದಲಾವಣೆಯು ಬಾಗಿಲನ್ನು ಸ್ವಯಂಚಾಲಿತವಾಗಿ ತೆರೆಯುವ ಯಂತ್ರ ಕಾರ್ಯನಿರ್ವಹಿಸುವಂತೆ ಮಾಡುತ್ತದೆ ಮತ್ತು ಬಾಗಿಲು ತೆರೆಯಲ್ಪಡುತ್ತದೆ. ಕಿರಣದ ಅಡ್ಡವಾಗಿ ಹಾದುಹೋಗುವ ವ್ಯಕ್ತಿ ಅಥವಾ ವಸ್ತುವಿನಿಂದ ಉಂಟಾಗುವ ಬೆಳಕಿನ ಕಿರಣ ತಡೆಯನ್ನು ಎಣಿಕೆ ದಾಖಲಿಸುವ ಸಾಧನದ ನಿಯಂತ್ರಣದಲ್ಲಿ ಬಳಸಲಾಗುತ್ತದೆ. ಒಂದು ವೇಳೆ ವ್ಯಕ್ತಿಗಳು ಒಬ್ಬೊಬ್ಬರಾಗಿ ಆಗಮಿಸಿದಲ್ಲಿ ಈ ದ್ಯುತಿಕೋಶಗಳು ಸಭಾಂಗಣಕ್ಕೆ ಬರುವ ವ್ಯಕ್ತಿಗಳನ್ನು ಎಣಿಸಲು ಸಹಕಾರಿಯಾಗುತ್ತದೆ. ಅಲಾರಾಂನ ಮೇಲೆ ಬೀಳುತ್ತಿರುವ ವಿಕಿರಣಗಳಿಗೆ ಅಡ್ಡಿಯಾಗಿ ಇವುಗಳು ಶಬ್ದವನ್ನು ಉಂಟುಮಾಡುವ ಮೂಲಕ ಸಂಚಾರಿ ನಿಯಮಗಳನ್ನು ಉಲ್ಲಂಘನೆ ಮಾಡುವವರನ್ನು ಗುರುತಿಸಬಹುದಾಗಿದೆ.

ಬರ್ಗಲರ್ ಎಚ್ಚರಿಕೆ ಗಂಟೆಯಲ್ಲಿ ಕಣ್ಣಿಗೆ ಕಾಣಿಸದ ನೇರಳಾತೀತ ವಿಕಿರಣಗಳನ್ನು ನಿರಂತರವಾಗಿ ಬಾಗಿಲಿಗೆ ತಗಲಿಸಿದ ದ್ಯುತಿವಿದ್ಯುತ್‌ಕೋಶದ ಮೇಲೆ ಬೀಳುವಂತೆ ಮಾಡುತ್ತಾರೆ ಬಾಗಿಲಿನಿಂದ ವ್ಯಕ್ತಿಯು ಪ್ರವೇಶಿಸುವಾಗ ದ್ಯುತಿಕೋಶದ ಮೇಲೆ ಬೀಳುವ ಬೆಳಕಿಗೆ ಅಡ್ಡಿಯುಂಟಾಗುತ್ತದೆ. ದ್ಯುತಿವಿದ್ಯುತ್‌ನಲ್ಲಾಗುವ ಅನಿರೀಕ್ಷಿತ ಬದಲಾವಣೆಗಳು, ವಿದ್ಯುತ್‌ಗಂಟೆ ಕೂಗುವಂತೆ ಮಾಡುತ್ತದೆ ಬೆಂಕಿ ಎಚ್ಚರಿಕೆ ಗಂಟೆಗಳಲ್ಲಿಯೂ ಸುಮಾರು ದ್ಯುತಿಕೋಶಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಜೋಡಿಸಿಡಲಾಗುತ್ತದೆ. ಒಂದು ವೇಳೆ ಬೆಂಕಿ ಸಂಭವಿಸಿದರೆ, ಬೆಳಕಿನ ವಿಕರಣಗಳು ಈ ದ್ಯುತಿಕೋಶಗಳ ಮೇಲೆ ಬೀಳುತ್ತವೆ ಇದರಿಂದ ವಿದ್ಯುತ್‌ಮಂಡಲವು ಪೂರ್ಣಗೊಂಡು, ಎಚ್ಚರಿಕೆಯ ಸಂಕೇತವಾಗಿ ವಿದ್ಯುತ್‌ಗಂಟೆ ಅಥವಾ ಸೈರನ್ ಮೊಳಗುತ್ತದೆ.

ಚಲನಚಿತ್ರಗಳಲ್ಲಿ ಶಬ್ಧದ ಪುನರ್ ಸೃಷ್ಟಿಗೆ ಈ ದ್ಯುತಿಕೋಶಗಳನ್ನು ಬಳಸುತ್ತಾರೆ. ಅಂತೆಯೇ ಟೆಲಿವಿಷನ್ ಕ್ಯಾಮೆರಾಗಳಲ್ಲಿಯೂ ಪ್ರಸಾರಧ್ವನಿಯ ಉತ್ಪತ್ತಿಗೆ ಇವುಗಳು ಬಳಕೆಯಾಗುತ್ತವೆ ಕೈಗಾರಿಕೆಗಳಲ್ಲಿ ಲೋಹದ ಹಾಳೆಗಳ ಸಣ್ಣ ದೋಷಗಳನ್ನು, ಬಿರುಕುಗಳನ್ನು ಮತ್ತು ರಂಧ್ರಗಳನ್ನು ಪತ್ತೆಮಾಡಲು ಇವುಗಳನ್ನು ಬಳಸಲಾಗುತ್ತದೆ.

41) ವಿಕಿರಣಶಕ್ತಿ ಘಟಕ ಎಂದು ಕರೆಯುತ್ತೇವೆ?

ಉತ್ತರ:- ವಿದ್ಯುತ್ ಉತ್ಸರ್ಜನೆಯು ನಿರಂತರ ಶಕ್ತಿಯ ಹೀರುವಿಕೆಯಿಂದ ಸಂಭವಿಸಲಾರದು. ವಿಕಿರಣಶಕ್ತಿಯು ವಿಘಟಿತ ಘಟಕಗಳಿಂದ ನಿರ್ಮಿಸಲ್ಪಟ್ಟಿದೆ. ಅದನ್ನು ವಿಕಿರಣಶಕ್ತಿ ಘಟಕ ಎಂದು ಕರೆಯುತ್ತೇವೆ.

42) ಯಾವ ವಿಲಕ್ಷಣ ಸತ್ಯವನ್ನು ದ್ಯುತಿವಿದ್ಯುತ್ ಪರಿಣಾಮವು ಪ್ರಮಾಣೀಕರಿಸಿದೆ?

ಉತ್ತರ:-ಬೆಳಕು ಯಾವುದೇ ವಸ್ತುವಿನ ಜತೆ ಪರಸ್ಪರ ಕ್ರಿಯೆಯಲ್ಲಿ ವರ್ತಿಸುವಾಗ ಅದು ಕ್ವಾಂಟ ಅಥವಾ ಶಕ್ತಿಯ ಘಟಕ (packets) (ಪ್ರತಿ ಘಟಕದ ಶಕ್ತಿಯು $h\nu$ ಆಗಿದೆ)ಗಳಿಂದ ಮಾಡಲ್ಪಟ್ಟಿದೆ ಎಂಬಂತೆ ವರ್ತಿಸುತ್ತದೆ ಎಂಬ ವಿಲಕ್ಷಣ ಸತ್ಯವನ್ನು ದ್ಯುತಿವಿದ್ಯುತ್ ಪರಿಣಾಮವು ಪ್ರಮಾಣೀಕರಿಸಿದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹410

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ	₹400-766
ದ್ವಿತಳಿ	₹552-940

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಒಂಬತ್ತನೇ ವಾರ್ಷಿಕ ಪುಣ್ಯಸ್ಮರಣೆ

ಶ್ರೀ ಎನ್. ನಾರಾಯಣರೆಡ್ಡಿ
ನೀವು ನಮ್ಮನ್ನಗಲಿ ಒಂಬತ್ತು ವರ್ಷವಾದರೂ ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಅಚ್ಚ ಹಸಿರಾಗುಳಿದಿದೆ. ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನ.
ದುಃಖತಪ್ತರು: ಪುತ್ರ ಪದ್ಮನಾಭರೆಡ್ಡಿ, ಕಾಚರಕನಹಳ್ಳಿ ಮಾಜಿ ವಿರೋಧಪಕ್ಷದ ನಾಯಕರು ಬಿ.ಬಿ.ಎಂ.ಪಿ ಮತ್ತು ಕುಟುಂಬವರ್ಗದವರು

2ND YEAR ANNIVERSARY

In the ever-lasting memory of Late,
Shri, Sudheer Makki Subramanya
(20-05-1975 - 21-03-2020)
"We remember you each day.
You always live in our hearts.
Your dedication and hard work has become our benchmark to reach higher goals in times to come.
Keep us blessed always".
Deeply remembered by:-
Family, Friends and Employees of
DHRUV COMPUSOFT CONSULTANCY PVT LTD

ಜಿಎಸ್‌ಟಿ ಅಡಿ ಕ್ರಿಪ್ಟೊ ವರ್ಗೀಕರಣ

ನವದೆಹಲಿ (ಪಿಟಿಐ): ಕ್ರಿಪ್ಟೊ ಕರೆನ್ಸಿಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸೇವೆಗಳು ಅಥವಾ ಉತ್ಪನ್ನ ಎಂದು ವರ್ಗೀಕರಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಮೂಲಕ ಕ್ರಿಪ್ಟೊ ಕರೆನ್ಸಿ ವಹಿವಾಟಿನ ಅಷ್ಟೂ ಮೊತ್ತದ ಮೇಲೆ ತೆರಿಗೆ ವಿಧಿಸಬಹುದು ಎಂಬ ಆಲೋಚನೆ ಸರ್ಕಾರಕ್ಕಿದೆ.

ಈಗಿನ ನಿಯಮಗಳ ಅನ್ವಯ ಕ್ರಿಪ್ಟೊ ಕರೆನ್ಸಿ ವಿನಿಮಯ ಕೇಂದ್ರಗಳು ನೀಡುವ ಸೇವೆಗಳಿಗೆ ಶೇ 18ರಷ್ಟು ಜಿಎಸ್‌ಟಿ ಅನ್ವಯವಾಗುತ್ತದೆ. ಕ್ರಿಪ್ಟೊ ಕರೆನ್ಸಿಗಳ ಸ್ವರೂಪವು ಶೇ 28ರಷ್ಟು ತೆರಿಗೆ ಅನ್ವಯವಾಗುವ ಲಾಟರಿ, ಕ್ಯಾಸಿನೊ, ಬೆಟ್ಟಿಂಗ್, ಜೂಜು, ಕುದುರೆ ರೇಸ್‌ನಂತೆಯೇ ಇವೆ ಎಂದು ಜಿಎಸ್‌ಟಿ ಅಧಿಕಾರಿಗಳು ಹೇಳಿದ್ದಾರೆ.

ಕ್ರಿಪ್ಟೊ ಕರೆನ್ಸಿಗಳ ವರ್ಗೀಕರಣದ ಬಗ್ಗೆ ಸ್ಪಷ್ಟತೆ ಸಿಕ್ಕ ನಂತರದಲ್ಲಿ ತೆರಿಗೆ ಪ್ರಮಾಣದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ನಿಮ್ಮ ನಿದ್ದೆ ಹಾಳು ಮಾಡದಿರಲಿ ಹೂಡಿಕೆ

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಮೊದಲ ಬಾರಿಗೆ ಷೇರು ಹೂಡಿಕೆ ಮಾಡುವವರು ನಿಂತಲ್ಲಿ, ಕುಂತಲ್ಲಿ ಸೂಚ್ಯಂಕಗಳನ್ನೇ ಗಮನಿಸುತ್ತಿರುತ್ತಾರೆ. ಹೂಡಿಕೆ ಮಾಡಿದ್ದ ಯಾವ ಕಂಪನಿಯ ಷೇರಿನ ಬೆಲೆ ಏರಿಕೆಯಾಗಿದೆ, ಎಷ್ಟು ಲಾಭವಾಯಿತು – ಎಷ್ಟು ನಷ್ಟವಾಯಿತು ಎಂಬ ಲೆಕ್ಕಾಚಾರದಲ್ಲಿ ತೊಡಗಿರುತ್ತಾರೆ. ಈ ಚಡಪಡಿಕೆಯಲ್ಲಿ ಮಾನಸಿಕ ನೆಮ್ಮದಿ ಹಾಳು ಮಾಡಿಕೊಳ್ಳುತ್ತಾರೆ. ಷೇರು ಹೂಡಿಕೆ ಮಾಡಿ ನಿಶ್ಚಿಂತೆಯಿಂದ ಇರಲು ಏನು ಮಾಡಬೇಕು ಎನ್ನುವುದನ್ನು ಒಮ್ಮೆ ಕಲಿಯೋಣ!

1. ಶಕ್ತಿಮೀರಿದ ಹೂಡಿಕೆ ಬೇಡವೇಬೇಡ: 'ನಾನು ದೀರ್ಘಾವಧಿಗೆ ಹೂಡಿಕೆ ಮಾಡುತ್ತೇನೆ, ಅಲ್ಪಾವಧಿಯಲ್ಲಿ ಯಾರೂ ಹಣ ಗಳಿಸಿಲ್ಲ' ಎನ್ನುವ ಮನಸ್ಥಿತಿಯಲ್ಲಿ ಅನೇಕರು ಷೇರು ಮಾರುಕಟ್ಟೆ ಪ್ರವೇಶಿಸುತ್ತಾರೆ. ಆರಂಭಿಕ ಹಂತದಲ್ಲಿ ದೊಡ್ಡ ಮೊತ್ತದ ಹಣವನ್ನು ವಿವಿಧ ಷೇರುಗಳ ಮೇಲೆ ಹಾಕಿ ಒಂದಷ್ಟು ಲಾಭವನ್ನು ಗಳಿಸುತ್ತಾರೆ. ಆದರೆ, ಮಾರುಕಟ್ಟೆ ಬೀಳಲು ಆರಂಭಿಸಿದರೆ ಪೂರ್ವಾಪರ ಯೋಚಿಸದೆ ಷೇರುಗಳ ಮಾರಾಟಕ್ಕೆ ನಿಲ್ಲುತ್ತಾರೆ. ಹೀಗೆ ಮಾಡುವುದರಿಂದ ಷೇರು ಮಾರುಕಟ್ಟೆಯಲ್ಲಿ ಲಾಭ ಗಳಿಸಲು ಸಾಧ್ಯವಿಲ್ಲ. ರಿಸ್ಕ್ ತೆಗೆದುಕೊಳ್ಳಬಹುದು ಎನ್ನುವಷ್ಟು ಹಣವನ್ನು ಮಾತ್ರ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ. ಷೇರು ಹೂಡಿಕೆ ನಿಮ್ಮ ನಿದ್ದೆ ಕೆಡಿಸುತ್ತಿದೆ ಎಂದಾದರೆ ನೀವು ರಿಸ್ಕ್ ತೆಗೆದುಕೊಳ್ಳಬಹುದಾದ ಮಿತಿ ಮೀರಿ ಹೂಡಿಕೆ ಮಾಡಿದ್ದೀರಿ ಎಂದು ಅರ್ಥ.

2. ಎಚ್ಚರಿಕೆಯ ಹೂಡಿಕೆ ಇರಲಿ: ಒಂದಷ್ಟು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿದ್ದರೆ ಬೀಳುವ ಮಾರುಕಟ್ಟೆಯಲ್ಲಿ ಎಚ್ಚರಿಕೆಯ ಹೂಡಿಕೆ ಮಾಡುವುದು ಉತ್ತಮ. ಮಾರುಕಟ್ಟೆ ಕುಸಿತ ಕಂಡಿರುವಾಗ ಉತ್ತಮ ಕಂಪನಿಗಳ ಷೇರುಗಳು ಕಡಿಮೆ ಬೆಲೆಗೆ ಸಿಗುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ ನಿಮ್ಮ ಬಳಿ ಹೂಡಿಕೆಗೆ ₹ 50 ಸಾವಿರ ಇದೆ ಎಂದು ಭಾವಿಸಿ. ಆ ಹಣವನ್ನು 10 ಭಾಗಗಳಾಗಿ ಮಾಡಿ ಒಂದೊಂದು ಬಾರಿಗೆ ಮಾರುಕಟ್ಟೆ ಕುಸಿತ ಆಧರಿಸಿ ತಲಾ ಐದು ಸಾವಿರ ಹೂಡಿಕೆ ಮಾಡುತ್ತ ಬನ್ನಿ. ಇದರಿಂದ ಷೇರುಗಳ ಖರೀದಿ ದರದ ಸರಾಸರಿಯಲ್ಲಿ ಇಳಿಕೆಯಾಗುತ್ತದೆ. ಹೀಗೆ ಮಾಡಿದಾಗ ಷೇರು ಸೂಚ್ಯಂಕಗಳು ಜಿಗಿತ ಕಂಡಾಗ ನಿಮಗೆ ಹೆಚ್ಚು ಲಾಭವಾಗುತ್ತದೆ.

3. ಅತಿಯಾದ ಏರಿಳಿತವಿದ್ದಾಗ ಏನೂ ಮಾಡಬೇಡಿ: ನೀವು ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿಲ್ಲ ಎಂದಾದರೆ ಷೇರು ಮಾರುಕಟ್ಟೆಯಲ್ಲಿ ಅತಿಯಾದ ಏರಿಳಿತ ಕಂಡುಬಂದಾಗ ಏನೂ ಮಾಡದೆ ಸುಮ್ಮನಿರುವುದು ಒಳಿತು. ಅಸ್ಥಿರತೆಯ ಸೂಚ್ಯಂಕ (VOLATILITY INDEX) ಆಧರಿಸಿ ಷೇರು ಮಾರುಕಟ್ಟೆ ಯಾವ ಪ್ರಮಾಣದಲ್ಲಿ ಏರಿಳಿತ ಕಾಣುತ್ತಿದೆ ಎನ್ನುವುದನ್ನು ಅಂದಾಜಿಸಬಹುದು. ಏರಿಳಿತದ ಪ್ರಮಾಣ ಶೇಕಡ 20 ಅಂಶಗಳಿಗಿಂತ ಹೆಚ್ಚಿಗೆ ಇದ್ದರೆ ಹೂಡಿಕೆ ಮಾಡದಿರುವುದೇ ಒಳಿತು. ಭಾರತಕ್ಕೆ ಅನ್ವಯವಾಗುವ ಅಸ್ಥಿರತೆಯ ಸೂಚ್ಯಂಕವನ್ನು ಗೂಗಲ್‌ನ ನೆರವಿನಿಂದ ಕಂಡುಕೊಳ್ಳಬಹುದು.

4. ಕಡಿಮೆ ಬೆಲೆಗೆ ಖರೀದಿ, ಗರಿಷ್ಠ ಬೆಲೆಗೆ ಮಾರಾಟದ ಕನಸು: ಷೇರುಗಳ ಬೆಲೆ ಕನಿಷ್ಠ ಮಟ್ಟಕ್ಕೆ ಕುಸಿದಾಗ ಹೆಚ್ಚು ಹೂಡಿಕೆ ಮಾಡುವುದು, ಬೆಲೆ ಗರಿಷ್ಠ ಮಟ್ಟಕ್ಕೆ ತಲುಪಿದಾಗ ಮಾರಾಟ ಮಾಡುವುದು ಎಂಬ ಅರ್ಥವಿಲ್ಲದ ಲೆಕ್ಕಾಚಾರ ಮಾಡಬೇಡಿ. ಈ ಲೆಕ್ಕಾಚಾರ ಮಾಡಿ ಗೆದ್ದವರು ಇಲ್ಲ. 'ಷೇರುಗಳನ್ನು ಕನಿಷ್ಠ ಬೆಲೆಗೆ ಖರೀದಿಸಿ ಗರಿಷ್ಠ ಬೆಲೆಗೆ ಮಾರಾಟ ಮಾಡಲು ಇಬ್ಬರಿಂದ ಮಾತ್ರ ಸಾಧ್ಯ: ಒಬ್ಬ ಭಗವಂತ, ಮತ್ತೊಬ್ಬ ಸುಳ್ಳುಗಾರ' ಎಂದು ಖ್ಯಾತ ಹೂಡಿಕೆದಾರ ವಿಜಯ್ ಕೇಡಿಯಾ ಹೇಳುತ್ತಾರೆ. ಹಾಗಾಗಿ ನಿಯಮಿತವಾಗಿ, ಕ್ರಮಬದ್ಧವಾಗಿ ಅಧ್ಯಯನ ಮಾಡಿ ಉತ್ತಮ ಕಂಪನಿಗಳಲ್ಲಿ ಹೂಡಿಕೆ ಮುಂದುವರಿಸಿ, ಇದರಿಂದ ಷೇರುಪೇಟೆಯಲ್ಲಿ ಸಂಪತ್ತು ಸೃಷ್ಟಿಸುವ ನಿಮ್ಮ ಕನಸು ನನಸಾಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸತತ ಎರಡನೇ ವಾರ ಜಿಗಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಜಿಗಿದಿವೆ. ಮಾರ್ಚ್ 17ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 57,863 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 4.16ರಷ್ಟು ಚೇತರಿಸಿಕೊಂಡಿದೆ. 17,287 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 3.95ರಷ್ಟು ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ ದೇಶಿ ಮಾರುಕಟ್ಟೆಯಲ್ಲೂ ಗೋಚರಿಸಿದ ಪರಿಣಾಮ ಷೇರುಪೇಟೆ ಉತ್ತಮ ಗಳಿಕೆ ಕಾಣಲು ಸಾಧ್ಯವಾಗಿದೆ. ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರವನ್ನು 25 ಮೂಲಾಂಶಗಳಷ್ಟು ಹೆಚ್ಚಳ ಮಾಡಿದ್ದು ಸೂಚ್ಯಂಕಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿಲ್ಲ. ಅಮೆರಿಕದ ಅರ್ಥ ವ್ಯವಸ್ಥೆ ಉತ್ತಮ ರೀತಿಯಲ್ಲಿ ಸಾಗಲಿದೆ ಎನ್ನುವ ಹೇಳಿಕೆ ಸಹ ಷೇರುಪೇಟೆ ಪುಟಿದೇಳಲು ಕಾರಣವಾಗಿದೆ.

ಮಾರ್ಚ್ 7ರಂದು ಗರಿಷ್ಠ ಕುಸಿತ ಕಂಡಿದ್ದ ಸೂಚ್ಯಂಕಗಳು ಇದೀಗ ಮತ್ತೆ ಚೇತರಿಕೆಯ ಹಾದಿಗೆ ಮರಳಿವೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆಯ ಕಾರಣ ಕಳೆದ 8 ವಹಿವಾಟಿನ ದಿನಗಳಲ್ಲಿ ಸೆನ್ಸೆಕ್ಸ್ 4000ಕ್ಕೂ ಹೆಚ್ಚು ಅಂಶಗಳನ್ನು ಗಳಿಸಿಕೊಂಡಿದೆ. ಇನ್ನು ನಿಫ್ಟಿ (50) ಸೂಚ್ಯಂಕ ಸಹ 1,400 ಅಂಶಗಳ ಜಿಗಿತ ಕಂಡಿದೆ. ಮಾರ್ಚ್ 16ರಂದು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶಿಯ ಮಾರುಕಟ್ಟೆಯಲ್ಲಿ ₹ 312 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಫೆಬ್ರುವರಿ 11ರ ಬಳಿಕ ಇದೇ ಮೊದಲ ಬಾರಿಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಈ ಪ್ರಮಾಣದಲ್ಲಿ ಖರೀದಿಗೆ ಮುಂದಾಗಿರುವುದು ಮಾರುಕಟ್ಟೆ ಸಕಾರಾತ್ಮಕವಾಗಿ ಕಂಡುಬಂದಿದೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಮಾರುತಿ, ಟೈಟನ್, ಎಚ್‌ಡಿಎಫ್‌ಸಿ, ಮಹೀಂದ್ರ ತಲಾ ಶೇ 8ರಷ್ಟು ಜಿಗಿದಿವೆ. ಕೋಲ್ ಇಂಡಿಯಾ ಶೇ 3ರಷ್ಟು, ಒಎನ್‌ಜಿಸಿ ಶೇ 3ರಷ್ಟು, ಹಿಂಡಾಲ್ಕೊ ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್ ತಲಾ ಶೇ 2ರಷ್ಟು ಕುಸಿದಿವೆ.

ಮುನ್ನೋಟ: ಸೂಚ್ಯಂಕಗಳು ಸಕಾರಾತ್ಮಕವಾಗಿ ಕಂಡುಬಂದಿದೆ ಎಂದಾಕ್ಷಣ ಎಲ್ಲವೂ ಸರಿಯಾಗಿದೆ ಎಂದಲ್ಲ. ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ತಮ ಓಟ ಕಂಡ ಪರಿಣಾಮ ಅದರ ಅನುಕೂಲ ದೇಶಿ ಮಾರುಕಟ್ಟೆಗೂ ಸಿಕ್ಕಿದೆ. ಸೂಚ್ಯಂಕಗಳಲ್ಲಿ ಅಸ್ಥಿರತೆ ಮುಂದುವರಿಯಲಿದೆ. ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿದೆ ಎಂದುಕೊಂಡು ದೊಡ್ಡ ಮೊತ್ತದ ಹಣ ಹೂಡಿಕೆ ಮಾಡುವ ಸಮಯ ಇದಲ್ಲ ಎನ್ನುವ ಎಚ್ಚರಿಕೆ ಅಗತ್ಯ. ರಷ್ಯಾ–ಉಕ್ರೇನ್ ನಡುವಣ ಬಿಕ್ಕಟ್ಟು, ತೈಲ ಬೆಲೆ ಏರು ದಿಕ್ಕಿನಲ್ಲಿ ಸಾಗಲಿದೆ ಎನ್ನುವ ಅಂಶ ಸೇರಿ ಹಲವು ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಗತಿ ನಿರ್ಧರಿಸಲಿವೆ.

ಪೆಟ್ರೋಲ್ ಬಂಕ್‌ಗಳತ್ತ ಮುಖ ಮಾಡಿದ ಬಸ್, ಲಾರಿ, ಕೈಗಾರಿಕಾ ಬಳಕೆದಾರರು

ಡೀಸೆಲ್ ಸಗಟು ದರ ಲೀಟರಿಗೆ ₹ 25 ಏರಿಕೆ

ನವದೆಹಲಿ (ಪಿಟಿಐ): ಬಸ್, ಲಾರಿ, ಕೈಗಾರಿಕೆಗಳಿಗೆ ಸಗಟು ಲೆಕ್ಕದಲ್ಲಿ ಡೀಸೆಲ್ ಖರೀದಿಸುವವರಿಗೆ ಪ್ರತಿ ಲೀಟರ್‌ಗೆ ಬೆಲೆಯನ್ನು ₹ 25ರಷ್ಟು ಹೆಚ್ಚಿಸಲಾಗಿದೆ. ಆದರೆ, ಪೆಟ್ರೋಲ್ ಪಂಪ್‌ಗಳಲ್ಲಿನ ರಿಟೇಲ್ ಮಾರಾಟ ದರದಲ್ಲಿ ಬದಲಾವಣೆ ಆಗಿಲ್ಲ ಎಂದು ಮೂಲಗಳು ಹೇಳಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಯು ಶೇಕಡ 40ರಷ್ಟು ಏರಿಕೆ ಆಗಿರುವುದಕ್ಕೆ ಅನುಗುಣವಾಗಿ ಡೀಸೆಲ್ ಸಗಟು ದರದಲ್ಲಿ ಇಷ್ಟು ಏರಿಕೆ ಮಾಡಲಾಗಿದೆ ಎನ್ನಲಾಗಿದೆ.

ಭಾರಿ ಪ್ರಮಾಣದಲ್ಲಿ ಡೀಸೆಲ್ ಖರೀದಿಸುವವವರು ತಮಗೆ ಬೇಕಾದಷ್ಟು ಡೀಸೆಲ್‌ಅನ್ನು ಸಾಮಾನ್ಯವಾಗಿ ತೈಲ ಕಂಪನಿಗಳಿಂದ ನೇರವಾಗಿ ಟ್ಯಾಂಕರ್‌ಗಳಲ್ಲಿ ಖರೀದಿಸುತ್ತಾರೆ. ಆದರೆ, ಲೀಟರ್ ಡೀಸೆಲ್ ದರವು ₹ 25ರಷ್ಟು ಹೆಚ್ಚಾಗಿರುವುದರಿಂದ ಅವರು ಈಗ ಡೀಸೆಲ್ ಖರೀದಿಸಲು ರಿಟೇಲ್ ಬಂಕ್‌ಗಳಿಗೆ ಬರುತ್ತಿದ್ದಾರೆ. ಇದರಿಂದಾಗಿ ಈ ತಿಂಗಳಿನಲ್ಲಿ ಪೆಟ್ರೋಲ್ ಪಂಪ್‌ಗಳಲ್ಲಿನ ಮಾರಾಟ ಪ್ರಮಾಣವು ಐದುಪಟ್ಟು ಹೆಚ್ಚಾಗಿದೆ. ಇದು ರಿಟೇಲ್ ಮಾರಾಟಗಾರರ ನಷ್ಟವನ್ನು ಇನ್ನಷ್ಟು ಹೆಚ್ಚುವಂತೆ ಮಾಡಿದೆ.

> ದರ ಹೆಚ್ಚಳದಿಂದಾಗಿ ರಿಟೇಲ್ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್ ಖರೀದಿ ಮಾಡಬೇಕಾಗಿದೆ. ದರ ಏರಿಕೆಯಿಂದ ಉದ್ಯಮಕ್ಕೆ ಪೆಟ್ಟು ಬಿದ್ದಿದೆ
> **ಸದಾನಂದ ಛಾತ್ರ,** ದುರ್ಗಾಂಬ ಬಸ್ ಕಂಪನಿ ಮಾಲೀಕ

ಖಾಸಗಿ ಕಂಪನಿಗಳಾದ ನಯಾರಾ ಎನರ್ಜಿ, ಜಿಯೊ–ಬಿಪಿ ಮತ್ತು ಶೆಲ್ ಕಂಪನಿಗಳಿಗೆ ಹೆಚ್ಚು ನಷ್ಟವಾಗುತ್ತಿದೆ. ರಿಟೇಲ್ ಪಂಪ್‌ಗಳಲ್ಲಿ ಕಡಿಮೆ ಬೆಲೆಗೆ ಇಂಧನ ಮಾರುವುದಕ್ಕಿಂತ ಪಂಪ್‌ಗಳನ್ನು ಮುಚ್ಚುವುದೇ ಸೂಕ್ತ ಎನ್ನುವಂತಿದೆ ಇವುಗಳ ಸ್ಥಿತಿ ಎಂದು ಮೂಲಗಳು ತಿಳಿಸಿವೆ.

ಮಾರಾಟವು ಬಹುತೇಕ ಶೂನ್ಯ ಮಟ್ಟಕ್ಕೆ ಕುಸಿತ ಕಂಡಿದ್ದರಿಂದ ಹಾಗೂ ಸರ್ಕಾರಿ ಸ್ವಾಮ್ಯದ ಕಂಪನಿಗಳು ನೀಡುವ ಸಬ್ಸಿಡಿ ದರದೊಂದಿಗೆ ಪೈಪೋಟಿ ನೀಡಲು ಆಗದಿದ್ದ ಕಾರಣಕ್ಕೆ 2008ರಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ 1,432 ಪೆಟ್ರೋಲ್ ಪಂಪ್‌ಗಳನ್ನು ಮುಚ್ಚಿತ್ತು. ಭಾರಿ ಪ್ರಮಾಣದಲ್ಲಿ ಇಂಧನ ಬಳಸುವವರು ಇದೀಗ ಪೆಟ್ರೋಲ್ ಪಂಪ್‌ಗಳಿಗೆ ಬರುತ್ತಿರುವುದರಿಂದ ಖಾಸಗಿ ಕಂಪನಿಗಳಿಗೆ ಮತ್ತೊಮ್ಮೆ ಅಂಥದ್ದೇ ಪರಿಸ್ಥಿತಿ ಎದುರಾಗಬಹುದು ಎನ್ನಲಾಗಿದೆ.

ಸಗಟು ಲೆಕ್ಕದಲ್ಲಿ ಡೀಸೆಲ್ ಖರೀದಿಸುವವರಿಗೆ ಮುಂಬೈನಲ್ಲಿ ಪ್ರತಿ ಲೀಟರ್ ಬೆಲೆಯನ್ನು ₹ 122.05ಕ್ಕೆ ಹೆಚ್ಚಿಸಲಾಗಿದೆ. ಆದರೆ, ಪೆಟ್ರೋಲ್ ಪಂಪ್‌ಗಳಲ್ಲಿ ಮಾರಾಟ ಆಗುತ್ತಿರುವ ಡೀಸೆಲ್‌ನ ದರವು ಲೀಟರಿಗೆ ₹ 94.14ರಷ್ಟು ಇದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆ ಆಗುತ್ತಿದ್ದರೂ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಐದು ರಾಜ್ಯಗಳ ಚುನಾವಣೆಯ ಸಂದರ್ಭದಲ್ಲಿ, 2021ರ ನವೆಂಬರ್ 24ರಿಂದ ಪೆಟ್ರೋಲ್, ಡೀಸೆಲ್‌ನ ರಿಟೇಲ್ ಮಾರಾಟ ದರ ಬದಲಾವಣೆ ಮಾಡಲಿಲ್ಲ. ಮಾರ್ಚ್ 10ರ ಮತ ಎಣಿಕೆ ಪ್ರಕ್ರಿಯೆ ಮುಗಿದ ಬಳಿಕ ಇಂಧನ ಬೆಲೆ ಏರಿಕೆ ಆಗುವ ನಿರೀಕ್ಷೆ ಮಾಡಲಾಗಿತ್ತು.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ರಿಟೇಲ್ ಮಾರಾಟ ದರದಲ್ಲಿ ಬದಲಾವಣೆ ಮಾಡದೇ ಇರುವುದರಿಂದ ಖಾಸಗಿ ವಲಯದ ನಯಾರಾ ಎನರ್ಜಿ, ಜಿಯೊ–ಬಿಪಿ ಮತ್ತು ಶೇಲ್ ಕಂಪನಿಗಳು ಸಹ ಬೆಲೆ ಏರಿಕೆ ಮಾಡದೇ ಇರುವ ಅನಿವಾರ್ಯ ಪರಿಸ್ಥಿತಿಗೆ ಬಂದಿವೆ. ಒಂದೊಮ್ಮೆ ಬೆಲೆ ಏರಿಕೆ ಮಾಡಿದಲ್ಲಿ ಗ್ರಾಹಕರನ್ನು ಕಳೆದುಕೊಳ್ಳುವ ಆತಂಕ ಎದುರಾಗಿದೆ.

ಬೆಲೆ ಏರಿಕೆಯ ಕುರಿತಾಗಿ ನಯಾರಾ ಎನರ್ಜಿ ಪ್ರತಿಕ್ರಿಯೆ ನೀಡಿಲ್ಲ. 'ಬೆಲೆ ಏರಿಕೆಯಿಂದಾಗಿ ರಿಟೇಲ್ ಪೆಟ್ರೋಲ್ ಪಂಪ್‌ಗಳಲ್ಲಿ ಬೇಡಿಕೆಯಲ್ಲಿ ಭಾರಿ ಹೆಚ್ಚಳ ಕಂಡುಬಂದಿದೆ. ಬೆಲೆ ಏರಿಕೆ ಆಗಬಹುದು ಎನ್ನುವ ಕಾರಣಕ್ಕೆ ತೈಲ ವಿತರಕರು, ಗ್ರಾಹಕರು ಹೆಚ್ಚಿನ ಪ್ರಮಾಣದಲ್ಲಿ ಇಂಧನ ಖರೀದಿಸಿ ಇಟ್ಟುಕೊಳ್ಳುತ್ತಿದ್ದಾರೆ. ಇದರಿಂದಾಗಿ ಮಾರ್ಚ್‌ನಲ್ಲಿ ಮಾರಾಟವು ದಾಖಲೆ ಮಟ್ಟಕ್ಕೆ ಏರಿಕೆ ಆಗಲಿದೆ' ಎಂದು ಜಿಯೊ–ಬಿಪಿ ವಕ್ತಾರರೊಬ್ಬರು ತಿಳಿಸಿದ್ದಾರೆ.

ಡೀಸೆಲ್ ಮಾರಾಟ ಹೆಚ್ಚಳ

ಖಾಸಗಿ ಕಂಪನಿಗಳು ತೈಲ ಮಾರಾಟದ ಮಾಹಿತಿಯನ್ನು ಬಹಿರಂಗಪಡಿಸಿಲ್ಲ. ಸರ್ಕಾರಿ ಸ್ವಾಮ್ಯದ ಕಂಪನಿಗಳು ನೀಡಿರುವ ಮಾಹಿತಿಯ ಪ್ರಕಾರ, ಮಾರ್ಚ್ 1ರಿಂದ 15ರವರೆಗಿನ ಅವಧಿಯಲ್ಲಿ 35.3 ಲಕ್ಷ ಟನ್ ಡೀಸೆಲ್ ಮಾರಾಟ ಆಗಿದೆ. ಇದು ಫೆಬ್ರುವರಿ 1ರಿಂದ 15ರವರೆಗಿನ ಅವಧಿಗೆ ಹೋಲಿಸಿದರೆ ಶೇ 32.8ರಷ್ಟು ಹೆಚ್ಚು.

ರಿಟೇಲ್ ಗ್ರಾಹಕರ ಬೇಡಿಕೆಯನ್ನು ಪೂರೈಸಲು ಬದ್ಧವಿರುವುದಾಗಿ ಜಿಯೊ–ಬಿಪಿ ವಕ್ತಾರರೊಬ್ಬರು ಹೇಳಿದ್ದಾರೆ.

ಅಂಕಿ-ಅಂಶಗಳು

81,699 ದೇಶದಲ್ಲಿನ ಒಟ್ಟಾರೆ ಪೆಟ್ರೋಲ್ ಬಂಕ್‌ಗಳು

90% ಸರ್ಕಾರಿ ಸ್ವಾಮ್ಯದ ಕಂಪನಿಗಳ ಪಾಲು

6,510 ನಯಾರಾ ಎನರ್ಜಿ

1,454 ಜಿಯೊ–ಬಿಪಿ

'ಎಥೆನಾಲ್: ಟೊಯೋಟ, ಮಾರುತಿ, ಹುಂಡೈ ಭರವಸೆ'

ನವದೆಹಲಿ: ಸಂಪೂರ್ಣವಾಗಿ ಎಥೆನಾಲ್ ಅಥವಾ ಪೆಟ್ರೋಲ್ ಬಳಸಬಹುದಾದ ಎಂಜಿನ್ ಇರುವ ವಾಹನಗಳನ್ನು ಆರು ತಿಂಗಳಲ್ಲಿ ಮಾರುಕಟ್ಟೆಗೆ ತರುವುದಾಗಿ ಟೊಯೋಟ, ಮಾರುತಿ ಸುಜುಕಿ ಮತ್ತು ಹುಂಡೈ ಕಂಪನಿಗಳು ಭರವಸೆ ನೀಡಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಭಾನುವಾರ ತಿಳಿಸಿದ್ದಾರೆ.

ಸಕ್ಕರೆ ಮತ್ತು ಎಥೆನಾಲ್ ಕುರಿತು ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, ಇಂಧನ ವೆಚ್ಚ ಕಡಿಮೆ ಮಾಡುವ ಸಲುವಾಗಿ ವಿಮಾನಯಾನ ವಲಯದಲ್ಲಿಯೂ ಎಥೆನಾಲ್ ಬಳಸುವ ಬಗ್ಗೆ ಕೇಂದ್ರ ಸರ್ಕಾರ ಆಲೋಚನೆ ನಡೆಸುತ್ತಿದೆ ಎಂದು ಹೇಳಿದ್ದಾರೆ. ಸಕ್ಕರೆ ಉತ್ಪಾದನೆಯನ್ನು ಕಡಿಮೆ ಮಾಡುವ ಮೂಲಕ ಎಥೆನಾಲ್ ಉತ್ಪಾದನೆ ಹೆಚ್ಚಿಸುವಂತೆ ಅವರು ಕಾರ್ಖಾನೆಗಳಿಗೆ ಸಲಹೆ ನೀಡಿದ್ದಾರೆ.

ಮಧ್ಯಸ್ಥಿಕೆ ಮೂಲಕ ಗುತ್ತಿಗೆದಾರರಿಗೆ ₹88,000 ಕೋಟಿ: ಸ್ಥಾಯಿ ಸಮಿತಿ

ನವದೆಹಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಕೈಗೊಂಡಿರುವ ಹೆದ್ದಾರಿ ಯೋಜನೆಗಳ ವಿವಾದಕ್ಕೆ ಸಂಬಂಧಿಸಿ ಗುತ್ತಿಗೆದಾರರು ಮಧ್ಯಸ್ಥಿಕೆ ಮೂಲಕ ಕಳೆದ ಐದು ವರ್ಷಗಳ ಅವಧಿಯಲ್ಲಿ ₹88,100 ಕೋಟಿ ಪಡೆದುಕೊಂಡಿದ್ದಾರೆ ಎಂದು ಸಂಸದೀಯ ಸ್ಥಾಯಿ ಸಮಿತಿ ವರದಿ ಹೇಳಿದೆ.

ಗುತ್ತಿಗೆ ವಿವಾದಕ್ಕೆ ಸಂಬಂಧಿಸಿ ಗುತ್ತಿಗೆದಾರರಿಂದ ಎನ್‌ಎಚ್‌ಎಐ ಕೂಡ ₹39,221 ಕೋಟಿ ಮಧ್ಯಸ್ಥಿಕೆ ಮೂಲಕ ಪಡೆದುಕೊಂಡಿದೆ ಎಂದು ಸಂಸತ್ತಿನಲ್ಲಿ ಮಂಡಿಸಲಾದ ತನ್ನ ವರದಿಯಲ್ಲಿ ಸಾರಿಗೆ ಸಚಿವಾಲಯದ ಸ್ಥಾಯಿ ಸಮಿತಿ ಹೇಳಿದೆ. ಒಟ್ಟು 122 ಪ್ರಕರಣಗಳು ಮಧ್ಯಸ್ಥಿಕೆಗೆ ಬಾಕಿ ಉಳಿದಿದ್ದು, 21 ಪ್ರಕರಣಗಳು ರಾಜಿ ಹಂತದಲ್ಲಿವೆ ಮತ್ತು 18 ಪ್ರಕರಣಗಳು ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ ಎಂದು ತಿಳಿಸಿದೆ. ಬಿಜೆಪಿ ರಾಜ್ಯಸಭಾ ಸದಸ್ಯ ಟಿ.ಜಿ. ವೆಂಕಟೇಶ್ ನೇತೃತ್ವದ ಸ್ಥಾಯಿ ಸಮಿತಿಯು ಬಾಕಿ ಉಳಿದಿರುವ ಪ್ರಕರಣಗಳ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ರಸ್ತೆ ಯೋಜನೆಗಳು ಸ್ಥಗಿತಗೊಳ್ಳದಂತೆ ಖಾತ್ರಿಪಡಿಸಿಕೊಳ್ಳಲು ಮಧ್ಯಸ್ಥಿಕೆ ಪ್ರಕ್ರಿಯೆಯನ್ನು ತ್ವರಿತವಾಗಿ ನಡೆಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಕರ್ನಾಟಕಕ್ಕೆ 1.5 ಟನ್‌ಗಳಷ್ಟು ಅಕ್ಕಿ ಕಳ್ಳಸಾಗಣೆ; ಚಾಲಕನ ಬಂಧನ

ಈರೋಡ್(ತಮಿಳುನಾಡು) : ಕರ್ನಾಟಕಕ್ಕೆ ವ್ಯಾನ್‌ವೊಂದರ ಮೂಲಕ ಕಳ್ಳಸಾಗಣೆ ಮಾಡಲಾಗುತ್ತಿದ್ದ 1.5 ಟನ್‌ಗಳಷ್ಟು ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಆಹಾರ ವಿಭಾಗದ ಅಧಿಕಾರಿಗಳು ಭಾನುವಾರ ತಿಳಿಸಿದರು.

'ತಮಿಳುನಾಡು–ಕರ್ನಾಟಕ ಗಡಿಭಾಗದಲ್ಲಿರುವ ಬಾರ್ಗೂರ್ ಚೆಕ್‌ಪೋಸ್ಟ್‌ನಲ್ಲಿ ಪರಿಶೀಲನೆ ವೇಳೆ ಈ ಪ್ರಕರಣ ಬೆಳಕಿಗೆ ಬಂದಿದೆ. ವ್ಯಾನ್ ಚಾಲಕನನ್ನು ಬಂಧಿಸಲಾಗಿದ್ದು, ಆತನನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಇದು ಇಲ್ಲಿನ ಪಡಿತರ ಅಂಗಡಿಗೆ ಸೇರಿದ ಅಕ್ಕಿಯಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಗಂಗೆಯ ಹೂಳಿನಿಂದ ಸಾರವರ್ಧಿತ ಗೊಬ್ಬರ ಉತ್ಪಾದನೆ: ಕೇಂದ್ರ ಚಿಂತನೆ

ನವದೆಹಲಿ (ಪಿಟಿಐ): ಸಾವಯವ ಕೃಷಿ ಉತ್ತೇಜಿಸಲು ಮತ್ತು ನದಿಗಳಿಗೆ ರಾಸಾಯನಿಕ ಸೇರದಂತೆ ತಡೆಗಟ್ಟಲು ಗಂಗಾ ನದಿಯ ಕೆಸರಿನಿಂದ (ಹೂಳು) ಸಾರವರ್ಧಿತ ಗೊಬ್ಬರ ಉತ್ಪಾದಿಸಲು ಕೇಂದ್ರ ಸರ್ಕಾರ ಯೋಜಿಸುತ್ತಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಂಗಾ ನದಿಯ ಸಂಸ್ಕರಿತ ನೀರು, ರಂಜಕ ಮತ್ತು ಪೋಷಕಾಂಶಗಳಿಂದ ಸಮೃದ್ಧವಾಗಿದೆ. ಇದು ಬೆಳೆಗಳ ಬೆಳವಣಿಗೆಗೆ ಉತ್ತಮವಾಗಿದೆ. ಕಳೆದ ಎರಡು ವಾರಗಳಲ್ಲಿ ಗಂಗಾ ನದಿಯ ಹೂಳನ್ನು ನಿಭಾಯಿಸುವ ವಿಧಾನಗಳ ಕುರಿತು ಹಲವು ಸುತ್ತಿನ ಚರ್ಚೆ ನಡೆಸಲಾಗಿದೆ ಎಂದು ಸ್ವಚ್ಛ ಗಂಗಾ ರಾಷ್ಟ್ರೀಯ ಯೋಜನೆ (ಎನ್‌ಎಂಸಿಜಿ) ನಿರ್ದೇಶಕ ಜನರಲ್ ಅಶೋಕ್ ಕುಮಾರ್ ಹೇಳಿದ್ದಾರೆ.

ಗಂಗಾ ನದಿಯ ಹೂಳಿನಿಂದ ಉತ್ಪಾದಿಸುವ ಸಾರವರ್ಧಿತ ಗೊಬ್ಬರವನ್ನು ರೈತರಿಗೆ ರಿಯಾಯಿತಿ ದರದಲ್ಲಿ ಪೂರೈಸುವ ಬಗ್ಗೆಯೂ ಪ್ರಯತ್ನ ನಡೆದಿದೆ. ಈ ಸಾರವರ್ಧಿತ ಗೊಬ್ಬರ ಉತ್ಪಾದನೆಗೆ ಕಂಪನಿಗಳೊಂದಿಗೂ ಮಾತುಕತೆ ನಡೆಯುತ್ತಿದೆ ಎಂದು ಅವರು ಹೇಳಿದರು.

'ಸಂಸ್ಕರಿಸಿದ ಹೂಳು ಗೊಬ್ಬರಕ್ಕೆ ಸಮನಾಗಿದೆ. ಇದಕ್ಕೆ ಒಂದಿಷ್ಟು ಪೋಷಕಾಂಶಗಳನ್ನು ಸೇರಿಸಿದರೆ ಒಳ್ಳೆಯ ಗೊಬ್ಬರವಾಗಲಿದೆ. ಸಾವಯವ ಕೃಷಿಗೆ ಹೇಳಿ ಮಾಡಿಸಿದಂತೆಯೂ ಇದೆ. ಈ ಮೂಲಕ ಎರಡು ಉದ್ದೇಶಗಳನ್ನು ಸಾಧಿಸಬಹುದಾಗಿದೆ. ಮೊದಲನೆಯದಾಗಿ, ರೈತರು ನೈಸರ್ಗಿಕ ರಸಗೊಬ್ಬರ ಬಳಸಲು ಉತ್ತೇಜಿಸುವುದು, ಮತ್ತೊಂದು, ನದಿಯಲ್ಲಿ ಹೂಳು ತುಂಬಿಕೊಳ್ಳುವ ಸಮಸ್ಯೆಯೂ ಪರಿಹಾರವಾಗಲಿದೆ' ಎಂದು ಅವರು ತಿಳಿಸಿದರು.

ಚಿನ್ನದ ಇಟಿಎಫ್‌ನಿಂದ ಹಿಂತೆಗೆತ

ನವದೆಹಲಿ (ಪಿಟಿಐ): ಹೂಡಿಕೆದಾರರು ಈಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆಗೆ ಹೆಚ್ಚಿನ ಗಮನ ನೀಡಿದ್ದರಿಂದ ಫೆಬ್ರುವರಿಯಲ್ಲಿ ಚಿನ್ನದ ವಿನಿಮಯ ವಹಿವಾಟು ನಿಧಿಗಳಿಂದ (ಇಟಿಎಫ್) ₹ 248 ಕೋಟಿ ಬಂಡವಾಳ ಹೊರಹರಿವು ಆಗಿದೆ.

ಜನವರಿಯಲ್ಲಿ ಚಿನ್ನದ ಇಟಿಎಫ್‌ಗಳಿಂದ ₹ 452 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

ಬಂಡವಾಳ ಹೊರಹರಿವನ್ನು ಎರಡು ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು ಎಂದು ಎಲ್‌ಎಕ್ಸ್‌ಎಂಇ ಸ್ಥಾಪಕಿ ಪ್ರೀತಿ ರಾಠಿ ಗುಪ್ತಾ ಹೇಳಿದ್ದಾರೆ. ಮೊದಲನೆಯದು, ಈಕ್ವಿಟಿ ಮಾರುಕಟ್ಟೆ ಗಳಿಕೆಯು ಆಕರ್ಷಕ ಆಗಿರುವುದರಿಂದ ಹೂಡಿಕೆದಾರರು ಚಿನ್ನದ ಇಟಿಎಫ್ ಬದಲಾಗಿ ಈಕ್ವಿಟಿಯಲ್ಲಿ ಬಂಡವಾಳ ತೊಡಗಿಸಿದ್ದಾರೆ. ಸದ್ಯ ಮಾರುಕಟ್ಟೆಯಲ್ಲಿ ಇರುವ ಅಸ್ಥಿರತೆಯನ್ನು ಷೇರುಪೇಟೆ ಪ್ರವೇಶಿಸಲು ಒಂದು ಅವಕಾಶವಾಗಿಯೂ ಹೂಡಿಕೆದಾರರು ನೋಡುತ್ತಿದ್ದಾರೆ.

ಎರಡನೇಯದು, ಚಿನ್ನದ ಬೆಲೆ ಏರಿಕೆ ಆಗಿರುವುದರಿಂದ ಲಾಭ ಮಾಡಿಕೊಳ್ಳಲು ಹೂಡಿಕೆದಾರರು ಮುಂದಾದರು. ಹೀಗಾಗಿ ಚಿನ್ನದ ಇಟಿಎಫ್‌ನಿಂದ ಹೊರಬಂದು ಇತರೆ ಹೂಡಿಕೆ ವರ್ಗಗಳಲ್ಲಿ ತೊಡಗಿಸಿದರು ಎಂದು ವಿವರಿಸಿದ್ದಾರೆ. ಚಿನ್ನದ ಇಟಿಎಫ್‌ನ ನಿರ್ವಹಣಾ ಸಂಪತ್ತು ಮೌಲ್ಯವು ಜನವರಿಯಲ್ಲಿ ₹ 17,839 ಕೋಟಿಷ್ಟು ಇದ್ದಿದ್ದು ಫೆಬ್ರುವರಿ ಅಂತ್ಯಕ್ಕೆ ₹ 18,727 ಕೋಟಿಗೆ ಏರಿಕೆ ಆಗಿದೆ.

ಬಿಎಸ್‌ಎನ್‌ಎಲ್: ಗ್ರಾಹಕರನ್ನು ಉಳಿಸಿಕೊಳ್ಳುವ ವಿಶ್ವಾಸ

ನವದೆಹಲಿ (ಪಿಟಿಐ): ಬಿಎಸ್‌ಎನ್‌ಎಲ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಸೇವೆಗಳಿಂದ ₹ 17 ಸಾವಿರ ಕೋಟಿ ಆದಾಯ ನಿರೀಕ್ಷಿಸಿದೆ. ಇದು ಹಿಂದಿನ ಹಣಕಾಸು ವರ್ಷದ ಆದಾಯಕ್ಕಿಂತ ಕಡಿಮೆ.

ಮುಂದಿನ ದಿನಗಳಲ್ಲಿ ಕಂಪನಿಯು ಗುಣಮಟ್ಟದ 4ಜಿ ಸೇವೆಗಳನ್ನು ಆರಂಭಿಸಲಿದ್ದು, ಆ ಮೂಲಕ ಗ್ರಾಹಕರನ್ನು ಉಳಿಸಿಕೊಳ್ಳಲಿದೆ ಎಂಬ ವಿಶ್ವಾಸವನ್ನು ಕಂಪನಿಯ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಪಿ.ಕೆ. ಪುರವಾರ್ ವ್ಯಕ್ತಪಡಿಸಿದ್ದಾರೆ.

ಖಾಸಗಿ ದೂರಸಂಪರ್ಕ ಸೇವಾ ಕಂಪನಿಗಳು 5ಜಿ ಸೇವೆಗಳನ್ನು ಆರಂಭಿಸಿದರೂ, ಬಿಎಸ್‌ಎನ್‌ಎಲ್‌ಗೆ ತಕ್ಷಣ ಹಾನಿಯಾಗದು. 5ಜಿ ಸೇವೆ ಪಡೆಯಲು ಅಗತ್ಯವಿರುವ ಸಾಧನಗಳು ಈಗಷ್ಟೇ ಮಾರುಕಟ್ಟೆಗೆ ಬರುತ್ತಿವೆ ಎಂದು ಪುರವಾರ್ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಭಾರತ್ ಬ್ರಾಡ್‌ಬ್ಯಾಂಡ್ ನಿಗಮ್ ಲಿಮಿಟೆಡ್ ಕಂಪನಿಯನ್ನು ಬಿಎಸ್‌ಎನ್‌ಎಲ್ ಜೊತೆ ವಿಲೀನ ಮಾಡುವ ಚಿಂತನೆ ಹೊಂದಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002.

ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 18,000-56,000/- (ತಕ್ಷಣ ಬೇಕಾಗಿದ್ದಾರೆ) ವಸತಿಯೂಟದೊಂದಿಗೆ 8197650569, 7204396011

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ವ್ಯಾಪಾರ
Business to Business
Business

★ಮೇಣದಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣದಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

ಭವಿಷ್ಯ
Astrology

★ನಂ.1 ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್* ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್‌ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845333808

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

||ಉಚಿತ ಭವಿಷ್ಯ||: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

ಪ್ರವಾಸ
Travel

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865. 08026565085.

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಭಾರತದ ಜೋಡಿ ತ್ರಿಷಾ–ಗಾಯತ್ರಿಗೆ ನಿರಾಶೆ

ವಿಕ್ಟರ್ ಚಾಂಪಿಯನ್; ಲಕ್ಷ್ಯ ರನ್ನರ್ ಅಪ್

ಬರ್ಮಿಂಗ್‌ಹ್ಯಾಮ್: ಭಾರತದ 'ಯುವತಾರೆ' ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸುವ ಕನಸು ನನಸಾಗಲಿಲ್ಲ.

ಭಾನುವಾರ ನಡೆದ ಫೈನಲ್‌ನಲ್ಲಿ 20 ವರ್ಷದ ಲಕ್ಷ್ಯ 10–21, 15–21ರಿಂದ ಡೆನ್ಮಾರ್ಕಿನ ವಿಕ್ಟರ್ ಅಕ್ಸೆಲ್‌ಸೇನ್ ವಿರುದ್ಧ ಸೋತರು. ಈ ಪಂದ್ಯ 53 ನಿಮಿಷ ನಡೆಯಿತು.

ಟೂರ್ನಿಯ ಇತಿಹಾಸದಲ್ಲಿ ಪುರುಷರ ಸಿಂಗಲ್ಸ್ ಫೈನಲ್ ತಲುಪಿದ ಭಾರತದ ಮೂರನೇ ಆಟಗಾರನೆಂಬ ಹೆಗ್ಗಳಿಕೆ ಲಕ್ಷ್ಯ ಸೇನ್ ಅವರದ್ದು. ಈ ಹಿಂದೆ ಪ್ರಕಾಶ್ ಪಡುಕೋಣೆ ಮತ್ತು ಪುಲ್ಲೇಲಾ ಗೋಪಿಚಂದ್ ಪ್ರಶಸ್ತಿ ಜಯಿಸಿದ್ದರು.

ಅಗ್ರಶ್ರೇಯಾಂಕದ ವಿಕ್ಟರ್ ಮೊದಲ ಗೇಮ್‌ನ ಆರಂಭದಲ್ಲಿಯೇ ಆಕ್ರಮಣಕಾರಿ ಆಟಕ್ಕಿಳಿದರು. ಅವರ ವೇಗಕ್ಕೆ ಪ್ರತ್ಯುತ್ತರ ನೀಡುವಲ್ಲಿ ಲಕ್ಷ್ಯ ಯಶಸ್ವಿಯಾಗಲಿಲ್ಲ. ಆದ್ದರಿಂದ 11 ಅಂಕಗಳ ಅಂತರದಿಂದ ಮೊದಲ ಗೇಮ್ ಸೋತರು.

ಎರಡನೇ ಗೇಮ್‌ನಲ್ಲಿ ವಿರೋಚಿತ ಆಟವಾಡಿದ ಲಕ್ಷ್ಯ ಗಮನ ಸೆಳೆದರು. ಆದರೆ ವಿಕ್ಟರ್ ಅವರ ಅನುಭವದ ಮುಂದೆ ಲಕ್ಷ್ಯ ಪ್ರಯತ್ನ ಸಾಕಾಗಲಿಲ್ಲ.

ಭಾರತದ ಜೋಡಿಗೆ ನಿರಾಶೆ: ಮಹಿಳೆಯರ ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ತ್ರಿಷಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ನಿರಾಶೆ ಅನುಭವಿಸಿದರು.

ಈ ಜೋಡಿಯು ಇದೇ ಮೊದಲ ಬಾರಿಗೆ ಸೆಮಿಫೈನಲ್ ಪ್ರವೇಶಿಸಿತ್ತು. ತ್ರಿಷಾ ಮತ್ತು ಗಾಯತ್ರಿ 17–21, 16–21ರಿಂದ ಚೀನಾದ ಶು ಶಿಯಾನ್ ಝಾಂಗ್ ಮತ್ತು ಯೂ ಝೆಂಗ್ ವಿರುದ್ಧ ಸೋತರು.

51 ನಿಮಿಷಗಳ ಹೋರಾಟದಲ್ಲಿ ಚೀನಾದ ಆಟಗಾರ್ತಿಯರ ವೇಗದ ಮುಂದೆ ಭಾರತದ ಜೋಡಿಯ ಪ್ರಯತ್ನ ಸಾಕಾಗಲಿಲ್ಲ.

ಗಾಯತ್ರಿ-ತ್ರಿಷಾ ಜೋಡಿಯು ಇದೇ ಮೊದಲ ಬಾರಿಗೆ ಸೆಮಿಫೈನಲ್ ಪ್ರವೇಶಿಸಿತ್ತು.

ಈ ವಿಭಾಗದ ಫೈನಲ್‌ನಲ್ಲಿ ಜಪಾನಿನ ನಮಿ ಮಟ್ಸುಯಾಮಾ ಮತ್ತು ಚಾಹಿರು ಶಿದಾ 21–13, 21–9ರಿಂದ ಚೀನಾದ ಝಾಂಗ್ ಮತ್ತು ಝೆಂಗ್ ವಿರುದ್ಧ ಜಯಭೇರಿ ಬಾರಿಸಿದರು.

ಪುರುಷರ ಡಬಲ್ಸ್ ಫೈನಲ್‌ನಲ್ಲಿ ಇಂಡೋನೇಷ್ಯಾದ ಮೊಹಮ್ಮದ್ ಶೋಹಿಬುಲ್ ಫಿಕ್ರಿ ಮತ್ತು ಬಗಾಸ್ ಮೌಲಾನಾ 21–19, 21–13ರಿಂದ ತಮ್ಮದೇ ದೇಶದ ಮೊಹಮ್ಮದ್ ಎಹಸಾನ್ ಮತ್ತು ಹೆಂದ್ರಾ ಸೆತಿಯಾವನ್ ವಿರುದ್ಧ ಗೆದ್ದರು.

ಪ್ರಶಸ್ತಿ ಗೆದ್ದ ಡೆನ್ಮಾರ್ಕಿನ ವಿಕ್ಟರ್ ಎಕ್ಸೆಲ್‌ಸೆನ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದ ಅಕಾನೆ ಯಾಮಗುಚಿ ಎಎಫ್‌ಪಿ ಚಿತ್ರ

ಅಕಾನೆಗೆ ಕಿರೀಟ

ಜಪಾನ್‌ನ ಅಕಾನೆ ಯಾಮಗುಚಿ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ ಅಕಾನೆ 21–15, 21–15ರ ನೇರ ಗೇಮ್‌ಗಳಲ್ಲಿ ದಕ್ಷಿಣ ಕೊರಿಯಾದ ಆನ್ ಸಿ ಯಂಗ್ ವಿರುದ್ಧ ಜಯಭೇರಿ ಬಾರಿಸಿದರು. ವಿಶ್ವ ಶ್ರೇಯಾಂಕದ ಎರಡನೇ ಸ್ಥಾನದಲ್ಲಿರುವ ಅಕಾನೆ ನಾಲ್ಕನೇ ಶ್ರೇಯಾಂಕದ ಸೆಯಾಂಗ್ ವಿರುದ್ಧದ ಪಂದ್ಯದ ಆರಂಭ ದಿಂದಲೇ ಮೇಲುಗೈ ಸಾಧಿಸಿದರು. ಎರಡೂ ಗೇಮ್‌ಗಳ ಯಾವುದೇ ಹಂತದಲ್ಲಿಯೂ ಅಕಾನೆ ತಮ್ಮ ಹಿಡಿತ ಸಡಿಲಿಸಲಿಲ್ಲ. ಬೇಸ್‌ಲೈನ್ ಆಟದಲ್ಲಿ ಚುರುಕುತನ ಮೆರೆದ ಅಕಾನೆ, ರಭಸದ ಸ್ಮ್ಯಾಷ್‌ಗಳನ್ನು ಸಿಡಿಸಿ ಎದುರಾಳಿಯ ಒತ್ತಡ ಹೆಚ್ಚಿಸಿದರು.

'ಹೊಸಬರಿಗೆ ಅನುಭವಿಗಳ ಮಾರ್ಗದರ್ಶನ'

ಮುಂಬೈ (ಪಿಟಿಐ): ಮೊದಲಿನಿಂದಲೂ ತಂಡದಲ್ಲಿರುವ ಆಟಗಾರರು ಈ ವರ್ಷ ಹೊಸದಾಗಿ ಸೇರ್ಪಡೆಯಾದವರಿಗೆ ಮಾರ್ಗದರ್ಶಕರಾಗುವರು. ಎಲ್ಲರೂ ತಂಡವಾಗಿ ಉತ್ತಮ ಫಲಿತಾಂಶ ನೀಡುವರು ಎಂದು ಡೆಲ್ಲಿ ಕ್ಯಾಪಿಟಲ್ಸ್ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಹೇಳಿದರು.

ಮಾರ್ಚ್ 26ರಿಂದ ಐಪಿಎಲ್ ನಡೆಯಲಿದೆ. ಈಚೆಗೆ ನಡೆದಿದ್ದ ಹರಾಜು ಪ್ರಕ್ರಿಯೆಗೂ ಮುನ್ನ ಡೆಲ್ಲಿ ತಂಡವು ರಿಷಭ್ ಪಂತ್, ಪೃಥ್ವಿ ಶಾ, ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ದಕ್ಷಿಣ ಆಫ್ರಿಕಾದ ಎನ್ರಿಚ್ ನಾಕಿಯಾ ಅವರನ್ನು ಉಳಿಸಿಕೊಂಡಿತ್ತು.

'ಹೋಟೆಲ್‌ನಲ್ಲಿ ಇರುವಾಗ ತಮ್ಮ ಕೋಣೆಗಳ ಬಾಗಿಲುಗಳನ್ನು ಸದಾ ತೆರೆದಿಡುವಂತೆ ತಂಡದ ಆಟಗಾರರಿಗೆ ಸೂಚಿಸಿದ್ದೇನೆ. ಪರಸ್ಪರ ಎಲ್ಲರೂ ಸಂಪರ್ಕದಲ್ಲಿದ್ದು ಸ್ನೇಹ ಸೌಹಾರ್ದ ಬೆಳೆಯಲಿ ಎಂದಿದ್ದೇನೆ. ಬೆಳಗಿನ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿಯ ಊಟದ ಸಂದರ್ಭದಲ್ಲಿ ಅನುಭವಿಗಳು ಯುವ ಆಟಗಾರರೊಂದಿಗೆ ಬೆರೆಯುತ್ತಾರೆ. ಇದು ತಂಡವು ಸಂಘಟಿತವಾಗಲು ನೆರವಾಗುತ್ತಾರೆ' ಎಂದು ಫ್ರ್ಯಾಂಚೈಸಿಯು ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಪಾಂಟಿಂಗ್ ಹೇಳಿದ್ದಾರೆ.

'ಯುವ ಆಟಗಾರರೊಂದಿಗೆ ಕೋಚ್ ಮತ್ತು ಅನುಭವಿ ಆಟಗಾರರು ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕು. ಆಗ ಅವರು ಖಂಡಿತವಾಗಿಯೂ ಉತ್ತಮ ಪ್ರತಿಫಲ ನೀಡುತ್ತಾರೆ. ಅದು ತಂಡದ ಯಶಸ್ಸಿಗೆ ಕಾರಣವಾಗುತ್ತದೆ' ಎಂದಿದ್ದಾರೆ.

ಹೈದರಾಬಾದ್ ತಂಡದ ಆಟಗಾರರ ಸಂಭ್ರಮ –ಪಿಟಿಐ ಸಂಗ್ರಹ ಚಿತ್ರ

ಐಎಸ್‌ಎಲ್ ಟೂರ್ನಿ: ಕೇರಳ ಬ್ಲಾಸ್ಟರ್ಸ್‌ಗೆ ಮತ್ತೆ ನಿರಾಸೆ

ಹೈದರಾಬಾದ್‌ಗೆ ಚೊಚ್ಚಲ ಪ್ರಶಸ್ತಿ

ಫತೋರ್ಡ, ಗೋವಾ (ಪಿಟಿಐ): ಟೂರ್ನಿಯುದ್ದಕ್ಕೂ ಉತ್ತಮ ಆಟವಾಡುತ್ತ ಬಂದಿದ್ದ ಹೈದರಾಬಾದ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಚಾಂಪಿಯನ್ ಪಟ್ಟ ಅಲಂಕರಿಸಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಕೇರಳ ಬ್ಲಾಸ್ಟರ್ಸ್ ಎದುರಿನ ಫೈನಲ್‌ನಲ್ಲಿ ತಂಡ ಪೆನಾಲ್ಟಿಯಲ್ಲಿ 3–1ರಲ್ಲಿ ಗೆಲುವು ದಾಖಲಿಸಿತು.

ಈ ಮೂಲಕ ಮೊದಲ ಬಾರಿ ಪ್ರಶಸ್ತಿಗೆ ಮುತ್ತಿಕ್ಕಿತು. ಕೇರಳ ಬ್ಲಾಸ್ಟರ್ಸ್ ಮೂರನೇ ಬಾರಿ ಫೈನಲ್‌ನಲ್ಲಿ ಸೋತು ನಿರಾಸೆ ಅನುಭವಿಸಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಒಂದೊಂದು ಗೋಲು ಗಳಿಸಿದ್ದವು. ಹೀಗಾಗಿ ಹೆಚ್ಚುವರಿ ಅವಧಿಯ ನೀಡಲಾಗಿತ್ತು. ಈ ಸಂದರ್ಭದಲ್ಲಿ ಗೋಲು ದಾಖಲಾಗದ ಕಾರಣ ಪೆನಾಲ್ಟಿ ಮೊರೆ ಹೋಗಲಾಯಿತು.

ಹೈದರಾಬಾದ್ ಪರ ಜಾವೊ ವಿಕ್ಟರ್, ಖಾಸ ಕಮಾರ ಮತ್ತು ಹಲಿಚರಣ್ ನಜರೆ ಚೆಂಡನ್ನು ಗುರಿ ಮುಟ್ಟಿಸಿದರು.

ಕೇರಳ ತಂಡದ ಆಯುಷ್ ಅಧಿಕಾರಿ ಮಾತ್ರ ಯಶಸ್ಸು ಕಂಡರು. ಹೈದರಾಬಾದ್ ಎಫ್‌ಸಿಯ ಗೋಲ್ ಕೀಪರ್ ಲಕ್ಷ್ಮಿಕಾಂತ್ ಕಟ್ಟಿಮನಿ ಮೂರು 'ಸೇವ್'ಗಳ ಮೂಲಕ ಮಿಂಚಿದರು.

ನಿಗದಿತ ಅವಧಿಯ 68ನೇ ನಿಮಿಷದಲ್ಲಿ ರಾಹುಲ್ ಕೆ.ಪಿ ಗಳಿಸಿದ ಗೋಲಿನ ಮೂಲಕ ಕೇರಳ ಕೇರಳ ಮುನ್ನಡೆ ಸಾಧಿಸಿತು. 88ನೇ ನಿಮಿಷದಲ್ಲಿ ಸಾಹಿರ್ ತವೋರ ಅವರ ಗೋಲಿನ ಮೂಲಕ ಹೈದರಾಬಾದ್ ತಿರುಗೇಟು ನೀಡಿತು.

ಗ್ಯಾಲರಿಗಳಲ್ಲಿ ಅಲೆ ಎಬ್ಬಿಸಿದ ಪ್ರೇಕ್ಷಕರು: ಎರಡು ಆವೃತ್ತಿಗಳಲ್ಲಿ ಇದೇ ಮೊದಲ ಬಾರಿ ಐಎಸ್‌ಎಲ್ ಟೂರ್ನಿಯಲ್ಲಿ ಗ್ಯಾಲರಿಯ ಸ್ಟ್ಯಾಂಡ್‌ಗಳು ಪ್ರೇಕ್ಷರಿಂದ ತುಂಬಿದ್ದವು.

ಕೋವಿಡ್–19ರಿಂದಾಗಿ ಎರಡು ಆವೃತ್ತಿಗಳ ಪಂದ್ಯಗಳನ್ನು ಬಯೊಬಬಲ್‌ನಲ್ಲಿ ಆಯೋಜಿಸಲಾಗಿತ್ತು. ಕಳೆದ ಆವೃತ್ತಿಯ ಫೈನಲ್ ಪಂದ್ಯವನ್ನು ಕೂಡ ಬಯೊಬಬಲ್‌ನಲ್ಲಿ ಆಯೋಜಿಸಲಾಗಿತ್ತು. ಈ ಬಾರಿ ಫೈನಲ್‌ಗೆ ಪ್ರೇಕ್ಷಕರನ್ನು ಅವಕಾಶ ನೀಡಲು ನಿರ್ಧರಿಸಲಾಗಿತ್ತು.

ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ 'ಸಾಧಾರಣಕ್ಕಿಂತ ಕೆಳದರ್ಜೆ'

ದುಬೈ (ಪಿಟಿಐ): ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವಣ ಪಿಂಕ್ ಬಾಲ್ ಟೆಸ್ಟ್ ಪಂದ್ಯ ನಡೆದ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಸಾಧಾರಣಕ್ಕಿಂತ ಕೆಳದರ್ಜೆಯಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರೇಟಿಂಗ್ ನೀಡಿದೆ.

ಇದರಿಂದಾಗಿ ಕ್ರೀಡಾಂಗಣವು ಐಸಿಸಿ ಪಿಚ್ ಮತ್ತು ಔಟ್‌ಫೀಲ್ಡ್ ಮಾನಿಟರಿಂಗ್ ಪ್ರೊಸೆಸ್ ನಿಯಮದಡಿಯಲ್ಲಿ ಒಂದು ಡಿಮೆರಿಟ್ ಅಂಕ ಪಡೆದಿದೆ. ಯಾವುದೇ ಕ್ರೀಡಾಂಗಣದ ಡಿಮೆರಿಟ್ ಅಂಕವು ಐದು ವರ್ಷಗಳ ಅವಧಿಯಲ್ಲಿ ಐದಕ್ಕೇರಿದರೆ 12 ತಿಂಗಳವರೆಗೆ ಮತ್ತು ಹತ್ತಕ್ಕೇರಿದರೆ ಎರಡು ವರ್ಷ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸದಂತೆ ನಿರ್ಬಂಧ ಹೇರಲಾಗುತ್ತದೆ. ಈ ನಿಯಮವು 2018ರ ಜನವರಿ 4ರಿಂದ ಜಾರಿಗೆ ಬಂದಿದೆ. ಮಾರ್ಚ್ 12ರಂದು ಆರಂಭವಾಗಿದ್ದ ಪಂದ್ಯವು ಮೂರನೇ ದಿನವೇ ಮುಕ್ತಾಯವಾಗಿತ್ತು. ಭಾರತ ತಂಡವು 238 ರನ್‌ಗಳ ಅಂತರದಿಂದ ಜಯಿಸಿತ್ತು.

'ಪಂದ್ಯದ ಮೊದಲ ದಿನವೇ ಪಿಚ್‌ನಲ್ಲಿ ಚೆಂಡು ತಿರುವು ಪಡೆಯುತ್ತಿತ್ತು. ಪ್ರತಿಯೊಂದು ಅವಧಿಯಿಂದ ಅವಧಿಯವರೆಗೆ ಸ್ಥಿತಿ ಸುಧಾರಣೆ ಆಯಿತಾದರೂ ಬ್ಯಾಟ್ ಮತ್ತು ಚೆಂಡಿನ ನಡುವೆ ಉತ್ತಮ ಸ್ಪರ್ಧೆ ನಡೆಯುವಂತಿರಲಿಲ್ಲ' ಎಂದು ಪಿಂಕ್ ಬಾಲ್ ಟೆಸ್ಟ್‌ಗೆ ಐಸಿಸಿ ರೆಫರಿಯಾಗಿದ್ದ ಜಾವಗಲ್ ಶ್ರೀನಾಥ್ ವರದಿ ನೀಡಿದ್ದಾರೆ. ಶ್ರೀನಾಥ್ ವರದಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೂ ಕಳುಹಿಸಲಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2017ರಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ಟೆಸ್ಟ್ ಪಂದ್ಯ ನಡೆದಾಗಲೂ ಐಸಿಸಿಯು ಕಳಪೆ ರೇಟಿಂಗ್ ನೀಡಿತ್ತು. ಆಗ ಪಂದ್ಯ ಕ್ರಿಸ್ ಬ್ರಾಡ್ ಪಂದ್ಯದ ರೆಫರಿಯಾಗಿದ್ದರು.

ಪಿಂಕ್ ಬಾಲ್ ಪಂದ್ಯದ ಮೊದಲ ದಿನವೇ ಒಟ್ಟು 16 ವಿಕೆಟ್‌ಗಳು ಪತನವಾಗಿದ್ದವು. ಎರಡನೇ ದಿನದಾಟದಲ್ಲಿ 14 ಮತ್ತು ಮೂರನೇ ದಿನ 9 ವಿಕೆಟ್‌ಗಳು ಪತನವಾಗಿದ್ದವು. ಭಾರತ ತಂಡವು 2–0ಯಿಂದ ಸರಣಿಯಲ್ಲಿ ಜಯಿಸಿತ್ತು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ –ಶ್ರೀಲಂಕಾ ನಡುವಣ ಈಚೆಗೆ ಪಿಂಕ್ ಬಾಲ್ ಟೆಸ್ಟ್ ಪಂದ್ಯ ನಡೆದ ಪಿಚ್ –ಪಿಟಿಐ ಚಿತ್ರ

ಬಿಸಿಸಿಐ ಪಿಚ್ ಕ್ಯೂರೇಟರ್ ಉಸ್ತುವಾರಿ

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮುಖ್ಯ ಪಿಚ್ ಕ್ಯೂರೇಟರ್ ಆಶಿಶ್ ಭೌಮಿಕ್ ಅವರ ಮಾರ್ಗದರ್ಶನದಲ್ಲಿ ಪಿಚ್ ಸಿದ್ಧಗೊಳಿಸಲಾಗಿತ್ತು. 'ಅಂತರರಾಷ್ಟ್ರೀಯ ಪಂದ್ಯಗಳು ನಡೆದಾಗ ಮಂಡಳಿಯೇ ಪಿಚ್ ಕ್ಯೂರೇಟರ್‌ಗಳನ್ನು ನಿಯೋಜಿಸುತ್ತದೆ. ಅದೇ ರೀತಿ ಈ ಸಲದ ಪಂದ್ಯಕ್ಕೂ ಬಿಸಿಸಿಐನಿಂದಲೇ ಕ್ಯೂರೇಟರ್ ಬಂದಿದ್ದರು. ಆದ್ದರಿಂದ ಐಸಿಸಿ ರೇಟಿಂಗ್ ಕುರಿತು ಮಂಡಳಿಯ ಪರಿಣತರೇ ಚರ್ಚೆ ನಡೆಸಿ ಮುಂದಿನ ಹೆಜ್ಜೆ ಇಡಲಿದ್ದಾರೆ. ಇದರಲ್ಲಿ ರಾಜ್ಯ ಸಂಸ್ಥೆಯ ಪಾತ್ರವೇನಿಲ್ಲ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ವಕ್ತಾರ ವಿನಯ್ ಮೃತ್ಯುಂಜಯ 'ಪ್ರಜಾವಾಣಿ'ಗೆ ತಿಳಿಸಿದರು.

ಮಾರ್ಚ್ 12 ರಿಂದ 14ರವರೆಗೆ ನಡೆದಿದ್ದ ಪಂದ್ಯಕ್ಕೆ ಪ್ರೇಕ್ಷಕರಿಗೆ ಪ್ರವೇಶ ನೀಡಲಾಗಿತ್ತು. 57 ಸಾವಿರ ಜನರು ಪಂದ್ಯ ವೀಕ್ಷಿಸಿದರು.

ವಿಶ್ವಕಪ್: ಇಂಗ್ಲೆಂಡ್‌ಗೆ ರೋಚಕ ಜಯ

ಆಕ್ಲೆಂಡ್ (ಪಿಟಿಐ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ ಮಹಿಳಾ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಆತಿಥೇಯ ನ್ಯೂಜಿಲೆಂಡ್ ಎದುರು ರೋಚಕ ಜಯ ಸಾಧಿಸಿತು. ಈ ಮೂಲಕ ಸೆಮಿಫೈನಲ್ ಪ್ರವೇಶಿಸುವ ಆಸೆಯನ್ನು ಜೀವಂತವಾಗಿರಿಸಿಕೊಂಡಿತು.

ನಥಾಲಿ ಶೀವರ್ ಅರ್ಧಶತಕ ಮತ್ತು ವೇಗದ ಬೌಲರ್ ಕೇಟ್ ಕ್ರಾಸ್ ಅವರ ಚುರುಕಾದ ದಾಳಿಯ ನೆರವಿನಿಂದ ಇಂಗ್ಲೆಂಡ್ ತಂಡ ಒಂದು ವಿಕೆಟ್ ಅಂತರದಿಂದ ಜಯ ಸಾಧಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ನ್ಯೂಜಿಲೆಂಡ್ 48.5 ಓವರ್‌ಗಳಲ್ಲಿ 203 ರನ್‌ಗಳಿಗೆ ಆಲೌಟ್ ಆಯಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳೇ ಗೆಲುವಿನ ರೂವಾರಿಗಳಾದರು. ನಾಯಕಿ ಹೀಥರ್ ನೈಟ್ (42 ರನ್) ಮತ್ತು ನಥಾಲಿಯಾ ಶೀವರ್ (61 ರನ್) ಹಾಗೂ ಸೋಫಿಯಾ ಡಂಕ್ಲಿ (33) ಮಹತ್ವದ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 48.5 ಓವರ್‌ಗಳಲ್ಲಿ 203 (ಸೂಝಿ ಬೇಟ್ಸ್ 22, ಸೋಫಿ ಡಿವೈನ್ 41, ಅಮೆಲಿಯಾ ಕೇರ್ 24, ಮ್ಯಾಡಿ ಗ್ರೀನ್ ಔಟಾಗದೆ 52, ಕೇಟ್ ಕ್ರಾಸ್ 35ಕ್ಕೆ3, ಚಾರ್ಲೆಟ್ ಡೀನ್ 36ಕ್ಕೆ2, ಸೋಫಿ ಎಕ್ಲೆಸ್ಟನ್ 41ಕ್ಕೆ3). **ಇಂಗ್ಲೆಂಡ್:** 47.2 ಓವರ್‌ಗಳಲ್ಲಿ 9ಕ್ಕೆ204 (ಟ್ಯಾಮಿ ಬೆಮೌಂಟ್ 25, ಹೀಥರ್ ನೈಟ್ 42, ನಥಾಲಿ ಶೀವರ್ 61, ಸೋಫಿಯಾ ಡಂಕ್ಲಿ 33, ಜೆಸ್ ಕೆರ್ 36ಕ್ಕೆ2, ಫ್ರಾನ್ಸಿಸ್ ಮೆಕೆ 34ಕ್ಕೆ4) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 1 ವಿಕೆಟ್ ಜಯ.

ಬಾಂಗ್ಲಾಗೆ ದಕ್ಷಿಣ ಆಫ್ರಿಕಾ ತಿರುಗೇಟು

ಜೋಹಾನ್ಸ್‌ಬರ್ಗ್ (ಎಎಫ್‌ಪಿ): ವೇಗಿ ಕಗಿಸೊ ರಬಾಡ (39ಕ್ಕೆ5) ಉತ್ತಮ ಬೌಲಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಭಾನುವಾರ ಇಲ್ಲಿ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಬಾಂಗ್ಲಾದೇಶದ ಎದುರು ಜಯಿಸಿತು.

ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 7 ವಿಕೆಟ್‌ಗಳಿಂದ ಗೆದ್ದಿತು. ಮೊದಲ ಪಂದ್ಯದಲ್ಲಿ ಜಯಿಸಿದ್ದ ಬಾಂಗ್ಲಾಕ್ಕೆ ತಿರುಗೇಟು ನೀಡಿತು.

ಟಾಸ್ ಗೆದ್ದ ಬಾಂಗ್ಲಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರಬಾಡ ಮತ್ತು ಲುಂಗಿ ಗಿಡಿ ಬೌಲಿಂಗ್‌ಗೆ ಆದರೆ ಆರಂಭದಲ್ಲಿಯೇ ಕುಸಿಯಿತು. ಕೇವಲ 94 ರನ್‌ಗಳಿಗೆ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಮಿಂಚಿದ ಅಫೀಫ್ ಹುಸೇನ್ (72; 107ಎ, 4X9) ಮತ್ತು ಮೆಹದಿ ಹಸನ್ (38; 49ಎ) ಏಳನೇ ವಿಕೆಟ್ ಜೊತೆಯಾಟದಲ್ಲಿ86ರನ್‌ಸೇರಿಸಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡವು 37.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 195 ರನ್ ಗಳಿಸಿ ಗೆದ್ದಿತು. ಕ್ವಿಂಟನ್ ಡಿ ಕಾಕ್ (62; 41ಎ), ಕೈಲ್ ವೆರೆಯನ್ (58; 77ಎ) ಅರ್ಧಶತಕ ಹೊಡೆದರು.

ಸರಣಿ ಜಯದ ಮೇಲೆ ಪಾಕ್ ಕಣ್ಣು

ಲಾಹೋರ್ (ಎಪಿ): ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವೆ ಸೋಮವಾರ ಇಲ್ಲಿ ಆರಂಭವಾಗಲಿರುವ ಮೂರನೇ ಮತ್ತು ಕೊನೆಯ ಟೆಸ್ಟ್ ಪಂದ್ಯದಲ್ಲಿ ಗೆದ್ದವರಿಗೆ ಸರಣಿ ಜಯ ಒಲಿಯಲಿದೆ.

ಈ ಸರಣಿಯ ಮೊದಲ ಎರಡು ಪಂದ್ಯಗಳು ಡ್ರಾ ಆಗಿವೆ. ರಾವಲ್ಪಿಂಡಿ ಮತ್ತು ಕರಾಚಿಯಲ್ಲಿ ಆಸ್ಟ್ರೇಲಿಯಾದ ಜಯದ ಆಸೆಗೆ ತಣ್ಣೀರೆರಚುವಲ್ಲಿ ಬಾಬರ್ ಆಜಂ ತಂಡದ ಬ್ಯಾಟರ್‌ಗಳು ಯಶಸ್ವಿಯಾಗಿದ್ದರು.

ಪಂದ್ಯ ಆರಂಭ: ಬೆಳಿಗ್ಗೆ 10.30

ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಯೋಜಿಸಿರುವ 3x3 ರಾಷ್ಟ್ರೀಯ ಲೀಗ್‌ನ ಬೆಂಗಳೂರು ಆವೃತ್ತಿಯ ಮಹಿಳಾ ವಿಭಾಗದ ಪ್ರಶಸ್ತಿ ಗೆದ್ದ ಆಲ್ ಸ್ಟಾರ್ ತಂಡ. (ಎಡದಿಂದ): ಪಾವನಿ ಎಸ್, ಲೋಪಮುದ್ರಾ, ಕೃತಿಕಾ ಮತ್ತು ಗ್ರೀಷ್ಮ

ಕೆಎಸ್‌ಎಲ್‌ಟಿಎ ಎಸ್‌ಕೆಎಂಇ ಐಟಿಎಫ್ ಟೆನಿಸ್: ಸಿದ್ಧಾರ್ಥ್ ರನ್ನರ್ ಅಪ್

ಅರ್ಜುನ್ ಖಾಡೆ 'ಡಬಲ್' ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಅರ್ಜುನ್ ಖಾಡೆ ಅವರು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಎಸ್‌ಕೆಎಂಇ ಸಹಯೋಗದಲ್ಲಿ ಆಯೋಜಿಸಿದ್ದ ಐಟಿಎಫ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಭಾನುವಾರ ಬೆಳಿಗ್ಗೆ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಭಾರತದವರೇ ಆದ ಸಿದ್ಧಾರ್ಥ್ ರಾವತ್ ಎದುರು ಅರ್ಜುನ್ 6-3, 3-6, 6-1ರಲ್ಲಿ ಗೆಲುವು ಸಾಧಿಸಿದರು.

ಕಳೆದ ವಾರ ಭೋಪಾಲ್‌ನಲ್ಲಿ ನಡೆದಿದ್ದ ಐಟಿಎಫ್ ಟೂರ್ನಿಯ ಪ್ರಶಸ್ತಿ ಗೆದ್ದಿದ್ದ ಅರ್ಜುನ್ ಶನಿವಾರ ನಡೆದ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಬ್ರಿಟನ್‌ನ ಜೂಲಿಯನ್ ಕ್ಯಾಶ್ ಜೊತೆಗೂಡಿ ಜಯ ಸಾಧಿಸಿದ್ದರು. ಭೋಪಾಲ್‌ನಲ್ಲಿ ನಡೆದಿದ್ದ ಐಟಿಎಫ್ ಫೈನಲ್‌ನಲ್ಲೂ ಅವರು ಸಿದ್ಧಾರ್ಥ್ ರಾವತ್ ಎದುರು ಗೆದ್ದಿದ್ದರು.

28 ವರ್ಷದ, 5ನೇ ಶ್ರೇಯಾಂಕದ ಆಟಗಾರ ಅರ್ಜುನ್ ಪಂದ್ಯದ ಅರಂಭದಲ್ಲೇ 3–0ಯಿಂದ ಮುನ್ನಡೆ ಸಾಧಿಸಿದರು. ಎರಡನೇ ಗೇಮ್‌ನಲ್ಲಿ ಬ್ರೇಕ್ ಪಾಯಿಂಟ್ ಗಳಿಸಿದ ಅವರು ನಂತರ ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು.

ಒತ್ತಡಕ್ಕೆ ಸಿಲುಕಿದ 2ನೇ ಶ್ರೇಯಾಂಕದ ಸಿದ್ಧಾರ್ಥ್ ತಪ್ಪುಗಳನ್ನು ಎಸಗುತ್ತ ಪಾಯಿಂಟ್‌ಗಳನ್ನು ಕಳೆದುಕೊಂಡರು. ಕೇವಲ ಮೂರು ಗೇಮ್‌ಗಳನ್ನು ಬಿಟ್ಟುಕೊಟ್ಟು ಅರ್ಜುನ್ ಮೊದಲ ಗೇಮ್ ಗೆದ್ದುಕೊಂಡರು.

'ಇಂಥ ಪಂದ್ಯಗಳಲ್ಲಿ ಮೊದಲ ಸೆಟ್ ಗೆದ್ದು ಭರವಸೆ ಮೂಡಿಸಿಕೊಳ್ಳುವುದು ಅತಿ ಅಗತ್ಯ' ಎಂದು ಪಂದ್ಯದ ನಂತರ ಹೇಳಿದ ಅವರು ಎರಡನೇ ಸೆಟ್ ಕಳೆದುಕೊಂಡರು. ಎರಡನೇ ಸೆಟ್‌ನ ಆರಂಭದಲ್ಲಿ ಇಬ್ಬರೂ ಸಮಬಲದ ಹೋರಾಟ ಮಾಡಿದರು. 3-3ರಲ್ಲಿ ಪಂದ್ಯ ಸಮ ಆದಾಗ ಪ್ರೇಕ್ಷಕರ ಕುತೂಹಲ ಹೆಚ್ಚಿತು. ಅರ್ಜುನ್ ಅವರ ಕೆಟ್ಟ ಹೊಡೆತವೊಂದು ಸೆಟ್‌ನ ಗತಿಯನ್ನೇ ಬದಲಿಸಿತು. ಆರು ಮತ್ತು ಎಂಟನೇ ಗೇಮ್‌ನಲ್ಲಿ ಗೇಮ್‌ಗಳಲ್ಲಿ ಎದುರಾಳಿಯ ಸರ್ವ್ ಮುರಿದ ಸಿದ್ಧಾರ್ಥ್ ಸೆಟ್ ಮೇಲೆ ಹಿಡಿದ ಬಲಪಡಿಸಿದರು.

ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಅರ್ಜುನ್ ಮತ್ತೆ ಮೋಹಕ ಆಟಕ್ಕೆ ಅಣಿಯಾದರು. ಅರಂಭದಲ್ಲೇ 3–0ಯಿಂದ ಮುನ್ನಡೆದು ಭರವಸೆ ಮೂಡಿಸಿಕೊಂಡ ಅವರು ನಂತರ ನಾಗಾಲೋಟದ ಮೂಲಕ ಸೆಟ್ ಮತ್ತು ಪಂದ್ಯ ಗೆದ್ದುಕೊಂಡರು. ಅರ್ಜುನ್‌ಗೆ 15 ಮತ್ತು ಸಿದ್ಧಾರ್ಥ್‌ಗೆ 8 ಎಟಿಪಿ ಪಾಯಿಂಟ್‌ಗಳು ಈ ಟೂರ್ನಿಯಲ್ಲಿ ಲಭಿಸಿದವು.

ರನ್ನರ್ ಅಪ್ ಸಿದ್ಧಾರ್ಥ್ ರಾವತ್ (ಎಡ) ಮತ್ತು ಚಾಂಪಿಯನ್ ಅರ್ಜುನ್ ಖಾಡೆ ಪ್ರಶಸ್ತಿಯೊಂದಿಗೆ –ಪ್ರಜಾವಾಣಿ ಚಿತ್ರ

> **ಬೆಂಗಳೂರಿನಲ್ಲಿ ಆಡುವುದೆಂದರೆ ನನಗೆ ತುಂಬ ಇಷ್ಟ. ಎರಡು ವಾರಗಳಲ್ಲಿ ಮೂರು ಪ್ರಶಸ್ತಿಗಳನ್ನು ಗೆದ್ದಿರುವುದು ಅತ್ಯಂತ ಖುಷಿಯ ವಿಷಯ.**
>
> **ಅರ್ಜುನ್ ಖಾಡೆ** ಪ್ರಶಸ್ತಿ ವಿಜೇತ ಆಟಗಾರ

'ಧರ್ಮದ ಹೆಸರಿನಲ್ಲಿ ಯುವಕರ ದಾರಿ ತಪ್ಪಿಸುತ್ತಿರುವ ಪಾಕ್'

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರು ದಶಕಗಳಿಂದ ಗಡಿಯಾಚೆಗಿನ ಭಯೋತ್ಪಾದನೆಯನ್ನು ಉತ್ತೇಜಿಸುತ್ತಿದ್ದ ಪಾಕಿಸ್ತಾನವು ತನ್ನ ಕಾರ್ಯವೈಖರಿಯನ್ನು ಬದಲಿಸಿದ್ದು, ಧರ್ಮ ಮತ್ತು ಶೋಷಣೆಯ ಹೆಸರಿನಲ್ಲಿ ಯುವಕರ ಮನಪರಿವರ್ತನೆ ಮಾಡುತ್ತಿದೆ ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಹಣಕಾಸು ಕಾರ್ಯಪಡೆಯ (ಎಫ್‌ಎಟಿಎಫ್) ಬೂದುಪಟ್ಟಿಯಿಂದ ಹೊರಬರಲು ಪ್ರಯತ್ನಿಸುತ್ತಿರುವ ಪಾಕಿಸ್ತಾನವು ಇಂತಹ ಹೊಸ ತಂತ್ರವನ್ನು ಅನುಸರಿಸುತ್ತಿದೆ ಎಂದಿದ್ದಾರೆ.

ಸ್ವಾತಂತ್ರ್ಯದ ಹೆಸರಿನಲ್ಲಿ ಪಾಕಿಸ್ತಾನದ ಐಎಸ್‌ಐ ಆರಂಭಿಸಿದ್ದ ಭಯೋತ್ಪಾದನಾ ಚಟುವಟಿಕೆಗಳು ನಿಧಾನವಾಗಿ ತೀವ್ರತೆ ಕಳೆದುಕೊಳ್ಳುತ್ತಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ- ಬಾಂಗ್ಲಾ ಗಡಿ ಬಳಿ ಡ್ರೋನ್ ಪತ್ತೆ, ಬಿಎಸ್‌ಎಫ್ ತನಿಖೆ

ನವದೆಹಲಿ/ಕೋಲ್ಕತ(ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಭಾರತ-ಬಾಂಗ್ಲಾದೇಶ ಗಡಿಗೆ 300 ಮೀಟರ್ ದೂರದಲ್ಲಿರುವ ಕೃಷಿ ಭೂಮಿಯೊಂದರಲ್ಲಿ ಶನಿವಾರ ಡ್ರೋನ್ ಪತ್ತೆಯಾಗಿದೆ.

ಈ ಡ್ರೋನ್ ಅನ್ನು ಭಾರತದ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ಚೀನಾದಲ್ಲಿ ನಿರ್ಮಿಸಿದ ಈ ಡ್ರೋನ್‌ನಲ್ಲಿ ಯಾವುದೇ ಕ್ಯಾಮೆರಾ ಸಲಕರಣೆ ಪತ್ತೆಯಾಗಿಲ್ಲ ಎಂದು ಖಚಿತಪಡಿಸಿದ್ದಾರೆ.

ಆದಾಗ್ಯೂ, ರೈತನ ಕೃಷಿ ಭೂಮಿಯಲ್ಲಿ ಪತ್ತೆಯಾದ ಚೀನಾದ ಈ ಡ್ರೋನ್ ಅನ್ನು ಗಡಿಯಾಚೆಗಿನ ಅಪರಾಧ ಚಟುವಟಿಕೆಗಳಿಗಾಗಿ ದುರ್ಬಳಕೆ ಮಾಡಿಕೊಳ್ಳಲಾಗಿದೆಯೇ ಎಂಬ ಬಗ್ಗೆ ಗಡಿ ಭದ್ರತಾ ಪಡೆ ತನಿಖೆ ನಡೆಸುತ್ತಿದೆ.

ಉತ್ತರ 24 ಪರಗಣ ಜಿಲ್ಲೆಯ ಪೆಟ್ರಪೋಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾದ ಕ್ವಾಡ್‌ಕಾಪ್ಟರ್ ಮಾದರಿಯ ಎಸ್ 500 ಡ್ರೋನ್ ಅನ್ನು ವಿಧಿವಿಜ್ಞಾನ ಪರೀಕ್ಷೆ ನಡೆಸುವಂತೆ ಸ್ಥಳೀಯ ಪೊಲೀಸ್ ಠಾಣೆಗೆ ಸೂಚಿಸಲಾಗಿದೆ ಎಂದು ಬಿಎಸ್‌ಎಫ್ ಅಧಿಕಾರಿಗಳು ಹೇಳಿದ್ದಾರೆ.

ಚೀನಾದಲ್ಲಿ ನಿರ್ಮಾಣವಾದ ಈ ಡ್ರೋನ್ ಮಾರ್ಚ್ 19ರಂದು ಪೂರ್ಬಪರ ಗ್ರಾಮದ ರೈತ ಪಂಕಜ್ ಸರ್ಕಾರ್ ಅವರ ಕೃಷಿ ಭೂಮಿಯಲ್ಲಿ ಪತ್ತೆಯಾಗಿತ್ತು. ತುಂಡಾಗಿದ್ದ ಈ ಡ್ರೋನ್ ಅನ್ನು ರೈತ ಪೆಟ್ರಪೋಲೆ ಪೊಲೀಸರಿಗೆ ಹಸ್ತಾಂತರಿಸಿದ್ದರು. ಡ್ರೋನ್ ಪತ್ತೆಯಾದ ಈ ಭೂಮಿಯು ಅಂತರರಾಷ್ಟ್ರೀಯ ಗಡಿಗೆ ಕೇವಲ 300 ಮೀಟರ್ ದೂರದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಏಪ್ರಿಲ್ 2ಕ್ಕೆ ಇಸ್ರೇಲ್ ಪ್ರಧಾನಿ ಭಾರತಕ್ಕೆ

ಜೆರುಸಲೇಂ (ಪಿಟಿಐ): ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರು ಏಪ್ರಿಲ್ 2ರಂದು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಅವರ ನಾಲ್ಕು ದಿನಗಳ ಭಾರತ ಪ್ರವಾಸ ಇದಾಗಿದೆ.

ಇಸ್ರೇಲ್ ಮತ್ತು ಭಾರತದ ನಡುವೆ ಪೂರ್ಣ ಪ್ರಮಾಣದಲ್ಲಿ ರಾಜತಾಂತ್ರಿಕ ಸಂಬಂಧಗಳು ಆರಂಭವಾಗಿ 30 ವರ್ಷಗಳು ಸಂದಿರುವ ಸಂದರ್ಭದಲ್ಲಿ ಈ ಭೇಟಿ ನಿಗದಿಯಾಗಿದೆ.

ಭಾರತದ ಸ್ವತಂತ್ರ ವಿದೇಶಿ ನೀತಿ: ಪಾಕ್ ಪ್ರಧಾನಿ ಮೆಚ್ಚುಗೆ

ಇಸ್ಲಾಮಾಬಾದ್ (ಪಿಟಿಐ): ಭಾರತದ ಸ್ವತಂತ್ರ ವಿದೇಶಾಂಗ ನೀತಿಗಳ ಬಗ್ಗೆ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಮುಕ್ತಕಂಠದಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಲ್ಲದೆ ರಷ್ಯಾ ಮೇಲೆ ಅಮೆರಿಕದ ಕಠಿಣ ನಿರ್ಬಂಧಗಳ ಹೊರತಾಗಿಯೂ, ರಷ್ಯಾದಿಂದ ಭಾರತ ಕಚ್ಚಾತೈಲವನ್ನು ಆಮದು ಮಾಡಿಕೊಂಡಿದೆ ಎಂದು ಹೇಳಿದ್ದಾರೆ.

25 ರಿಂದ ಪಾಕ್ ಪ್ರಧಾನಿ ವಿರುದ್ಧದ ಅವಿಶ್ವಾಸ ನಿರ್ಣಯ ಚರ್ಚೆ: ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಸ್ವಪಕ್ಷೀಯರು ಸೇರಿದಂತೆ ಪ್ರತಿಪಕ್ಷಗಳ ಸದಸ್ಯರು ಸಲ್ಲಿಸಿದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗಾಗಿ ಇದೇ 25 ರಂದು ಸಂಸತ್ತಿನ ಅಧಿವೇಶನ ಕರೆಯಲಾಗಿದೆ.

ಪ್ರಧಾನಿ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸಂಸತ್ತಿನ ಕೆಳಮನೆ ಅನುಮೋದಿಸಿದ್ದಲ್ಲಿ, 3ರಿಂದ 7 ದಿನಗಳ ಒಳಗೆ ಮತದಾನ ನಡೆಯಲಿದೆ.

ಬಾಂಗ್ಲಾದೇಶ: ನದಿಯಲ್ಲಿ ದೋಣಿ ಮುಳುಗಿ ಆರು ಸಾವು

ನಾರಾಯಣ್‌ಗಂಜ್, ಬಾಂಗ್ಲಾದೇಶ (ಎಎಫ್‌ಪಿ): ಬಾಂಗ್ಲಾದೇಶದ ರಾಜಧಾನಿ ಢಾಕಾ ಬಳಿಯ ಶೀತಲಕ್ಷ್ಯ ನದಿಯಲ್ಲಿ ಭಾನುವಾರ ಒಳನಾಡು ಸರಕು ಸಾಗಣೆ ನೌಕೆಯೊಂದು ದೋಣಿಗೆ ಡಿಕ್ಕಿಹೊಡೆದ ಪರಿಣಾಮ ದೋಣಿಯಲ್ಲಿದ್ದ ಪ್ರಯಾಣಿಕರಲ್ಲಿ ಕನಿಷ್ಠ ಆರು ಜನ ಸಾವನ್ನಪ್ಪಿದ್ದಾರೆ. ಹಲವು ಮಂದಿ ನೀರುಪಾಲಾಗಿದ್ದಾರೆ.

ಮೃತಪಟ್ಟವರಲ್ಲಿ ಒಂದು ಮಗು, ಮೂವರು ಮಹಿಳೆಯರಿದ್ದಾರೆ.

60ಕ್ಕೂ ಹೆಚ್ಚು ಪ್ರಯಾಣಿಕರು ದೋಣಿಲ್ಲಿದ್ದರು ಎಂದು ಮೂಲಗಳು ಹೇಳಿವೆ. .

ಜೂನ್‌ನಲ್ಲಿ ಇದೇ ರೀತಿ ದೋಣಿಗೆ ನೌಕೆಯು ಡಿಕ್ಕಿ ಹೊಡೆದು 32 ಜನ ಮೃತಪಟ್ಟಿದ್ದರು.

ಸಿಯಾಲ್‌ಕೋಟ್ ಸೇನಾ ನೆಲೆಯಲ್ಲಿ ಭಾರಿ ಸ್ಫೋಟ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರದೇಶದ ಸಿಯಾಲ್‌ಕೋಟ್‌ನ ಸೇನಾ ನೆಲೆ ಸಮೀಪದ ಶಸ್ತ್ರಾಸ್ತ್ರ ಸಂಗ್ರಹಗಾರದಲ್ಲಿ ಭಾನುವಾರ ಭಾರೀ ಪ್ರಮಾಣದಲ್ಲಿ ಸರಣಿ ಸ್ಫೋಟಗಳು ಸಂಭವಿಸಿವೆ.

ಸಿಯಾಲ್‌ಕೋಟ್, ಲಾಹೋರ್‌ನಿಂದ ಸುಮಾರು 100 ಕಿ.ಮೀ ದೂರದಲ್ಲಿದೆ. 'ಶಾರ್ಟ್ ಸರ್ಕಿಟ್‌ನಿಂದ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು, ಸ್ಫೋಟಗಳು ಸಂಭವಿಸಿವೆ. ತ್ವರಿತವಾಗಿ ಬೆಂಕಿಯನ್ನು ನಂದಿಸಲಾಗಿದ್ದು, ಯಾವುದೇ ಪ್ರಾಣಹಾನಿ ಆಗಿಲ್ಲ' ಎಂದು ಪಾಕ್ ಸೇನೆಯ ಮಾಧ್ಯಮ ವಿಭಾಗದ ಪ್ರಕಟಣೆ ತಿಳಿಸಿದೆ.

ಘಟನೆ ಕುರಿತು ಹೆಚ್ಚಿನ ವಿವರಗಳನ್ನು ಸೇನೆ ಹಂಚಿಕೊಂಡಿಲ್ಲ. ಆದರೆ ಭಯೋತ್ಪಾದಕರ ದಾಳಿಯ ಶಂಕೆಯೂ ಇದೆ ಎಂದು ತಿಳಿಸಿದೆ.

ನೇಪಾಳ: ಭಾರತದ ರಾಯಭಾರಿಯಾಗಿ ಶಂಕರ್ ಪ್ರಸಾದ್

ಕಠ್ಮಂಡು (ಪಿಟಿಐ): ನೇಪಾಳದ ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ಅರ್ಥಶಾಸ್ತ್ರಜ್ಞ ಡಾ. ಶಂಕರ್ ಪ್ರಸಾದ್ ಶರ್ಮ ಅವರನ್ನು ಭಾರತಕ್ಕೆ ರಾಯಭಾರಿಯನ್ನಾಗಿ ನೇಮಕ ಮಾಡಿದ್ದಾರೆ.

ಈ ಹಿಂದಿನ ಸರ್ಕಾರ ನೇಮಿಸಿದ್ದ ನೀಲಾಂಬರ ಆಚಾರ್ಯ ಅವರನ್ನು 6 ತಿಂಗಳ ಹಿಂದೆ ವಾಪಸ್ ಕರೆಸಿಕೊಂಡ ಬಳಿಕ ಈ ಹುದ್ದೆ ತೆರವಾಗಿತ್ತು.

ಕಳ್ಳಬಟ್ಟಿ ಸೇವನೆ ಶಂಕೆ; 10 ಸಾವು

ಭಾಗಲ್‌ಪುರ (ಬಿಹಾರ): ಬಿಹಾರದಲ್ಲಿ ಹೋಳಿ ಹಬ್ಬದ ಆಚರಣೆಯ ವೇಳೆ ಕಳ್ಳಬಟ್ಟಿ ಸೇವನೆಯಿಂದ 10 ಮಂದಿ ಮೃತಪಟ್ಟಿದ್ದಾರೆ ಎಂದು ಶಂಕಿಸಲಾಗಿದೆ.

ಭಾಗಲ್‌ಪುರ ಜಿಲ್ಲೆಯಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ. ಭಾಗಲ್‌ಪುರ ಪಟ್ಟಣದಲ್ಲಿ ನಾಲ್ಕು, ನಾರಾಯಣಪುರ ಪೊಲೀಸ್ ಠಾಣೆ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಉಳಿದ ಸಾವಿನ ಪ್ರಕರಣಗಳು ವರದಿಯಾಗಿವೆ.

ಬಹರೇನ್ ಜಿಪಿ: ಫೆರಾರಿ ಚಾಲಕ ಚಾರ್ಲ್ಸ್‌ಗೆ ಪ್ರಶಸ್ತಿ

ಸಾಖಿರ್, ಬಹರೇನ್ (ಎಎಫ್‌ಪಿ): ನಾಟಕೀಯ ಅಂತ್ಯ ಕಂಡ ಬಹರೇನ್ ಗ್ರ್ಯಾನ್ ಪ್ರಿಯಲ್ಲಿ ಫೆರಾರಿ ತಂಡದ ಚಾಲಕ ಮೊನ್ಯಾಕೊದ ಚಾರ್ಲ್ಸ್ ಲೆಕ್ಲೆರ್ಸ್ ಪ್ರಶಸ್ತಿಗೆ ಮುತ್ತಿಕ್ಕಿದರು. ಭಾನುವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಚಾಲಕ ಎನಿಸಿಕೊಂಡಿದ್ದ ಮ್ಯಾಕ್ಸ್ ವರ್ಸ್ಟಾಪನ್ ಅವರ ವಾಹನದಲ್ಲಿ ತೊಂದರೆ ಕಾಣಿಸಿಕೊಂಡಿತು. ಇದು ಚಾರ್ಲ್ಸ್ ಅವರ ಹಾದಿಯನ್ನು ಸುಗಮ ಮಾಡಿತು.

ಫೆರಾರಿಯ ಸ್ಪೇನ್‌ನ ಕಾರ್ಲೋಸ್ ಸೇನ್ಸ್ ದ್ವಿತೀಯ ಸ್ಥಾನ ಗಳಿಸಿದರೆ ಮರ್ಸಿಡಿಸ್‌ನ ಲ್ಯೂಯಿಸ್ ಹ್ಯಾಮಿಲ್ಟನ್ ತೃತೀಯರಾದರು. ಅವರೊಂದಿಗೆ ಇದೇ ಮೊದಲ ಬಾರಿ ಸಹಚಾಲಕರಾಗಿ ಪಾಲ್ಗೊಂಡ ಜಾರ್ಜ್ ರಸೆಲ್ ಸಂಭ್ರದಲ್ಲಿ ಮಿಂದರು.

ಚಾರ್ಲ್ಸ್ ಲೆಕ್ಲೆರ್ಸ್ –ಎಎಫ್‌ಪಿ ಚಿತ್ರ

ಇಂಡೋನೇಷ್ಯಾ ಜಿಪಿ: ಒಲಿವೆರಾಗೆ ಪ್ರಶಸ್ತಿ: ಧಾರಾಕಾರ ಮಳೆಯಿಂದ ಉಂಟಾದ ಪ್ರತಿಕೂಲ ಸನ್ನಿವೇಶದಲ್ಲೂ ಎದೆಗುಂದದೆ ಮುನ್ನುಗ್ಗಿದ ಪೋರ್ಚುಗಲ್‌ನ ಮಿಗೇಲ್ ಒಲಿವೆರಾ ಅವರು ಇಂಡೊನೇಷ್ಯಾ ಮೋಟೊ ಜಿಪಿ ರೇಸ್‌ನ ಪ್ರಶಸ್ತಿ ಗೆದ್ದುಕೊಂಡರು.

ಕೆಎಂಟಿ ಚಾಲಕ ಇಲಿವೆರಾ ಅವರು ಭಾನುವಾರ ಮಾಂಡಲಿಕ ಅಂತರರಾಷ್ಟ್ರೀಯ ಸರ್ಕಿಟ್‌ನಲ್ಲಿ ನಡೆದ ಮುಖ್ಯ ಸುತ್ತಿನ ಸ್ಪರ್ಧೆಯಲ್ಲಿ ವಿಶ್ವ ಚಾಂಪಿಯನ್ ಫ್ರಾನ್ಸ್‌ನ ಫ್ಯಾಬಿಯೊ ಕ್ವಾರ್ಟರರೊ ಅವರನ್ನು 2.205 ಸೆಕೆಂಡುಗಳ ಅಂತರದಲ್ಲಿ ಹಿಂದಿಕ್ಕಿದರು.

ಅಪಘಾತಗಳು ಸಂಭವಿಸುವ ಸಾಧ್ಯತೆ ಇದ್ದುದರಿಂದ 27 ಲ್ಯಾಪ್‌ಗಳ ಬದಲಿಗೆ 20 ಲ್ಯಾಪ್‌ಗಳಿಗೆ ರೇಸ್ ಸೀಮಿತಗೊಳಿಸಲಾಗಿತ್ತು. ಫ್ರಾನ್ಸ್‌ನ ಮತ್ತೊಬ್ಬ ಚಾಲಕ ಜೊಹಾನ್ ಜರ್ಕೊ ಕೂಡ ಅಗ್ರ 10ರಲ್ಲಿ ಸ್ಥಾನ ಗಳಿಸಿದರು.

ಮಳೆಯಿಂದಾಗಿ ರೇಸ್ 75 ನಿಮಿಷ ತಡವಾಗಿ ಆರಂಭಗೊಂಡಿತ್ತು.

ಮೊದಲ ಲ್ಯಾಪ್‌ನ ಆರಂಭದಲ್ಲಿ ಕ್ವಾರ್ಟರರೊ ಮುನ್ನಡೆ ಸಾಧಿಸಿದ್ದರು. ಆದರೆ ಲ್ಯಾಪ್‌ನ ಕೊನೆಯ ಹಂತದಲ್ಲಿ ಒಲಿವೆರಾ ಮತ್ತು ಆಸ್ಟ್ರೇಲಿಯಾದ ಜ್ಯಾಕ್ ಮಿಲ್ಲರ್ ಮೇಲುಗೈ ಸಾಧಿಸಿದರು. ನಂತರ ಆಧಿಪತ್ಯ ಸ್ಥಾಪಿಸಿದ ಒಲಿವೆರಾ ಪ್ರಶಸ್ತಿಯತ್ತ ಮುನ್ನುಗ್ಗಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದ ಇಟಲಿಯ ಎನಿಯಾ ಬಸ್ಟಿಯಾನಿನಿ ಒದ್ದೆಯಾದ ಟ್ರ್ಯಾಕ್‌ನಲ್ಲಿ ಮೋಡ ತುಂಬಿದ ವಾತಾವರಣದಲ್ಲಿ ತೊಂದರೆ ಅನುಭವಿಸಿದರು. ಹೀಗಾಗಿ ಅವರು 11ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಕತಾರ್‌ನಲ್ಲಿ ಎರಡು ವಾರಗಳ ಹಿಂದೆ ನಡೆದಿದ್ದ ಈ ಋತುವಿನ ಮೊದಲ ರೇಸ್‌ನಲ್ಲಿ ಅವರು ಪ್ರಶಸ್ತಿ ಗೆದ್ದಿದ್ದರು.

ಹಾಕಿ: ಭಾರತಕ್ಕೆ ರೋಚಕ ಜಯ

ಭುವನೇಶ್ವರ್ (ಪಿಟಿಐ): ಕೊನೆಯ ನಿಮಿಷದಲ್ಲಿ ಮನದೀಪ್ ಸಿಂಗ್ ಗಳಿಸಿದ ಗೋಲಿನ ನೆರವಿನಿಂದ ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಅರ್ಜೆಂಟಿನಾ ಎದುರು ರೋಚಕ ಜಯ ಸಾಧಿಸಿತು.

ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 4–3 ರಿಂದ ಅರ್ಜೆಂಟಿನಾವನ್ನು ಮಣಿಸಿತು.

ಪಂದ್ಯದ 17ನೇ ನಿಮಿಷದಲ್ಲಿ ಹಾರ್ದಿಕ್ ಸಿಂಗ್ ಮೊದಲ ಗೋಲು ದಾಖಲಿಸಿದರು. ಜುಗರಾಜ್ ಸಿಂಗ್ 20 ಮತ್ತು 52ನೇ ನಿಮಿಷಗಳಲ್ಲಿ ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳನ್ನಾಗಿ ಪರಿವರ್ತಿಸಿದರು.

ಅರ್ಜೆಂಟಿನಾದ ಡೆಲ್ಲಾ ಟೊರ್ ನಿಕೊಲಸ್ (40ನೆ ನಿ), ಡಾಮಿನ್ ಥಾಮಸ್ (51ನೆ ನಿ) ಮತ್ತು ಫೆರೀರೊ ಮಾರ್ಟಿನ್ (56ನೇ ನಿ) ಗೋಲು ಗಳಿಸಿದರು. ಇದರಿಂದಾಗಿ ಸಮಬಲವಾಯಿತು. ನಂತರದ ಆಟ ಕುತೂಹಲ ಮೂಡಿಸಿತು.

ಪಂದ್ಯದಲ್ಲಿ ಇನ್ನೂ 26 ಸೆಕೆಂಡುಗಳು ಮಾತ್ರ ಬಾಕಿಯಿದ್ದಾಗ ಮನದೀಪ್ ಸಿಂಗ್ ಕೈಚಳದಿಂದಾಗಿ ಗೋಲು ದಾಖಲಾಯಿತು. ಭಾರತ ಜಯಭೇರಿ ಬಾರಿಸಿತು.

ಮನದೀಪ್ ಸಿಂಗ್

ಫುಟ್‌ಬಾಲ್ ಪಂದ್ಯ ವೇಳೆ ಗ್ಯಾಲರಿ ಕುಸಿದು 225 ಮಂದಿಗೆ ಗಾಯ

ಮಲಪ್ಪುರಂ(ಪಿಟಿಐ): ಕೇರಳದಲ್ಲಿ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಣೆಗಾಗಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಗ್ಯಾಲರಿ ಕುಸಿದು 225 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಮಲಪ್ಪುರಂ ಜಿಲ್ಲೆಯ ವಂಡೂರ್ ಸಮೀಪದ ಪೂಂಗೋಡಿನ ಶಾಲಾ ಮೈದಾನದಲ್ಲಿ ಶನಿವಾರ ರಾತ್ರಿ ಸೆವೆನ್ಸ್ ಫುಟ್‌ಬಾಲ್ ಪಂದ್ಯ ಆರಂಭಕ್ಕೂ ಮುನ್ನ ಈ ಘಟನೆ ನಡೆದಿದೆ.

ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸ್ಥಳೀಯ ಫುಟ್‌ಬಾಲ್ ಕ್ಲಬ್ ನೇತೃತ್ವದಲ್ಲಿ ಸಹಾಯಾರ್ಥ ಪಂದ್ಯ ಆಯೋಜಿಸಲಾಗಿತ್ತು.

ಸುಮಾರು 3,500 ಮಂದಿ ಪಂದ್ಯ ವೀಕ್ಷಣೆಗೆ ಆಗಮಿಸಿದ್ದರು. ಘಟನೆ ಸಂಬಂಧ ಪೊಲೀಸರು ದೂರು ದಾಖಲಿಸಿಕೊಂಡಿದ್ದು, ತನಿಖೆ ಪ್ರಾರಂಭಿಸಿದ್ದಾರೆ.

ಯುಲಿಮರ್ ರೋಜಾಸ್ ಜಿಗಿದ ಭಂಗಿ –ಎಎಫ್‌ಪಿ ಚಿತ್ರ

ವಿಶ್ವ ಒಳಾಂಗಣ ಅಥ್ಲೆಟಿಕ್ಸ್: ಉಕ್ರೇನ್‌ನ ಮರೀನಾಗೆ ಬೆಳ್ಳಿ

‘ಟ್ರಿಪಲ್’ ಚಿನ್ನ; ರೋಜಾಸ್ ದಾಖಲೆ

ಬೆಲ್‌ಗ್ರೇಡ್ (ಎಎಫ್‌ಪಿ): ವೆನೆಜುವೆಲಾದ ಯುಲಿಮರ್ ರೋಜಾಸ್ ಅವರು ವಿಶ್ವ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಮಿಂಚಿನ ಜಿಗಿತದ ಮೂಲಕ ದಾಖಲೆ ಬರೆದರು.

ಸ್ಟಾರ್ಕ್ ಅರೆನಾದಲ್ಲಿ ಭಾನುವಾರ ನಡೆದ ಟ್ರಿಪಲ್ ಜಂಪ್‌ನಲ್ಲಿ ಚಿನ್ನ ಗೆದ್ದ ಅವರು ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆ ಮುರಿದರು. ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಇದು ಅವರಿಗೆ ಮೂರನೇ ಚಿನ್ನ.

2016 ಮತ್ತು 2018ರಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದ ರೋಜಾಸ್ 15.74 ಮೀಟರ್ ದೂರ ಜಿಗಿದು ಮೊದಲಿಗರಾದರು. ಆರನೇ ಮತ್ತು ಕೊನೆಯ ಪ್ರಯತ್ನದಲ್ಲಿ ಅವರು ಈ ಸಾಧನೆ ಮಾಡಿದರು. ಈ ಹಿಂದೆ 15.43 ಮೀಟರ್ ಸಾಧನೆಯೊಂದಿಗೆ ದಾಖಲೆ ಬರೆದಿದ್ದರು.

ಎರಡು ಬಾರಿ ಹೊರಾಂಗಣ ಚಾಂಪಿಯನ್‌ಷಿಪ್‌ಗಳಲ್ಲಿ ಚಿನ್ನ ಗೆದ್ದಿರುವ ರೋಜಾಸ್ 15.67 ಮೀಟರ್ ಸಾಧನೆಯೊಂದಿಗೆ ಹೊರಾಂಗಣದಲ್ಲೂ ದಾಖಲೆ ಮಾಡಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಈ ದಾಖಲೆ ಮೂಡಿಬಂದಿತ್ತು.

ಉಕ್ರೇನ್ ಅಥ್ಲೀಟ್‌ಗೆ ಬೆಳ್ಳಿ ಪದಕ: ಉಕ್ರೇನ್‌ನ ಮರೀನಾ ಬೆಖ್ ರೊಮಾಂಚುಕ್ ಬೆಳ್ಳಿ ಪದಕ ಗೆದ್ದುಕೊಂಡರು. ಅವರು 14.74 ಮೀಟರ್ಸ್ ದೂರ ಜಿಗಿದಿದ್ದರು. ಜಮೈಕಾದ ಕಿಂಬರ್ಲಿ ವಿಲಿಯಮ್ಸ್ (14.59 ಮೀಟರ್ಸ್) ಕಂಚಿನ ಪದಕ ಗಳಿಸಿದರು. ಯುದ್ಧಪೀಡಿತ ಉಕ್ರೇನ್‌ನ ಯರೊಸ್ಲಾವ ಮಹುಚಿಕ್ ಶನಿವಾರ ಹೈಜಂಪ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದರು.

ತಜಿಂದರ್ ಪಾಲ್ ತೂರ್‌ಗೆ ನಿರಾಸೆ


ತಜಿಂದರ್ ಪಾಲ್ –ಪಿಟಿಐ ಚಿತ್ರ

ಶಾಟ್‌ಪಟ್‌ನಲ್ಲಿ ಏಷ್ಯಾದ ದಾಖಲೆ ಹೊಂದಿರುವ ಭಾರತದ ತಜಿಂದರ್ ಪಾಲ್ ಸಿಂಗ್ ತೂರ್ ಮೂರೂ ಪ್ರಯತ್ನಗಳಲ್ಲಿ ನಿರಾಸೆ ಅನುಭವಿಸಿದರು. ಇದರೊಂದಿಗೆ ಭಾರತದ ಅಥ್ಲೀಟ್‌ಗಳ ಅಭಿಯಾನ ಮುಕ್ತಾಯಗೊಂಡಿತು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ತೂರ್ ಇಲ್ಲಿ ಮೂರು ಪ್ರಯತ್ನಗಳಲ್ಲೂ ವೈಫಲ್ಯ ಕಂಡು ನಿರಾಸೆಯಿಂದ ಹೊರಬಿದ್ದರು.

ಬ್ರೆಜಿಲ್‌ನ ಡರ್ಲಾನ್ ರೊಮಾನಿ 22.53 ಮೀಟರ್ಸ್ ಸಾಧನೆಯೊಂದಿಗೆ ಚಿನ್ನದ ಪದಕ ಗೆದ್ದುಕೊಂಡರು. ಅಮೆರಿಕದ ರಯಾನ್ ಕ್ರೌಜರ್ (22.44 ಮೀ) ಬೆಳ್ಳಿ ಮತ್ತು ನ್ಯೂಜಿಲೆಂಡ್‌ನ ಥಾಮಸ್ ವಾಲ್ಶ್ (22.31 ಮೀ) ಕಂಚಿನ ಪದಕ ಗಳಿಸಿದರು.